# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ನವೆಂಬರ್, ೨೦೨೦ ಸಂಪಾದಕ : ಡಿ.ಎಸ್. ನಾಗಭೂಷಣ ಸಂಪುಟ: ೯ ಸಂಚಿಕೆ: ೧೦

ಚಂದಾ ರೂ. ೨೦೦/- (ಅಕ್ಟೋಬರ್‌ನಿಂದ ಸೆಪ್ಟಂಬರ್‌ವರೆಗೆ) ಸಂಸ್ಥೆಗಳಿಗೆ ರೂ. ೩೦೦/- ಪುಟ: ೨೦ ಬೆಲೆ: ರೂ. ೨೫/-

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ನಿಮಗೆಲ್ಲ ಕನ್ನಡ ರಾಜ್ಯೋತ್ಸವದ ಶುಭಾಶಯಗಳನ್ನು ಹೇಳಲು ಹೊರಟ ನನ್ನ ಬಾಯಿ ಕಟ್ಟುತ್ತಿದೆ. ಇಂದು ಕನ್ನಡ ಭಾಷೆಗೆ ಕನ್ನಡದ ಜನ ಮತ್ತು ಸರ್ಕಾರದಿಂದಲೇ ಒದಗುತ್ತಿರುವ ದುರ್ಗತಿಯನ್ನು ಕಂಡು; ಜೊತೆಗೆ ಈಗ ನಡೆದಿರುವ ಉಪಚುನಾವಣೆಗಳನ್ನು ಅಗತ್ಯ ಮಾಡಿದ ಹೊಲಸು ರಾಜಕಾರಣ ಈ ಸರ್ಕಾರ ನಿಜವಾಗಿಯೂ ಜನತೆಯ ಸರ್ಕಾರವೆ? ಎಂಬ ಪ್ರಶ್ನೆಯನ್ನೆತ್ತಿ ನಮ್ಮ ಯಾವ ಭಾಗ್ಯಕ್ಕೆ ಈ ರಾಜ್ಯೋತ್ಸವ ಎಂಬ ಸಿನಿಕತನಕ್ಕೆ ದೂಡುತ್ತಿದೆ. ಕರೋನಾ ನಿಯಂತ್ರಣದ ಹೆಸರಿನಲ್ಲಿ ನಡೆದಿರುವ ಲೂಟಿಯ ಜೊತೆಗೆ ದಿನನಿತ್ಯ ಪತ್ರಿಕೆಗಳಲ್ಲಿ ಬರುತ್ತಿರುವ ವಿವಿಧ ಇಲಾಖೆಗಳಲ್ಲಿನ ಭ್ರಷ್ಟಾಚಾರದ ಹಗರಣಗಳು ಇಲ್ಲೊಂದು ಜವಾಬ್ದಾರಿ ಸರ್ಕಾರವಿದೆಯೇ ಎಂಬ ಅನುಮಾನವನ್ನುಂಟು ಮಾಡುವಂತಿದೆ. ಉತ್ತರ ಕರ್ನಾಟಕದಲ್ಲಿನ ಉಗ್ರ ಪ್ರವಾಹ ಪರಿಸ್ಥಿತಿಯನ್ನೇ ನೋಡಿ. ಮನೆ ಮಠ ಮತ್ತು ಬೆಳೆ ಕಳೆದುಕೊಂಡ ಜನ ಅಸಹಾಯಕರಾಗಿ ತಮ್ಮ ವಿಧಿಯನ್ನಷ್ಟೇ ದೂಷಿಸಿಕೊಳ್ಳುವ ಸ್ಥಿತಿ ತಲುಪಿದ್ದಾರೆ. ಈ ಮಧ್ಯೆ ಆಳುವ ಪಕ್ಷದೊಳಗಿಂದಲೇ ಮುಖ್ಯಮಂತ್ರಿಗಳನ್ನು ಬದಲಾಯಿಸುವ ಸುದ್ದಿಗೆ ಕುಮ್ಮಕ್ಕು. ಯಾರಿಗೂ, ಈ ಹಿಂದೆ ಚೆನ್ನೈ ನಗರವನ್ನು ಪೂರ್ತಿ ಮುಳುಗಿಸಿದ್ದ ಮತ್ತು ಈಗ ಹೈದರಾಬಾದನ್ನೇ ಅರ್ಧ ಮುಳುಗಿಸಿರುವ ಹಾಗೂ ಮುಂದೆ ಬೆಂಗಳೂರು ಮತ್ತು ರಾಜ್ಯದ ಇತರ ನಗರಗಳಿಗೂ ಇದೇ ಭೀತಿ ಹುಟ್ಟಿಸಿರುವ ಅಕಾಲಿಕ ಮಹಾ ಮಳೆಗೆ ಕಾರಣಗಳೇನು ಎಂದು ಚಿಂತಿಸುವ ಗೋಜು ಯಾರಿಗೂ ಇದ್ದಂತಿಲ್ಲ.

ಆರು ತಿಂಗಳ ಕರೋನಾ ಉಂಟು ಮಾಡಿರುವ ಸಾವು ನೋವುಗಳು ಮತ್ತು ಬದುಕಿನ ಅಸ್ತವ್ಯಸ್ತತೆಗಳೇ ಸರ್ಕಾರಕ್ಕಿರಲಿ, ಜನ ಸಾಮಾನ್ಯರಲ್ಲಾಗಲೀ, ನಮಗೀಗ ನಾವು ಬದುಕುತ್ತಿರುವ ಈ ಭೂಗ್ರಹಕ್ಕೆ ಏಕೆ ಮತ್ತು ಏನು ಸಂಭವಿಸುತ್ತಿದೆ ಎಂಬ ತುಸು ಯೋಚನೆಯನ್ನಾಗಲೀ, ಆತಂಕವನ್ನಾಗಲೀ ಹುಟ್ಟಿಸದಿರುವಾಗ ಈ ಪ್ರವಾಹ-ಮಳೆಗಳಿಗೆಲ್ಲ ಯಾರು ತಲೆ ಕಡೆಸಿಕೊಂಡಾರು ಅಲ್ಲವೆ? ಸರ್ಕಾರಗಳೂ ಅಭಿವೃದ್ಧಿಯ ಹೆಸರಿನಲ್ಲಿ, ಜನರು ಅದರ ಸುಖಫಲಗಳನ್ನುಣ್ಣುವ ಆತುರದಲ್ಲಿ ಪ್ರಕೃತಿಗೆ ಮಾಡುತ್ತಾ ಬಂದ ಆಘಾತ-ದ್ರೋಹಗಳೇ ಈ ಕರೋನಾಗೆ ಮುಖ್ಯ ಕಾರಣವಾಗಿದೆ ಎಂಬ ಅರಿವೇ ಯಾರಿಗೂ ಮನಹೊಕ್ಕಂತಿಲ್ಲ. ಲಸಿಕೆ ಬಂದು ಎಲ್ಲ ಸರಿ ಹೋಗುತ್ತದೆ ಎಂದು ಕಾಯುತ್ತಿದ್ದೇವೆ! ಕಾಯುತ್ತಿರುವುದು ಮತ್ತೆ ಕೊಳ್ಳುಬಾಕ ಮತ್ತು ತಿನ್ನುಬಾಕ ಸಂತೆಗೆ ನೆರೆಯಲಷ್ಟೇ! ಅಭಿವೃದ್ಧಿ ಮತ್ತು ಅದರ ಸುಖಫಲಗಳ ರುಚಿ ನಮ್ಮ ಹಲ್ಲುಗಳಿಗೆ ಅಷ್ಟು ಆಳಕ್ಕೆ ಇಳಿದು ನಮ್ಮ ಪ್ರಾಕೃತಿಕ ಸಂವೇದನೆಗಳೇ ಸ್ಥಗಿತಗೊಂಡಂತಾಗಿವೆ. ನಮ್ಮ ಖಜಾನೆಯನ್ನೇ ಖಾಲಿ ಮಾಡುತ್ತಿರುವ ಕರೋನಾ ನಿಯಂತ್ರಣ ಕಾರ್ಯಕ್ರಮದಲ್ಲಿ ಸದ್ಯದ ಎಚ್ಚರಿಕೆಗಳ ಮಾತುಗಳನ್ನಾಡಲಾಗುತ್ತಿದೆಯೇ ಹೊರತು ಪ್ರಕೃತಿ ವಿಜ್ಞಾನಿಗಳು ನೀಡುತ್ತಿರುವ, ನಮ್ಮ ಗ್ರಾಹಕ ಪ್ರವೃತ್ತಿ ನಿಯಂತ್ರಣಕ್ಕೊಳಪಟ್ಟು ನಮ್ಮ ಬದುಕಿನ ಗತಿ ಲಯಗಳು ಬದಲಾಗದ ಹೊರತು ಕರೋನಾ ಎಂಬುದು ಬದಲಾದ ರೂಪಗಳಲ್ಲಿ ನಮ್ಮ ಮೇಲೆ ಅಲೆಅಲೆಯಾಗಿ ಎರಗುತ್ತಲೇ ಇರುತ್ತದೆ ಎಂಬ ಎಚ್ಚರಿಕೆಯ ಮಾತುಗಳಿಗೆ ಜಾಗವೇ ಇಲ್ಲದಾಗಿದೆ. ಕಾರಣ, ಈ ಎಚ್ಚರಿಕೆಯ ಮಾತುಗಳನ್ನು ಕೇಳಿದರೆ ಸರ್ಕಾರಗಳು ಹೇಗೆ ಉಳಿದಾವು? ಹಾಗೇ, ಒಂದಲ್ಲ ಒಂದು ರೂಪದಲ್ಲಿ ಈ ಭೂಮಿಯನ್ನು ತಿಂದು ಬದುಕುತ್ತಾ ಈ ಸರ್ಕಾರಗಳನ್ನು ಪೋಷಿಸುತ್ತಿರುವ ಜಾಗತಿಕ ವ್ಯಾಪಾರಿ ಹಿತಾಸಕ್ತಿಗಳು ಹೇಗೆ ಉಳಿದಾವು? ನಮ್ಮ ಮೋದಿಯವರು ಜನರ ಸರಾಗ ಮತ್ತು ಸುಖಮಯ ಬದುಕಿಗೆಂದೇ ನಮ್ಮ ವಿಮಾನ ನಿಲ್ದಾಣಗಳಿಂದ ಹಿಡಿದು, ನಮ್ಮ ಸ್ಥಳೀಯ ವಿವೇಕ-ವ್ಯವಹಾರಗಳ ಸುಳಿವೂ ಉಳಿಯದಂತೆ ನಮ್ಮ ಹೊಲ ಗದ್ದೆಗಳನ್ನೂ, ಅವುಗಳ ಫಸಲುಗಳ ಮಾರಾಟವನ್ನೂ ಈ ಜಾಗತಿಕ ವ್ಯಾಪಾರಿಗಳ ವ್ಯವಹಾರಗಳಿಗೆ ತೆರೆಯುತ್ತಿರುವಾಗ ಯಾರಿಗೆ ಇದನ್ನೆಲ್ಲ ಹೇಳುವುದು? ಇನ್ನೇನು ಮಾಜಿ ಆಗುವ ಹೆಚ್ಚಿನ ಸಂಭವ ಇರುವ ಅಮೆರಿಕಾದ ಅಧ್ಯಕ್ಷ ಟ್ರಂಪೇ ಇದಕ್ಕೆಲ್ಲ ನಮಗೆ ಜಾಗತಿಕ ಮಾದರಿಯಲ್ಲವೆ? ಎಷ್ಟಾದರೂ ಇತ್ತೀಚೆಗಷ್ಟೆ ತಮ್ಮೂರಲ್ಲಿ 'ನಮಸ್ತೆ ಟ್ರಂಪ್' ಹಬ್ಬ ಮಾಡಿದ ನಮ್ಮ ಪ್ರಧಾನಿ ಅವರ ಅಭಿಮಾನಿಯಲ್ಲವೆ?

ಆದರೆ ಮೋದಿಯವರ ಈ ನಾಯಕತ್ವದ ನಿಜ ಬಂಡವಾಳ ಇತ್ತೀಚಿನ ಅಂತಾರಾಷ್ಟ್ರೀಯ ಹಣಕಾಸು ನಿಧಿ(ಐಎಂಎಫ್)ಯ ಆರ್ಥಿಕ ಸಮೀಕ್ಷೆಯಿಂದ ಬಯಲಾಗಿದೆ. ಈ ಹಣಕಾಸು ವರ್ಷದ ಮೊದಲು ತ್ರೈಮಾಸಿಕದಲ್ಲಿ ನಮ್ಮ ಆರ್ಥಿಕತೆ ಸುಮಾರು ಶೇ. ೩೦ರಷ್ಟು ಕುಸಿದಿದೆ ಎಂದು ಸರ್ಕಾರಿ ಆರ್ಥಿಕ ತಜ್ಞರೇ ಹೇಳುತ್ತಿರುವ ಹೊತ್ತಿನಲ್ಲಿ ಈ ಐಎಂಎಫ್ ಸಮೀಕ್ಷೆ ಹೊರಬಿದ್ದಿದ್ದು ನಮ್ಮ ಆರ್ಥಿಕತೆ ಈ ಹಣಕಾಸು ವರ್ಷದಲ್ಲಿ ಶೇ ಹತ್ತರಷ್ಟು ಕುಗ್ಗಲಿದೆ ಎಂಬ ಮುನ್ಸೂಚನೆ ನೀಡಿದೆ. ಇದು ಕರೋನಾ ಕಾರಣದಿಂದಾದ ಕುಸಿತವಾಗಿರದೆ ಕಳೆದ ಐದು ವರ್ಷಗಳ ಅದಕ್ಷ ಆರ್ಥಿಕ ಆಡಳಿತದ ಫಲವಾಗಲಿದೆ ಎಂದೂ ಹೇಳಿದೆ. ಏಕೆಂದರೆ ಕರೋನಾದಿಂದ ನಮ್ಮಷ್ಟೇ ಬಾಧಿತವಾದ ಪಕ್ಕದ ಬಂಗ್ಲಾ ದೇಶ ಇದೇ ಅವಧಿಯಲ್ಲಿ ಶೇ ೪ಷ್ಟು ಆರ್ಥಿಕ ಪ್ರಗತಿ ಸಾಧಿಸಲಿದ್ದು ಅದು ದೇಶದ ಪ್ರಜೆಯ ತಲಾ ಆದಾಯ ವಿಷಯದಲ್ಲೂ ನಮ್ಮನ್ನು ಮೀರಿಸಲಿದ್ದು ಭಾರತವನ್ನು ದ.ಏಷ್ಯಾ ದೇಶಗಳ ಪೈಕಿ ಶ್ರೀಲಂಕಾ, ಮಾಲ್ಡೀವ್ಸ್ ಮತ್ತು ಬಂಗ್ಲಾದೇಶಗಳಿಗಿಂತ ಕೆಳಕ್ಕೆ ತಳ್ಳುತ್ತದೆ. ಹೀಗಾಗಿ ಮೋದಿ ಸರ್ಕಾರಕ್ಕೆ ಹೇಳಿಕೊಳ್ಳಲು ಉಳಿದಿರುವುದು ಪಾಕಿಸ್ಥಾನ ನಮ್ಮನಿನ್ನೂ ಹಿಂದಿಕ್ಕಿಲ್ಲ ಎಂಬ ಹೆಮ್ಮೆ ಮಾತ್ರ. ಅವರ ಭಕ್ತರು ಇದನ್ನೇ ಒಂದು ಸಾಧನೆ ಎಂದು ಘೋಷಿಸಿದರೂ ಆಶ್ಚರ್ಯವಿಲ್ಲ. ಆದರೆ ಗಮನಿಸಬೇಕಾದ ಮುಖ್ಯ ಅಂಶವೆಂದರೆ, ಪೌರತ್ವ ತಿದ್ದುಪಡಿ ಕಾಯಿದೆ ಚಳುವಳಿ ಸಂದರ್ಭದಲ್ಲಿ ಯಾವ ದೇಶವನ್ನು ಮೋದಿ ಸರ್ಕಾರ ನಿರಾಶ್ರಿತರ ದಾಳಿಗೆ ಕಾರಣವಾದ ದಟ್ಟ ದರಿದ್ರರ ದೇಶವೆಂದು ಕರೆದು ಅವಮಾನಿಸಿ ಅದರ ಸ್ನೇಹವನ್ನು ಕಳೆದುಕೊಂಡಿತ್ತೋ ಆ ಬಂಗ್ಲಾದೇಶ ಜಾಗತಿಕ ಹಸಿವು, ಲಿಂಗ ನ್ಯಾಯ, ರೋಗ ನಿರೋಧ, ಶಿಶುಮರಣ ಪ್ರಮಾಣ, ಒಟ್ಟಾರೆ ಸಂತೋಷ ಈ ಎಲ್ಲ ಕ್ಷೇತ್ರಗಳ ಸೂಚ್ಯಂಕಗಳಲ್ಲಿ ನಮ್ಮನ್ನು ಹಿಂದಿಕ್ಕಿ ನಮ್ಮ ಮುಖಕ್ಕೆ ನಮ್ಮದೇ ಕನ್ನಡಿ ಹಿಡಿದಿದೆ. ಇದು ನಮಗೆ ನಿಜವಾದ ರಾಷ್ಟ್ರೀಯ ಮುಜುಗರದ ಸಂದರ್ಭ.

ಕಳೆದ ಐದು ವರ್ಷಗಳ ಈ ಆರ್ಥಿಕ ಅವನತಿಗೆ ಆರ್ಥಿಕ ತಜ್ಞರು ಗುರುತಿಸುವ ಎರಡು ಮುಖ್ಯ ಕಾರಣಗಳೆಂದರೆ ಮೋದಿಯವರು ಯಾವ ಆರ್ಥಿಕ ಸಮಾಲೋಚನೆಯಿಲ್ಲದೆ ಏಕಾಏಕಿ ಘೋಷಿಸಿದ ನೋಟು ರದ್ದತಿ ನಿರ್ಧಾರ ಮತ್ತು ಯಾವ ಪೂರ್ವಸಿದ್ಧತೆ ಮತ್ತು ಮುನ್ನೆಚ್ಚರಿಕೆಗಳಿಲ್ಲದೆ ಮಾಡಿದ ಲಾಕ್‌ಡೌನ್ ಘೋಷಣೆ. ಇವು ಸ್ವಕೇಂದ್ರಿತ ನಾಯಕನೊಬ್ಬನ ಮಹಾ ದೌರ್ಬಲ್ಯಗಳಷ್ಟೆ. ವಿಷಾದದ ಸಂಗತಿ ಎಂದರೆ ಇವರಿಂದಾಗಲೀ, ಇವರ ಬೆಂಬಲಿಗರಿಂದಾಗಲೀ, ಇವುಗಳ ಬಗ್ಗೆ ಪಶ್ಚಾತ್ತಾಪದ ಒಂದು ಒಂದು ದನಿಯೂ ಇಲ್ಲ. ಹಾಗೆ ನೋಡಿದರೆ ಈ ದಿಢೀರ್ ಲಾಕ್‌ಡೌನ್ ಘೋಷಣೆಯಿಂದಾಗಿಯೇ ಕಾರ್ಮಿಕರ ದಾರುಣವಾದ ಮಹಾವಲಸೆ ಆರಂಭವಾಗಿ ಕರೋನಾ ದೇಶದಾದ್ಯಂತ ವ್ಯಾಪಿಸಿದ್ದು ಎಂಬ ವರದಿಯೂ ಇದೆ.

ಆದರೆ ಇದಕ್ಕೆಲ್ಲ ಈ ಸರ್ಕಾರದ ಉತ್ತರವೆಂದರೆ ಹೀಗೆ ಮಾತಾಡುವವರೆಲ್ಲರ ವಿರುದ್ಧ ತನ್ನ ವಶದಲ್ಲಿರುವ ತನಿಖಾ ಸಂಸ್ಥೆಗಳ ಮೂಲಕ ದೇಶದ್ರೋಹದ ಮೊಕದ್ದಮೆಗಳನ್ನು ಹೂಡಿ ವರ್ಷಗಟ್ಟಲೆ ಸೆರೆಮನೆಯಲ್ಲಿ ಕೊಳೆಸುವುದು. ಬಹುರಾಷ್ಟ್ರೀಯ ಕಂಪನಿಗಳ ಆಕ್ರಮಭದ ವಿರುದ್ಧ ಆಧಿವಾಸಿಗಳ ರಕ್ಷಣೆಗೆ ನಿಂತಿದ್ದ ಪ್ರಸಿದ್ಧ ಸಾಮಾಜಿಕ ಕಾರ್ಯಕರ್ತರಾದ ಸುಧಾ ಭಾರದ್ವಾಜ್, ಗೌತಂ ನವಲತಾ ಮತ್ತು ದಲಿತ ಬುದ್ಧಿಜೀವಿ ಆನಂದ್ ತೇಲ್ತುಂಬ್ಡೆ ಮುಂತಾದವರನ್ನು 'ನಗರ ನಕ್ಸಲ್' ಎಂಬ ಆರೋಪದಡಿಯ ವಿಚಾರಣಾಹೀನ ದೀರ್ಘ ಸೆರೆವಾಸ ಇದಕ್ಕೊಂದು ಉದಾಹರಣೆ. ಇನ್ನು ನಮ್ಮ ನ್ಯಾಯಾಂಗ ಯಾವ ಸ್ಥಿತಿ ಮುಟ್ಟಿದೆ ಎಂಬುದರ ಸಾಕ್ಷಿ ಎಂಬಂತೆ ಬಾಬ್ರಿ ಮಸೀದಿ ಧ್ವಂಸ ಪ್ರಕರಣದ ತೀರ್ಪು ಬಂದಿದೆ. ಸರ್ಕಾರದ ಏಜೆಂಟರಂತಾಗಿರುವ ದೇಶದ ತನಿಖಾ ಸಂಸ್ಥೆಗಳ ರಾಜಕೀಯೀಕರಣವೂ ಇದಕ್ಕೆ ಕಾರಣವಾದಂತಿದೆ. ಹೀಗಿರುವಾಗ ಮೋದಿ ನಂತರದ ನಾಯಕತ್ವದ ಸ್ವರೂಪದ ಪ್ರತೀಕದಂತಿರುವ ಉ.ಪ್ರ.ದ ಮುಖ್ಯಮಂತ್ರಿ ಯೋಗ ಆದಿತ್ಯನಾಥರ ಆಡಳಿತದಲ್ಲಿ ಮತ್ತೆ ಮತ್ತೆ ಹತ್ರಾಸ್ ಪ್ರಕರಣಗಳು ಮತ್ತು ಪೋಲೀಸ್ ನಿಯೋಜಿತ ಕೊಲೆಗಳು ನಡೆಯುತ್ತಿರುವುದರಲ್ಲಿ ಆಶ್ಚರ್ಯವೇನು?

**ಸಂಪಾದಕ**

# ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ನಮ್ಮ ಪ್ರಜಾಪ್ರಭುತ್ವದ ಇಂದಿನ ಸ್ಥಿತಿಯ ಬಗ್ಗೆ ವಿಶೇಷ ಬೆಳಕು ಚೆಲ್ಲುವಕ್ಟೋಬರ್ ಸಂಚಿಕೆಯ ಸಂಪಾಶದಕೀಯ ನಮ್ಮನ್ನು ವಿಚಾರಕ್ಕೆ ಹಚ್ಚುವಂತಹ ತರ್ಸ್ಕಿ ಬರವಣಿಗೆ. ಸಂಚಿಕೆಯ ಇತರ ಲೇಖನಗಳೂ ಎಂದಿನಂತೆ ತುಂಬ ಪ್ರಬುದ್ಧವಾಗಿದ್ದು ಮೌಲಿಕವೆನಿಸುತ್ತವೆ,

**–ವೆಂಕಟರಮಣ ಐತಾಳ,** ಹೆಗ್ಗೋಡು

ಕಳೆದ ಸಂಚಿಕೆಯಲಗಲಿ ವಾಣಿಯವರ 'ಗಾಂಧಿ ಕಥನ ': ಕಥೆ ಹೇಳಿದ ಅನುಭವದ ಲೇಖನ ಓದಿ ತುಂಬಾ ಖುಷಿಯಾಯಿತು. ಕಥೆ ಕೇಳುವ ಮಕ್ಕಳೊಂದಿಗೆ ಕುಳಿತ ಅವರ ಛಾಯಾಚಿತ್ರವೇ ಕಣ್ಣಂಚುಗಳನ್ನು ತೇವಗೊಳಿಸಿದವು. ಈ ಕೃತಿಯ ಪ್ರತಿಯೊಂದು ಪುಟ ಹಾಗೂ ಪ್ಯಾರಾಗಳು ನಮ್ಮನ್ನು ಗಾಂಧಿಯುಗದ ರಸದೌತಣವನ್ನು ಉಣಬಡಿಸುತ್ತವೆ. ಇಲ್ಲಿ ಉಲ್ಲೇಖಿಸಿದ ಪ್ರಸಂಗಗಳ ನವಿರಾದ ನಿರೂಪಣೆಗಳು ನಮ್ಮನ್ನು ಚಿಂತನೆಗಳ ಆಳಕ್ಕೆ ಕರೆದುಕೊಂಡು ಹೋಗುತ್ತವೆ. ವಾಣಿಯವರ ಅಭಿಪ್ರಾಯಗಳು ಅಕ್ಷರಶಃ ದಿಟವಾಗಿವೆ.

**–ಮಹಾಂತೇಶ ಓಶಿಮಠ, ಕೈಗಾ**

ಅಕ್ಟೋಬರ್ ಸಂಚಿಕೆಯಲ್ಲಿ ಪ್ರಕಟವಾಗಿರುವ ಪೋಲೆಂಡ್‌ನ ಮಾರಿಷ್ ಫ್ರೀಡ್‌ಮನ್ ಕುರಿತ ಜೆ.ಎಸ್ ಸದಾನಂದ ಅವರ ಲೇಖನ ಅಚ್ಚರಿ ಹುಟ್ಟಿಸುವಂತಿದೆ, ಬಹುಜನರಿಗೆ ಗೊತ್ತಿರದ ಮತ್ತು ಪ್ರಚಾರ ಬಯಸದ ಈ ಸಂತಶ್ರೇಷ್ಠನನನ್ನು ಪರಿಚಯಿಸಿ ಪತ್ರಿಕೆ ಬಹು ದೊಡ್ಡ ಕೆಲಸ ಮಾಡಿದೆ. ಫ್ರೀಡ್‌ಮನ್ ಔಂಧ್ ಪ್ರಾಂತ್ಯದ ಮಹಾರಾಜನನ್ನೂ ಪ್ರಾಂತ್ಯವನ್ನು ಸ್ವರಾಜ್ಯವನ್ನಾಗಿ ಮಾಡಲು ಒಪ್ಪಿಸಿ ಗಾಂದಿಯವರ ಬಳಿ ಕರೆದುಕೊಂಡು ಹೋದಾಗ , ಅವರು ಆಡಿದ 'ಪ್ರಾಂತ್ಯದ ಜನರನ್ನು ಮಾನಸಿಕವಾಗಿ ತಯಾರು ಮಾಡುವವರೆಗೆ ಅವರಿಗೆ ಅಧಿಕಾತರ ಹಸ್ತಾಂತರ ಮಾಡಿ ಪ್ರಯೋಜನವಿಲ್ಲ.' ಎಂಬ ಮಾತು ಇಂದಿನ ಗ್ರಾಮೀಣ ಜನರ ಬಹುಪಾಲು ಸಮಸ್ಯೆಗೆ ಪರಿಹಾರವಿದ್ದಂತಿದೆ. ಇದೇ ಲೇಖನದಲ್ಲಿ ರಮಣ ಮಹರ್ಷಿ, ನಿಸರ್ಗದತ್ತ ಮಹಾರಾಜ್ ಮತ್ತುಯ ದಲೈಲಾಮಾ ಅವರ ಬಗ್ಗೆ ಸಂಕ್ಷಿಪ್ತವಾಗಿಯಾದರೂ ತಿಳಿಸಿರುವುದು ಅವರ ಬಗ್ಗೆ ಹೆಚ್ಚು ಅರಿಯಲು ಓದುಗರನ್ನು ಪ್ರೇರೇಪಿಸುವಂತಿದೆ.

ಇನ್ನು 'ಗಾಂಧಿ ಕಥನ' ಓದಿ ವಾಣಿ ಪೆರಿಯೋಡಿಯವರು ಮಾಡಿರುವ ಅದರ ಸಾರಾಂಶ ಪ್ರಚಾರ ಮತ್ತು ಚರ್ಚೆಯ ವಿನೂತನ ಪ್ರಯೋಗ ಕುರಿತ ಲೇಖನ ಕುತೂಹಲಕಾರಿಯಾಗಿದೆ. 'ಗಾಂಧಿ ಕಥನ' ಜನರಲ್ಲಿ ಗಾಂಧಿ ಬಗ್ಗೆ ಹೀಗೆ ಹೆಚ್ಚಿನ ಆಸಕ್ತಿ ಹುಟ್ಟಿಸುತ್ತಿರುವುದು ಕೃತಿಯ ಸಾರ್ಥಕತೆಯನ್ನು ಹೆಚ್ಚಿಸಿದೆ ಎಂದು ನನ್ನ ಅಭಿಪ್ರಾಯ

**–ಜಿ.ಬಿ. ಶಿವರಾಜು,** ಬೆಂಗಳೂರು

ಜೆ. ಎಸ್. ಸದಾನಂದ ಅವರ "ಅಪರೂಪದ ಅಧ್ಯಾತ್ಮ ಜೀವಿ ಮಾರಿಷ್ ಫ್ರೀಡ್ಮನ್" ಲೇಖನ ನನಗೆ ತುಂಬ ಇಷ್ಟವಾಯಿತು. ಅವರು ಗಾಂಧಿಯವರಿಂದ ಪ್ರಭಾವಿತರಾಗಿದ್ದು, ಜೀವನದುದ್ದಕ್ಕೂ ತಾವು ನಂಬಿದ್ದ ತತ್ತ್ವ ಸಿದ್ಧಾಂತಗಳಲ್ಲಿ ಯಾರೊಂದಿಗೂ ರಾಜಿಯಾಗದೆ, ಎಲ್ಲರಲ್ಲೂ ಸಮಾನತೆಯನ್ನು ತೋರಿದ ರೀತಿ, ಸ್ವತಂತ್ರಪುರ ಎಂಬಲ್ಲಿ ಕೈದಿಗಳನ್ನು ಪರಿವರ್ತಿಸಿದ ಬಗೆ, ಅದರ ಬಗ್ಗೆ ಪ್ರಚಾರ ನೀಡಲು ಖಡಾಖಂಡಿತವಾಗಿ ನಿರಾಕರಿಸಿದ್ದು, ರಮಣ ಮಹರ್ಷಿಗಳ ಒಡನಾಟ, ಇವೆಲ್ಲ ನಿಜಕ್ಕೂ ರೋಮಾಂಚನಗೊಳ್ಳುವಂತೆ ಮಾಡಿತು. ಇಂತಹ ಅಪರೂಪದ ಅಧ್ಯಾತ್ಮ ಜೀವಿಯ ಬದುಕಿನ ಕಥೆ ನಮಗೆ ಇದುವರೆವಿಗೂ ಗಮನಕ್ಕೆ ಬರಲಿಲ್ಲವಲ್ಲ ಎಂದು ಬೇಸರವಾಯಿತು. ಇನ್ನು ಇದೇ ಲೇಖನದಲ್ಲಿ ಫ್ರೀಡ್‌ಮನ್‌ರ ಶುಶ್ರೂಷೆಗೈಯುತ್ತಿದ್ದ ದಾದಿಯೊಬ್ಬಳ ಕನಸಿನಲ್ಲಿ ರಂನ ಮಹರ್ಷಿಗಳು ಕಾಣಿಸಿಕೊಳ್ಳುವ ಪ್ರಸಂಗ ರಮಣರ ದೇಹತ್ಯಾಗದ ಸಮಯದಲ್ಲಿ ದುಃಖಿಸುತ್ತಿದ್ದ ಭಕ್ತರನ್ನು ನಾನೆಲ್ಲಿ ಹೋಗುವೆ? ನಿಮ್ಮ ಬಳಿಯೇ ಇರುವೆ' ಎಂದು ಸಮಾಧಾನಿಸಿದ ಮಾತನ್ನು ನೆನಪಿಗೆ ತರುತ್ತದೆ. ಈ ಬಗೆಯ ಮಹನೀಯರು ಪರಿಚಯ ಮಾಡಿಸಿದ್ದಕ್ಕಾಗಿ ಪತ್ರಿಕೆಗೆಧನ್ಯವಾದಗಳು.

**–ಎನ್.ಆರ್, ಬಾಲಸುಬ್ರಮಣ್ಯ,** ನೆರಳೂರು

ಅಕ್ಟೋಬರ್ ಸಂಚಿಕೆ ವಿಚಾರ ಪ್ರಚೋದಕವಾಗಿತ್ತು. ಗಾಂಧಿ ಧರ್ಮ, ಗಾಂಧಿ ಕಥನ ಹಾಗೂ ಗಾಂಧಿ ಕನಸನ್ನು ನನಸು ಮಾಡಿದ ಮಾರಿಷ್ ಫ್ರೀಡ್ಮನ್ ಅವರ ಲೇಖನಗಳು ಪ್ರುದ್ಧವಗಿದ್ದವು. ಎಲ್ಲಕ್ಕಿಂತ ಮಿಗಿಲಾಗಿ ನ್ಯಾ. ಏ ಪಿ ಶಾ ರವರ ನಿರಂಕುಶ ಪ್ರಭುತ್ವದ ಕಡೆಗೆ ಲೇಖನ ಚಿಂತೆಗೀಡು ಮಾಡುವಂತೆ ಇತ್ತು. ೧೯೭೭ರ ನಿರಂಕುಶ ಪ್ರಭುತ್ವವೇ ಇಂದೂ ಮುಂದುವರಿಯುತ್ತಿರುವ ಬಗೆ ಚಿಂತೆಗೀಡು ಮಾಡುತ್ತದೆ.

**–ಎಂ ಜಿ ಈಶ್ವರಪ್ಪ,** ದಾವಣಗೆರೆ

'ಹೊಸ ಮನುಷ್ಯ' ವಿಚಾರ ಪ್ರಚೋದಕ ಲೇಖನಗಳಳನ್ನಲ್ಲದೆ ಅನುಪಮಾ ಪ್ರಸಾದರಂತಹ ಕಥೆಗಾರ್ತಿಯ ಮನಮಿಡಿಯುವ ಕಥೆ ಹಾಗೂ ಸಿದ್ದಲಿಂಗಯ್ಯ ಮತ್ತು ವೈದೇಹಯವರಂತಹ ಕವಿಗಳ ಭಾವಪೂರ್ಣ ಕವಿತೆಗಳನ್ನೂ ಪ್ರಕಟಿಸುತ್ತಾ ನಮ್ಮ ಮನಸ್ಸನು ಸರ್ವರೀತಿಯಿಂದಲೂ ಸಂಪನ್ನಗೊಳಿಸುತ್ತಿದೆ, ಸಂಪಾದಕರಿಗೆ ನನ್ನ ಧನ್ಯವಾದಗಳು.

**–ಎನ್. ವರಲಕ್ಷ್ಮಿ,** ಚಿತ್ರದುರ್ಗ

ಪ್ರಸನ್ನ, ಶಿಕ್ಷಣ ಮಾಧ್ಯಮ ಮತ್ತು ಭೈರಪ್ಪನವರನ್ನು ಕುರಿತ ನಿಮ್ಮ ಮೂರು ಟಿಪ್ಪಣಿಗಳು ಅದ್ಭುತವಾಗಿವೆ. ವಂದನೆಗಳು.

**–ಸ್ವಾಮಿ ಆನಂದ್,** ಮೈಸೂರು

## ನಮ್ಮ ಪುಟ್ಟರಾಜು ಇನ್ನಿಲ್ಲ



**ಕ**ಳೆದ ಸೆಪ್ಟಂಬರ್ 27ರ ಮಧ್ಯಾಹ್ನದ ಹೊತ್ತಿಗೆ ನಮ್ಮ ಪುಟ್ಟರಾಜು ಇನ್ನಿಲ್ಲ ಎಂದಾಗ ನಮ್ಮ ಗೆಳೆಯರಾರೂ ನಂಬುವ ಸ್ಥಿತಿಯಲ್ಲಿ ಇರಲಿಲ್ಲ. ದಾವಣಗೆರೆಯ ಯುವ ಶಕ್ತಿಯ ಪ್ರತೀಕದಂತಿದ್ದ ಈ ಐವತ್ತರ ಚಿರ ಯುವಕ ಸದಾ ಕ್ರಿಯಾಶೀಲ. ಈ ಹಿಂದಿನ ದಿನವಷ್ಟೇ ನಾನು ಅವರ ಇತ್ತೀಚಿನ ಚಟುವಟಿಕೆಗಳ ಬಗ್ಗೆ ಮಾತನಾಡಿದ್ದೆ. ಯುವಶಕ್ತಿಗಾಗಿಯೇ ಹಲವು ಸಂಸ್ಥೆ–ವೇದಿಕೆಗಳನ್ನು ಕಟ್ಟಿದ್ದ ಮತ್ತು ಹಲವು ಕನಸುಗಳನ್ನು ಕಂಡಿದ್ದ ಬಹುಮುಖ ಆಸಕ್ತಿಗಳ ಈ ಕಿರಿಯ. ಹತ್ತು ವರ್ಷಗಳ ಹಿಂದೆ ನಮ್ಮ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವು ಕುಪ್ಪಳ್ಳಿಯಲ್ಲಿ ಆಯೋಜಿಸಿದ್ದ ಮೊದಲ ಸಮಾಜವಾದಿ ಶಿಬಿರಕ್ಕೆ ಶಿಬಿರಾರ್ಥಿಯಾಗಿ ಬಂದಿದ್ದ. ಶಿಬಿರದಲ್ಲಿ ತಮ್ಮ ಸಕ್ರಿಯ ಭಾಗವಹಿಸುವಿಕೆಯ ಮೂಲಕ ನನ್ನ ಗಮನ ಸೆಳೆದಿದ್ದ ಪುಟ್ಟರಾಜು ಮುಂದಿನ ಐದಾರು ವರ್ಷಗಳ ಕಾಲ ನಮ್ಮ ಈ ಪ್ರತಿಷ್ಠಾನದ ಟ್ರಸ್ಟೀಯೂ ಆಗಿ ಕಾರ್ಯ ನಿರ್ವಹಿಸಿದ್ದರು. ಈ ಅವಧಿಯಲ್ಲಿ ಅವರು ಕೊಂಡಜ್ಜಿಯ ಸ್ಕೌಟ್ಸ್ ಮತ್ತು ಗೈಡ್ಸ್ ಆವರಣದಲ್ಲಿ ಪ್ರಾಯೋಜಿಸಿದ್ದ ಸಮಾಜವಾದಿ ಶಿಬಿರ ಅವರ ಸಂಘಟನಾ ಶಕ್ತಿ ಮತ್ತು ಕ್ರಿಯಾಶೀಲತೆಗೆ ಸಾಕ್ಷಿಯಾಗಿತ್ತು. ಒಂದು ನಿರ್ದಿಷ್ಟ ಅವಧಿಯ ನಂತರ ಟ್ರಸ್ಟೀಗಳು ಬದಲಾಗುವ ರೂಢಿಗೆ ತಕ್ಕಂತೆ ಅವರು ನಂತರ ಟ್ರಸ್ಟೀಯಾಗಿರದಿದ್ದರೂ, ಪ್ರತಿಷ್ಠಾನದ ಭಾಗವಾಗಿಯೇ ಅದರ ಎಲ್ಲ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸಿದ್ದರು.

ದಾವಣಗೆರೆ ಬಳಿಯ ದೊಗ್ಗಳ್ಳಿ ಗೌಡ್ರ ಮನೆತನದ ಈ ಹುಡುಗ ಗೇಣಿದಾರರಿಗೆ ತನ್ನ ಪಾಲಿನ ಭೂಮಿಯನ್ನೆಲ್ಲ ಬರೆದುಕೊಟ್ಟು ದಾವಣಗೆರೆ ಸೇರಿದ ತಮ್ಮ ತಂದೆಯ ಸಮಾಜವಾದಿ ಆದರ್ಶಗಳ ಎರಕದಲ್ಲಿ ಬೆಳೆದು ಯುವಕನಾದವರು. ಕಾನೂನು ಪದವೀಧರರಾದರೂ ಉದ್ಯೋಗವನ್ನರಸಿ ಹೋಗದೆ ಜೀವನೋಪಾಯಕ್ಕಾಗಿ ಬಿಡಿ ಉದ್ಯೋಗಗಳನ್ನು ಮಾಡುತ್ತಲೇ ಯುವಜನರ ದಂಡನ್ನು ಸಂಘಟಿಸಿ ಅವರಿಗೆ ವಿವಿಧ ವೃತ್ತಿ ತರಬೇತಿ ಮತ್ತು ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿದ್ದರು. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ಬಾಲ ವಿಕಾಸ ಅಕಾಡೆಮಿ, ಬಾಲಭವನ, ಜಾನಪದ ಪರಿಷತ್ ಹೀಗೆ ಹಲವು ವೇದಿಕೆಗಳಲ್ಲಿ ಅವರು ಕಾರ್ಯತತ್ಪರರಾಗಿದ್ದರು. ದಾವಣಗೆರೆಯಲ್ಲಿ ಜೆ.ಹೆಚ್. ಪಟೇಲ್ ಹೆಸರಿನ ಮ್ಯಾನೇಜ್‌ಮೆಂಟ್ ಕಾಲೇಜನ್ನು ಆರಂಭಿಸಿ ಅದನ್ನು ಆರ್ಥಿಕವಾಗಿ ಹಾಗೂ ಹೀಗೂ ಸರಿದೂಗಿಸಿಕೊಂಡು ನಡೆಸಿಕೊಂಡು ಹೋಗುತ್ತಿದ್ದರು.

ಮಿತಭಾಷಿಯಾದ ಪುಟ್ಟರಾಜು ಸ್ವಭಾವತಃ ಅಂತರ್ಮುಖಿ. ಹಾಗಾಗಿಯೇ ಅವರು ಹೃದಯಾಘತಕ್ಕೆ ಒಳಗಾಗಿ ಯಾರನ್ನೂ ಕೇಳದೆ ಯಾರಿಗೂ ಹೇಳದೆ ಒಂದು ಮುಂಜಾನೆ ಎಲ್ಲರನ್ನೂ ತೊರೆದು ಹೋಗಿಬಿಟ್ಟರು. ಆದರೆ ಅವರ ನೆನಪು ಅವರನ್ನು ಬಲ್ಲವರಿಂದ ಬಹುಬೇಗ ಮಾಸದು. ಅವರ ಜೀವನ ಸಂಗಾತಿ ಪ್ರತಿಭಾ ಮತ್ತು ಅವರ ಇಬ್ಬರು ಪುಟ್ಟ ಮಕ್ಕಳಿಗೆ ನೈತಿಕ ಬೆಂಬಲವಾಗಿ ನಿಲ್ಲುವ ಒಂದು ಯುವಪಡೆಯೇ ಇದೆ. ಅದೇ ಪುಟ್ಟರಾಜು ತಮ್ಮ ಕುಟುಂಬಕ್ಕೆ ಗಳಿಸಿಕೊಟ್ಟು ಹೋಗಿರುವ ಆಸ್ತಿ.

**–ಡಿಎಸ್ನೆನ್**

## 'ಸೆಕ್ಯುಲರಿಸಂ' ಎಂಬ ಅಧರ್ಮ; ಮುಂದುವರೆದ 'ಚರ್ಚೆ'

'ಸೆಕ್ಯುಲರಿಸಂ' ಎಂದರೆ 'ಲೋಕಾಯತ ಎನ್ನಬಹುದು. ಲೋಕಾಯತಿಕರು ಎಂದರೆ ಲೌಕಿಕವೇ ಸತ್ಯ– ಎನ್ನುವವರು. ಧರ್ಮವಾಗಲಿ, ಇತರ ಯಾವುದೇ ಆಗಲಿ... ಅವೆಲ್ಲವೂ ಲೌಕಿಕದ್ದೆ ಟಿಸಿಲುಗಳಷ್ಟೆ –ಇನ್ನೇನಿಲ್ಲ– ಎಲ್ಲ ಮನೋಲಹರಿಗಳ ಮೂಲಬೇರು ಲೌಕಿಕವೇ ಎನ್ನುವವರು.

ಮಾನವರೆಲ್ಲ ಒಂದು ಎನ್ನುವುದು ಹೌದಾದರೆ – ತನ್ನ ಅನುಭವವನ್ನು ಕನಿಷ್ಠ ಇನ್ನೊಬ್ಬನಲ್ಲಿ , ಇನ್ನೊಬ್ಬಳಲ್ಲಿ ಸಂಕ್ರಮಿಸದೆ –ಯಾರಿಗೇ ಆದರೂ – ದೇವರಿಗೇ ಆದರೂ ನಿಸ್ತಾರವಿಲ್ಲ. ತನಗೊಂದು ನಿಮಿತ್ತ ಬೇಕಿದೆ ಎಂದು ಭಗವಂತ ಕೃಷ್ಣ

(೧೨ನೇ ಪುಟಕ್ಕೆ

# ಜಾಗತಿಕ ಕರೋನಾ ತಡೆ ಕಾರ್ಯಾಚರಣೆ ತಂದೊಡ್ಡುತ್ತಿರುವ ಮಾನವ ದುರಂತ

-ವಂದನಾ ಶಿವ



ಚಿತ್ರ ಗುಜ್ಜಾರ್

**ಕರೋನಾ ಸಾಂಕ್ರಾಮಿಕದ ಹಿಂದಿರುವ ಕಾರಣವೇನು ಎಂಬುದನ್ನು ಜನರಿಗೆ ಬಿಡಿಸಿ ಹೇಳದ ಸರ್ಕಾರ ತನ್ನ ತಪ್ಪು ಕಾರ್ಯಾಚರಣೆಗಳ ಮೂಲಕ ತನ್ನ ಕಣ್ಮುಂದೆಯೇ ಸಾವಿರಾರು ಜನ ಸಾಯುತ್ತಿರುವಾಗ ಮತ್ತು ಸಾಯುವ ಆತಂಕ ಸೃಷ್ಟಿಯಾಗಿರುವಾಗ ಅದರ ವಿರುದ್ಧದ ಹೋರಾಟವನ್ನು ಬಹುರಾಷ್ಟ್ರೀಯ ಕಂಪನಿಗಳ ಕೈಗೆ ನೀಡುತ್ತಿರುವ ದೃಶ್ಯ ಭಯಾನಕ ಪರಿಣಾಮಗಳಿಗೆ ಕಾರಣವಾಗಬಹುದು ಎನ್ನುತ್ತಾರೆ ವಂದನಾ ಶಿವ.**

**ಮಾರ್ಚ್** ೨೦೧೫ರಲ್ಲಿ ನಡೆದ ವಿಶೇಷ ಉಪನ್ಯಾಸ ಒಂದರಲ್ಲಿ ಬಿಲ್‌ಗೇಟ್ಸ್ ಕರೋನಾ ವೈರಾಣು ರೀತಿಯ ಪ್ರತಿಬಿಂಬವೊಂದನ್ನು ಪ್ರೇಕ್ಷಕರಿಗೆ ತೋರಿಸಿ ಇದು ಸಮಕಾಲೀನ ಕಾಲಘಟ್ಟದ ಅತಿದೊಡ್ಡ ವಿನಾಶವನ್ನು ಸೂಚಿಸುತ್ತದೆ ಎಂದು ವಾದಿಸಿದ. ನಮ್ಮ ಬದುಕಿಗೆ ದೊಡ್ಡ ಆಪತ್ತಿರುವುದು ಮಿಸೈಲ್‌ಗಳಿಂದಲ್ಲ, ಬದಲಾಗಿ ಈ ಬಗೆಯ ಸೂಕ್ಷ್ಮವೈರಾಣುಗಳಿಂದ ಎಂದು ಸಹ ತಿಳಿಸಿದ. ಈ ಘಟನೆಯಾಗಿ ಐದು ವರ್ಷಗಳ ನಂತರ ಬಂದ ಕರೋನಾ ವೈರಾಣು ಇಡೀ ಜಗತ್ತನ್ನು ಸುನಾಮಿಯಂತೆ ಅಪ್ಪಳಿಸಿದಾಗ ಆತ ಈ ಪಿಡುಗನ್ನು ಯುದ್ಧದ ಪರಿಭಾಷೆಯಲ್ಲಿ ವಿವರಿಸಿ "ಇದು ಜಾಗತಿಕ ಮಹಾಯುದ್ಧ" ಎಂದು ಹೇಳಿದ. ಆತ ಹೇಳಿದಂತೆ 'ಈ ಕರೋನ ವೈರಸ್ ಇಡೀ ಪ್ರಪಂಚದ ಜನರೇ ಅದರ ವಿರುದ್ಧ ಹೋರಾಡುವಂತೆ ಮಾಡಿದೆ'.

ನಿಜವಾಗಿ ನೋಡಿದರೆ ಈ ಪಿಡುಗು ಯುದ್ಧವೇನಲ್ಲ. ಅದು ಯುದ್ಧದ ಪರಿಣಾಮವಾಗಿದೆ. ಈ ಯುದ್ದವು ನಮ್ಮ ಇಡೀ ಬದುಕಿನ ವಿರುದ್ಧದ ಮಹಾಯುದ್ಧವಾಗಿದೆ. ಇದಕ್ಕೆ ಕಾರಣವೇನೆಂದರೆ ಯಾಂತ್ರೀಕೃತವಾಗಿರುವ ಮತ್ತು ಧನದಾಹಕ್ಕೆ ಒಳಗಾಗಿರುವ ನಮ್ಮ ಮನಸ್ಸು ಮನುಷ್ಯನನ್ನು ಪ್ರಕೃತಿಯಿಂದ ಹೊರತಾಗಿರುವ ಮತ್ತು ಎಲ್ಲವನ್ನು ತನ್ನ ಸ್ವಾರ್ಥಕ್ಕೆ ಬಳಸುವ ಒಂದು ಪ್ರಬೇಧವೆಂದು ಪರಿಗಣಿಸಿದೆ. ಆದರೆ ನೈಜವಾಗಿ ನೋಡುವುದಾದರೆ ನಾವು ಈ ಜೀವಜಾಲದ ಒಂದು ಭಾಗವಷ್ಟೇ. ಹಾಗೆಯೇ ನಾವು ವೈರಾಣು ಜಗತ್ತಿನ ಭಾಗವೂ ಹೌದು.. ಆದ್ದರಿಂದ ನಾವು ಅರಣ್ಯ, ಕೃಷಿಭೂಮಿ ಮುಂತಾದ ಜೀವವೈವಿಧ್ಯಗಳ ಪರ ಹೋರಾಟ ಎಂದರೆ ನಮ್ಮ ವಿರುದ್ಧ ನಡೆದಿರುವ ಹೋರಾಟದ ವಿರುದ್ಧ ಯುದ್ಧ ಸಾರುವುದು ಎಂದರ್ಥ.

ಕರೋನಾ ವೈರಾಣುವಿಂದ ಸೃಷ್ಟಿಯಾದ ಆರೋಗ್ಯ ತುರ್ತುಪರಿಸ್ಥಿತಿಯನ್ನು ಒಟ್ಟೂ ಜೀವಜಾಲದ ಅಳಿವಿನ ತುರ್ತು ಪರಿಸ್ಥಿತಿ, ಜೀವ ವೈವಿಧ್ಯದ ವಿನಾಶ ಮತ್ತು ಪರಿಸರದಲ್ಲಾದ ಬಿಕ್ಕಟ್ಟಿನಿಂದ ಬೇರ್ಪಡಿಸಿ ನೋಡಲಾಗದು.

ಮೇಲ್ಕಾಣಿಸಿದ ಎಲ್ಲಾ ಬಿಕ್ಕಟ್ಟುಗಳು ಉದ್ಭವವಾಗಿದ್ದೇ ಮನುಷ್ಯನೇ ಶ್ರೇಷ್ಠ ಎಂಬ ಯಂತ್ರನಾಗರೀಕತೆಯ ಮತ್ತು ಯುದ್ಧದಾಹದ ಪ್ರಜ್ಞೆಯ ಭಾಗವಾಗಿ. ಅಂದರೆ ಈ ಪ್ರಾಪಂಚಿಕ ನೋಟಕ್ರಮವು ಮನುಷ್ಯನನ್ನು ಇತರೆ ಜೀವಜಾಲದ ಪ್ರಾಣಿಗಳಿಗಿಂತ ಶ್ರೇಷ್ಠ ಎಂದು ನೋಡುತ್ತದೆ ಮತ್ತು ಈ ನೋಟಕ್ರಮವೇ ಪ್ರಸ್ತುತ ವಿಪತ್ತಿಗೆ ಕಾರಣವಾಗಿದೆ. ಎಲ್ಲವನ್ನು ನಾವು ನಿಯಂತ್ರಿಸಬಹುದು ಮತ್ತು ಅವುಗಳ ಮೇಲೆ ಹತೋಟಿ ಸಾಧಿಸಬಹುದು ಎಂಬ ಪ್ರಜ್ಞೆ ಮನುಷ್ಯನನ್ನು ಇತರ ಜೀವಿಗಳಿಂದ ಪ್ರತ್ಯೇಕ ಎಂಬಂತೆ ನೋಡಿದೆ. ತೀರದ ದಾಹ ಮತ್ತು ಅನಿಯಂತ್ರಿತ ಪ್ರಗತಿ ಎಂಬುದರ ಮೇಲೆ ಕಟ್ಟಲ್ಪಟ್ಟಿರುವ ಅರ್ಥವ್ಯವಸ್ಥೆಯ ಮಾದರಿ ಭೂಜಗತ್ತಿನ ಗಡಿಗಳನ್ನೇ ಅಳಿಸಿಹಾಕಿದೆ. ಈ ಆಕ್ರಮಣವು ಇಡೀ ಪರಿಸರ ವ್ಯವಸ್ಥೆ ಮತ್ತು ಜೈವಿಕ ಪ್ರಭೇದಗಳ ಸ್ವತಂತ್ರ ಅಸ್ತಿತ್ವವನ್ನೇ ನಾಶ ಮಾಡುತ್ತದೆ.

ಹೊಸ ಹೊಸ ಖಾಯಿಲೆಗಳು ಉದ್ಭವಿಸುವುದೇ ಜಾಗತಿಕ, ಯಾಂತ್ರಿಕ ನಾಗರೀಕತೆಯ ರೀತಿನೀತಿಗಳಿಂದಾಗಿ. ಇವು ಜೀವಜಗತ್ತಿನ ವೈವಿಧ್ಯಗಳನ್ನು ಅಳಿಸಿ, ಪ್ರಾಣಿ, ಪಕ್ಷಿ, ಸಸ್ಯ ಮೊದಲಾದವುಗಳನ್ನು ಕೀಳಾಗಿ ನೋಡುವಂತೆ ಮಾಡುತ್ತದೆ. ವಿಶ್ವವ್ಯಾಪಿಯಾಗಿರುವ ಯಂತ್ರನಾಗರೀಕತೆಯು ಇಡೀ ಪ್ರಪಂಚದಲ್ಲಿ ಜೀವಿಸುವ ಪ್ರಾಣಿ, ಪಕ್ಷಿ, ಸಸ್ಯ ಮೊದಲಾದ ಜೀವಿಗಳ ನೈಜ ಆರೋಗ್ಯದ ಕುರಿತಾಗಿ ಯಾವುದೇ ಗೌರವ ಹೊಂದಿಲ್ಲ. ನಮ್ಮ ಲಾಭಖೋರತನಕ್ಕಾಗಿ ಬೇರೆ ಜೀವಿಗಳ ನೆಲೆಗಳನ್ನು ಆಕ್ರಮಿಸಿ, ಏಕಪ್ರಕಾರದ ಸಸ್ಯಗಳನ್ನು ಬೆಳೆದಿರುವ ಕಾರಣದಿಂದ ಈ ಕರೋನಾ ವೈರಾಣುವು ಇಡೀ ಪ್ರಪಂಚವನ್ನು ಆವರಿಸಿದೆ. ದಟ್ಟ ಅರಣ್ಯಗಳನ್ನು ನಾಶಮಾಡಿ, ಕೃಷಿಭೂಮಿಯನ್ನು ಕೈಗಾರಿಕಾ ಪ್ರದೇಶವನ್ನಾಗಿ ಪರಿವರ್ತಿಸಿ, ಜೈವಿಕ ತಂತ್ರಜ್ಞಾನದ ಮೂಲಕ ವಿಷಕಾರಕ ಪದಾರ್ಥಗಳನ್ನು ಬೆಳೆಯುವುದರಿಂದ ಹೊಸರೋಗಗಳು ಉತ್ಪತ್ತಿಯಾಗಿ ಇಡೀ ವಿಶ್ವವನ್ನೇ ವ್ಯಾಪಿಸಿದೆ. ಈ ಭೂಮಿ ಮತ್ತು ನಮ್ಮ ಜೀವನವು ಲಾಭಕೋರತನಕ್ಕಾಗಿ ಇರುವುದು ಎಂಬ ಅನೈತಿಕ ತಿಳುವಳಿಕೆಯೇ ಎಲ್ಲದಕ್ಕೂ ಮೂಲವಾಗಿದೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಪ್ರಕಾರ ೧.೬ ಮಿಲಿಯನ್ ಅಸಂಘಟಿತ ವಲಯದ ಕಾರ್ಮಿಕರಕೀಗ ಕರೋನಾ ಉಪಟಳದಿಂದ ದುಡಿಯುವ ಸಾಮರ್ಥ್ಯವನ್ನು ಕಳೆದುಕೊಂಡಿದ್ದಾರೆ. ಇದು ಲಾಕ್‌ಡೌನ್‌ನ ನೇರ ಪರಿಣಾಮವಾಗಿದೆ. ವಿಶ್ವ ಆಹಾರ ಸಂಸ್ಥೆಯ ವರದಿಯಂತೆ ೨೫ ಬಿಲಿಯನ್ ಜನರು ಮುಂದಿನ ದಿನಗಳಲ್ಲಿ ಹಸಿವಿಗೆ ಈಡಾಗಬಹುದು. ೩ ಲಕ್ಷ ಜನರು ಪ್ರತಿನಿತ್ಯ ಸಾಯಬಹುದು. ಇವುಗಳೂ ಸಹ ಮನುಷ್ಯರನ್ನು ಕೊಲ್ಲುವ ಪಿಡುಗುಗಳೇ. ಹೀಗೆ ಜನರನ್ನು ಸಾಯಲುಬಿಟ್ಟು ಜೀವವನ್ನು ಉಳಿಸುವ ಕಾರ್ಯಾಚರಣೆಗಳ ಮಾತಾಡುವುಇದೇ ಅಸಂಬದ್ಧ. ಆರೋಗ್ಯ ಎಂದರೆ ನಮ್ಮ ಜೀವನ ಮತ್ತು ಜೈವಿಕ ವ್ಯವಸ್ಥೆಯ ನಡುವಣ ಸಂಬಂಧಧ ವಿಷಯ ಎಂದು ತಿಳಿಯಬೇಕು. ಬಿಲ್‌ಗೇಟ್ಸ್ ಮತ್ತು ಆತನ ತರಹದ ಜನರು ಈ ಬಗೆಯ ತಿಳುವಳಿಕೆಯಿಂದ ಹೊರತಾಗಿದ್ದಾರೆ. ಅವರು ಬಲವಂತವಾಗಿ ಹೇರುತ್ತಿರುವ ಆರೋಗ್ಯ ವ್ಯವಸ್ಥೆಯಲ್ಲಿ ಮನುಷ್ಯ ಜೀವನಕ್ಕೆ ಸ್ಥಾನವೇ ಇಲ್ಲ. ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಿಲ್‌ಗೇಟ್ಸ್ ರೋಗ ನಿವಾರಣೆಗಾಗಿ ಜಾಗತಿಕ ಮೈತ್ರಿಯ ಕೂಟವೊಂದನ್ನು ಸ್ಥಾಪಿಸಿದ್ದಾನೆ. ಆತ ಮೊದಲು ಹಣವನ್ನು ಹೂಡಿಕೆ ಮಾಡಿ ಅದರ ಮೂಲಕವಾಗಿಯೆ ಮತ್ತಷ್ಟು ಹಣವನ್ನು ಉತ್ಪಾದಿಸುತ್ತಾನೆ. ಮೊದಲು ಆ ಹಣ ಹೂಡಿಕೆಯ ಮೂಲಕ ಆರೋಗ್ಯದ ಸಮಸ್ಯೆಯನ್ನು ಹುಟ್ಟುಹಾಕುತ್ತಾನೆ. ನಂತರ ಅದೇ ಹಣದ ಬಲದಿಂದ ರೋಗ ನಿವಾರಣೆಯ ವಿಧಾನವನ್ನು ನಮ್ಮ ಮೇಲೆ ಹೇರುತ್ತಾನೆ. ಹೀಗೆ ರೋಗಾಣುವಿಗೆ ಪರಿಹಾರ ಕಂಡುಹಿಡಿಯುವುದರಲ್ಲೂ ಹಣ ಮಾಡುವ ಹುನ್ನಾರ ಆತನದು. ಆತನ ಹಣ ಹೂಡಿಕೆಯ ಕಾರ್ಯಕ್ರಮವು ನಮ್ಮ ಸಂಸ್ಕೃತಿ ಮತ್ತು ಪ್ರಕೃತಿಯಲ್ಲಿರುವ ಜೀವವೈವಿಧ್ಯದ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಹೊಸಕಿ ಹಾಕುತ್ತದೆ. ಆತನ ದಾನಶೀಲತೆ ಎಂಬುದು ಅಧಿಕಾರವನ್ನು ಸೃಷ್ಟಿಸುವ ಸಾಮ್ರಾಜ್ಯಶಾಹಿಯೇ ಎಂದು ತಿಳಿಯಬೇಕಿದೆ.

ಈ ಕರೋನಾ ವೈರಾಣು ತಂದ ಪಿಡುಗು ಮತ್ತು ಲಾಕ್‌ಡೌನ್ ನಿರ್ಬಂಧವು ನಮ್ಮನ್ನು ಹೇಗೆ ಒಂದು ನಿರ್ಜಿವ ವಸ್ತುವಿನಂತೆ ಸುಲಭವಾಗಿ ನಿಯಂತ್ರಿಸಬಹುದು ಎಂಬುದನ್ನು ತೋರಿಸಿಕೊಟ್ಟಿದೆ. ಈಗ ನಮ್ಮ ದೇಹ ಮತ್ತು ಮನಸ್ಸುಗಳೇ ಆಕ್ರಮಣಕ್ಕೆ ಒಳಗಾಗುವ ಹೊಸ ರೀತಿಯ ವಸಾಹತುಗಳಾಗಿ ನಮಾರ್ಪಟ್ಟಿವೆ. ಈ ಹೊಸ ಅನೂರ್ತ ಸಾಮ್ರಾಜ್ಯಶಾಹಿ ಪ್ರಜ್ಞೆಯು ಜೀವವೈವಿಧ್ಯತೆ, ಅದರ ಮರುಹುಟ್ಟು, ಕೊಡು-ಕೊಳ್ಳುವಿಕೆಯ ಮೌಲ್ಯಗಳು, ಮತ್ತು ಸಹಜವಾಗಿ ಬದುಕುವ ಸಾಮರ್ಥ್ಯ ಇತ್ಯಾದಿಗಳಿಗೆ ಕುರುಡಾಗಿದೆ. ಅದು ತಾನೇ ಸೃಷ್ಟಿಸಿದ ತ್ರಾಜ್ಯ ಮತ್ತು ಹಿಂಸೆಗಳಿಗೂ ಸಹ ಕುರುಡಾಗಿದೆ. ಎಲ್ಲವನ್ನು ನಿಯಂತ್ರಿಸುವ ಹಿಂಸೆಯನ್ನು ಮಾತ್ರ ಉತ್ಪಾದಿಸುತ್ತದೆ.

ಕರೋನಾ ವೈರಸ್ಸಿನ ಈ ಲಾಕ್‌ಡೌನ್ (ನಿರ್ಬಂಧ) ಎಂಬುದು ಮನುಷ್ಯತ್ವವಿಲ್ಲದ ಭವಿಷ್ಯಕ್ಕೆ ಬರೆದ ಒಂದು ವ್ಯಾಖ್ಯಾನವಾಗಿದೆ,

೨೬ ಮಾರ್ಚ್ ೨೦೨೦ ರಂದು ಕರೋನಾ ವೈರಾಣು ಉತ್ತುಂಗಂಗದಲ್ಲಿರಬೇಕಾದರೆ ವಿಶ್ವ ಬೌದ್ಧಿಕ ಆಸ್ತಿಹಕ್ಕು ಸಂಸ್ಥೆಯು ಮೈಕ್ರೋಸಾಫ್ಟ್ ಕಂಪನಿಗೆ ಒಂದು ಪೇಟೆಂಟ್ ನೀಡಿತು. ಪೇಟೆಂಟ್ ನಂಬರ್ wo ೦೬೦೬೦೬ ದಾಖಲಿಸುವಂತೆ ಯುರೋಪಿನ ಕ್ರಿಪ್ಟೊ ಕರೆನ್ಸಿ ವ್ಯವಸ್ಥೆಯು ಅದರ ಗ್ರಾಹಕನಿಗೆ ಸಂಬಂಧಿಸಿದ ದೇಹದ ಕ್ರಿಯೆಯ ಮೇಲೆ ಹಕ್ಕನ್ನು ಸಾಧಿಸಬಹುದು....'. ಈ ದೇಹದ ಕ್ರಿಯೆ ಎಂಬುದು ಮಾನವ ದೇಹದಿಂದ ಉತ್ಪಾದನೆ ಆಗುವ ಕಿರಣಗಳು, ಮೆದುಳಿನ ಚಟುವಟಿಕೆ, ದೇಹದಲ್ಲಿ ಹರಿವ ವಿವಿಧ ರಸಗಳು, ರಕ್ತಸಂಚಲನ ಹಾಗೂ ಇತರ ಅವಯವಗಳು ನಡೆಸುವ ಚಟುವಟಿಕೆ ಇವೆಲ್ಲವನ್ನು ಒಳಗೊಂಡಿದೆ. ಇಲ್ಲಿ ಮನುಷ್ಯನ ಶರೀರ ಎಂದರೆ ನಿರ್ಜಿವ ಮಾಹಿತಿ ಮತ್ತು ದತ್ತಾಂಶವನ್ನು ಸರಾಗವಾಗಿ ಒದಗಿಸುವ ಕೇವಲ ಒಂದು ವಸ್ತು ಮಾತ್ರ.

ಅಂದರೆ ಈ ಹಕ್ಕು ಸ್ವಾಮ್ಯವು ನಮ್ಮ ದೇಹ ಮತ್ತು ಮನಸ್ಸುಗಳನ್ನು ಬೌದ್ಧಿಕ ಹಕ್ಕು ಸಾಮ್ಯದ ನಿಯಮದಡಿ ವಶಪಡಿಸಿಕೊಳ್ಳುತ್ತದೆ. ವಸಹತುಶಾಹಿ ಕಾಲಘಟ್ಟದಲ್ಲಿ ಆಡಳಿತಗಾರರು ಸ್ಥಳೀಯ ಜನರ ಭೂಮಿ, ಸಂಸ್ಕೃತಿ ಮತ್ತು ಅವರ ನೈಜ ಪರಿಸರದ ಮೇಲೆ ಹಕ್ಕು ಮತ್ತು ಅಧಿಕಾರ ಸ್ಥಾಪಿಸಿ ಅವರ ಜೀವನದ ಸ್ವಾತಂತ್ರಕ್ಕೆ ಮತ್ತು ಸಾರ್ವಭೌಮತ್ವಕ್ಕೆ ಅಡ್ಡಿ ಉಂಟು ಮಾಡಿದ್ದರು. ಭೂಮಿ ಮತ್ತು ಇತರೆ ಆಸ್ತಿಗಳ ಮೇಲೆ ಅಧಿಕಾರ ಸ್ಥಾಪಿಸಿ ಅವರ ಅವನತಿಗೆ ಕಾರಣರಾಗಿದ್ದರು. ಪೇಟೆಂಟ್ ೩೦ ೦೬೦೬೦೬ ಎಂಬುದು ಮೈಕ್ರೋಸಾಫ್ಟ್ ಕಂಪನಿಗೆ ನಮ್ಮ ಶರೀರ ಮತ್ತು ಮನಸ್ಸುಗಳನ್ನು ಹೊಸ ವಸಾಹತುಗಳಾಗಿ ಪರಿವರ್ತಿಸಿವೆ. ನಾವೀಗ ಬಹುರಾಷ್ಟ್ರೀಯ ಕಂಪನಿಗಳಿಗೆ ದತ್ತಾಂಶವನ್ನು ಒದಗಿಸುವ ಕಚ್ಚಾ ಸಾಮಗ್ರಿ ಮಾತ್ರ. ಅಂದರೆ ನಾವು ನಮ್ಮದೇ ಜೀವನದ ಸಹಜ ಲಯಗಳನ್ನು ಕಳೆದುಕೊಂಡ ಮತ್ತು ಯಾವ ಆಯ್ಕೆಯ ಸ್ವಾತಂತ್ರವು ಇಲ್ಲದ


(೫ನೇ ಪುಟಕ್ಕೆ

ಪ್ರಚಲಿತ-೨

# ಮೋದಿ ಮತ್ತು ಮುಸಲೋಣಿ: ಒಂದು ಸಮಾನಂತರ ನೋಟ

-ರಾಮಚಂದ್ರ ಗುಹ

**ಮೋದಿಯವರ ಅಧಿಕಾರವನ್ನು ಫ್ಯಾಸಿಸ್ಟ್ಟ ಎಂದು ಕೆಲವರು ಗುರುತಿಸುತ್ತಿರುವ ಈ ಸಂದರ್ಭದಲ್ಲಿ ಫ್ಯಾಸಿಸಂನ ಹರಿಕಾರ ಇಟಲಿಯ ಮುಸಲೋನಿಯ ಆಳ್ವಿಕೆಯಲ್ಲಿ ಇದು ಬೆಳೆದ ಬಗೆಯನ್ನು ಗಮನಿಸುವುದು ಉಚಿತವಾದೀತು**



**ನಾ**ನು ಬಹಳಷ್ಟು ಜೀವನ ಚರಿತ್ರೆಗಳನ್ನು ಓದುತ್ತೇನೆ. ಇವುಗಳ ವ್ಯಾಪ್ತಿ ನನ್ನ ದೇಶಕ್ಕಿಂತ ಹೆಚ್ಚಾಗಿ ವಿದೇಶಗಳೇ ಆಗಿರುತ್ತವೆ. ನಾನು ಇತ್ತೀಚೆಗೆ ಓದಿದ ಪುಸ್ತಕ ಕೆನಡಾದ ವಿದ್ವಾಂಸ ಫೇಬಿಯೋ ಫರ್ನಾಂಡೋ ರಿಝಿ ಬರೆದ 'ಬೆನೆಡೆಟ್ಟೋ ಕ್ರೋಚೆ ಮತ್ತು ಇಟಲಿಯ ಫ್ಯಾಸಿಸಂ'. ಒಬ್ಬ ಮಹಾನ್ ತತ್ವಜ್ಞಾನಿಯು ಹಾದು ಬಂದ ಕಾಲದ ದೊಡ್ಡ ಕಥೆಯನ್ನು ಹೇಳಲು, ಆತನ ಜೀವನವನ್ನು ಈ ಕೃತಿ ಬಳಸಿಕೊಳ್ಳುತ್ತದೆ.


ರಿಝಿಯ ಪುಸ್ತಕವನ್ನು ಓದುತ್ತಾ ನಾನು ೧೯೨೦ರ ಇಟಲಿ ಮತ್ತು ೨೦೨೦ರ ಭಾರತಗಳ ನಡುವೆ ವಿಲಕ್ಷಣ ಸಮಾನತೆಗಳನ್ನು ಕಂಡೆ. ಮೋದಿ ಎಂಬ ಪುರಾಣದ ಹಾಗೇ ಬೆನಿಟೋ ಮುಸೊಲಿನಿ ಎಂಬ ಪುರಾಣವೂ ಕೂಡ "ಅಧಿಪತಿಯ ಅಸಾಧಾರಣ ಬುದ್ಧಿಮತ್ತೆಯನ್ನು ಹಾಡಿ ಹೊಗಳಲು ಉತ್ಸುಕರಾಗಿರುವ" ಬರಹಗಾರರು ಮತ್ತು ಪ್ರಚಾರಕರು ಕೌಶಲ್ಯದಿಂದ ಹೆಣೆದಿರುವಂತಹದು. ಈ ಪ್ರಚಾರಕರು ಫ್ಯಾಸಿಸ್ಟ್ ನಾಯಕನನ್ನು "ಅದೃಷ್ಟಶಾಲಿಮನುಷ್ಯ", "ಅಗಾಧ ನಂಬಿಕೆಯ ಮನುಷ್ಯ" ಅಥವಾ ಸರಳವಾಗಿ "ದೈವಿಕ ಮನುಷ್ಯ" ಎಂದು ಕರೆಯತೊಡಗಿದರು. ಹೀಗೆ "ಎಂದಿಗೂ ಸರಿಯಾದುದನ್ನೇ ಮಾಡುವ ನೇತಾರ" "ಇತರರು ಹಿಂಜರಿಯುವೆಡೆ ಸ್ವತಃ ಮುನ್ನುಗ್ಗುವ ನಾಯಕ" ಎಂದು ಅಧಿಪತಿಯ ಮಿಥ್ಯಾಪುರಾಣ ಸೃಷ್ಟಿಯಾಯಿತು.

೧೯೨೫ರ ಡಿಸೆಂಬರ್‌ನಲ್ಲಿ ಇಟಲಿಯ ಸರ್ಕಾರವು ಒಂದು ಹೊಸ ಕಾನೂನನ್ನು ಜಾರಿಗೆ ತಂದಿತು. ಈ ಕಾನೂನಿನಿಂದ ಪತ್ರಿಕಾ ಮಾಧ್ಯಮಕ್ಕೆ ಮತ್ತು ಅದರ ಸ್ವಾತಂತ್ರ್ಯದ ಮೇಲೆ ಭಾರೀ ಹೊಡೆತ ಬಿದ್ದಂತಾಯಿತು. ಈ ಶಾಸನದ ಪರಿಣಾಮವಾಗಿ "ಕೆಲವೇ ತಿಂಗಳಲ್ಲಿ ಪ್ರಮುಖ ಪತ್ರಿಕೆಗಳು ಒಂದೊಂದಾಗಿ ಫ್ಯಾಸಿಸ್ಟ್ ನಿಯಂತ್ರಣಕ್ಕೆ ಒಳಪಟ್ಟವು. ಕೆಲವು ಪತ್ರಿಕೆಗಳ ಮಾಲೀಕರು ಆರ್ಥಿಕ ಅಥವಾ ರಾಜಕೀಯ ಒತ್ತಡದಿಂದ ಪತ್ರಿಕೆಗಳನ್ನೇ ಮಾರಬೇಕಾಯಿತು. ಎಲ್ಲ ಉದಾರವಾದೀ ಸಂಪಾದಕರೂ ರಾಜೀನಾಮೆ ನೀಡುವಂತಾಗಿ ಅವರ ಜಾಗದಲ್ಲಿ ಸುಲಭವಾಗಿ ಹೊಂದಾಣಿಕೆ ಮಾಡಿಕೊಳ್ಳುವ ಜನ ಬಂದರು"

## ಕಾನೂನಿನ ಬಗ್ಗೆ ಅತಿಯಾದ ಭಯಭಕ್ತಿ.

ಅದೇ ವರ್ಷ, ಬೆನೆಡಿಟ್ಟೋ ಕ್ರೋಚೆ ಆಳುವ ಪಕ್ಷದ ನೀತಿಯನ್ನು ಮತ್ತು ಮುಸೊಲಿನಿಯನ್ನು, "ಅಧಿಕಾರ ಮತ್ತು ಪುಡಾರಿಗಿರಿ ಚಲಾಯಿಸುವ, ಶಾಸನಗಳ ಬಗ್ಗೆ ಗೌರವ ಪ್ರದರ್ಶಿಸುತ್ತಲೇ ಅವನ್ನು ಉಲ್ಲಂಘಿಸುವ, ಅತ್ಯಾಧುನಿಕ ಪರಿಕಲ್ಪನೆಗಳ ಬಗ್ಗೆ ಮಾತಾಡುತ್ತಲೇ ಹಳಸಲಾದ ಹಳೆಯ ಅರ್ಥವಿಲ್ಲದ ವಿಷಯಗಳಿಗೆ ತಗಲಿಕೊಂಡಿರುವ, ಸಂಸ್ಕೃತಿಯ ಬಗ್ಗೆ ಅಸಹ್ಯ ವ್ಯಕ್ತಪಡಿಸುತ್ತಲೇ ನೀರಸವಾದ ಹೊಸದನ್ನು ಉತ್ಪಾದಿಸುವ ವ್ಯರ್ಥ ಪ್ರಯತ್ನಗಳಲ್ಲಿ ತೊಡಗಿರುವ ವಿಲಕ್ಷಣ ಮಿಶ್ರಣ..." ಎಂದು ಚಿತ್ರಿಸುತ್ತಾನೆ. ಅದೇ ರೀತಿ ಸಂವಿಧಾನದ ಬಗ್ಗೆ ಗೌರವದಿಂದ ಮಾತನಾಡುತ್ತಾ ಅದರ ಆಶಯ ಮತ್ತು ಮೂಲತತ್ವವನ್ನು ನಿರ್ಲಜ್ಜೆಯಿಂದ ಉಲ್ಲಂಘಿಸುವ, ಪ್ರಾಚೀನ ಲೋಕಜ್ಞಾನವನ್ನೇ ಪ್ರತಿಪಾದಿಸುತ್ತಾ ಆಧುನಿಕ ವಿಜ್ಞಾನದ ಬಗ್ಗೆ ತಿರಸ್ಕಾರ ತೋರುತ್ತಾ ಪುರಾತನ ಸಂಸ್ಕೃತಿಯನ್ನು ಆರಾಧಿಸುವಂತೆ ತೋರ್ಪಡಿಸಿಕೊಳ್ಳುವ, ಆಚರಣೆಯಲ್ಲಿ ಸಂಪೂರ್ಣ ಸಂಸ್ಕೃತಿ ವಿಮುಖತೆಯನ್ನು ತೋರಿಸುವ ಮೋದಿಯವರ ಇಂದಿನ ಆಳ್ವಿಕೆಗೆ ೧೯೨೦ರ ಇಟಲಿಯ ಸರ್ಕಾರವು ಹೋಲಿಕೆಯಾಗುತ್ತದೆ.

ಇಟಲಿಯ ಬಹಳಷ್ಟು ಸ್ವತಂತ್ರ-ಮನಸ್ಸಿನ ಬುದ್ಧಿಜೀವಿಗಳು ದೇಶತೊರೆದು ಹೋಗುವುದು ಅನಿವಾರ್ಯವಾದಾಗಲೂ ಕೂಡ ಬೆನೆಡಿಟ್ಟೊ ಕ್ರೋಚೆ ಫ್ಯಾಸಿಸಂಗೆ ಬೌದ್ಧಿಕ ಮತ್ತು ನೈತಿಕ ವಿರೋಧವನ್ನು ವ್ಯಕ್ತಡಿಸುತ್ತಾ ತನ್ನ ತಾಯ್ನಾಡಿನಲ್ಲೇ ಉಳಿದ. ಆತನ ಜೀವನ ಚರಿತ್ರಕಾರ ಹೇಳುವಂತೆ ಆಗಿನ ಆಡಳಿತಶಾಹಿ, ಸಮೂಹ ಮಾಧ್ಯಮ ಮತ್ತು ಶಿಕ್ಷಣ ವ್ಯವಸ್ಥೆಯನ್ನು ಮುಸೊಲಿನಿಯ ಪಂಥವನ್ನು ಪ್ರೋತ್ಸಾಹಿಸಲು, ಮತ್ತು ಅಧಿಕಾರಕ್ಕೆ ವಿಧೇಯರಾಗಿರಬೇಕೆಂಬುದನ್ನು ಜನರ ಮನಸ್ಸುಗಳಲ್ಲಿ ಅಚ್ಚೊತ್ತುವಂತೆ ಮಾಡಲು, ಹೊಸ ತಲೆಮಾರಿನವರು ಅಧಿಪತಿಯ ಜೊತೆ ವಿಚಾರಾತೀತ ಸಂಬಂಧವನ್ನು ಹೊಂದಲು ಆಗ್ರಹಿಸುತ್ತಾ, ಪ್ರಶ್ನೆಮಾಡದೆ 'ಪಾಲಿಸಲು, ನಂಬಲು, ಹೋರಾಡುವಂತೆ' ಉತ್ತೇಜಿಸಲು ಬಳಸಿಕೊಳ್ಳಲಾಗುತ್ತಿತ್ತು. ಇದಕ್ಕೆ ಪ್ರತಿಯಾಗಿ ಕ್ರೋಚೆಯು ಉದಾರ ಮೌಲ್ಯಗಳನ್ನು ಪ್ರಸ್ತುತಪಡಿಸಿದನು, ಸ್ವಾತಂತ್ರ್ಯವನ್ನು ಬೋಧಿಸಿದನು, ಒಬ್ಬ ಸ್ವತಂತ್ರ ಪ್ರತಿನಿಧಿಯಾಗಿ ಮನುಷ್ಯನ ಘನತೆಯನ್ನು ಸಮರ್ಥಿಸಿದನು, ವ್ಯಕ್ತಿಗತ ತೀರ್ಮಾನ ಮತ್ತು ವೈಯಕ್ತಿಕ ಹೊಣೆಗಾರಿಕೆಗಳನ್ನು ಪ್ರೋತ್ಸಾಹಿಸಿದನು.



ರಿಜಿಯ ಪುಸ್ತಕವನ್ನು ಮುಂದೆ ಓದುತ್ತಾ ನಾನು ಈ ಭಾಗವನ್ನು ಕಂಡೆ: "೧೯೨೬ರ ಕೊನೆಗೆ ಉದಾರವಾದಿ ಇಟಲಿಯು ನಾಶವಾಯಿತು. ಮುಸೊಲಿನಿಯು ತನ್ನ ಅಧಿಕಾರವನ್ನು ಕ್ರೋಢೀಕರಿಸಿದ್ದನು, ಮತ್ತು ತನ್ನ ಸರ್ವಾಧಿಕಾರವನ್ನು ಮುಂದುವರಿಸಲು ಅಗತ್ಯವಾದ ಶಾಸನಾತ್ಮಕ ಸಾಧನಗಳನ್ನು ಸೃಷ್ಟಿಸಿಕೊಂಡಿದ್ದನು. ರಾಜಕೀಯ ಪಕ್ಷಗಳು ಕಾನೂನುಬಾಹಿರವಾಗಿ ನಡೆದುಕೊಳ್ಳುತ್ತಿದ್ದವು. ಪತ್ರಿಕಾ ಸ್ವಾತಂತ್ರ್ಯವು ನಾಶವಾಗಿತ್ತು. ವಿರೋಧಪಕ್ಷಗಳು ನಿಶ್ಶಸ್ತ್ರಗೊಂಡಿದ್ದವು, ಪಾರ್ಲಿಮೆಂಟ್ ನಿಸ್ತೇಜವಾಗಿತ್ತು. ೧೯೨೮ರ ಹೊತ್ತಿಗೆ ಯಾವುದೇ ರೀತಿಯ ರಾಜಕೀಯ ಚಟುವಟಿಕೆಯೂ ಅಸಾಧ್ಯವಾಗಿತ್ತು; ಸಾರ್ವಜನಿಕ ಸ್ಥಳಗಳಲ್ಲಿ ಅಥವಾ ವೈಯಕ್ತಿಕ ಪತ್ರವ್ಯವಹಾರಗಳಲ್ಲಿ ಕೂಡ ವಿಮರ್ಶಾತ್ಮಕ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು ಅಪಾಯಕಾರಿಯಾಗಿತ್ತು. ಸರ್ಕಾರದ ನೀತಿಗೆ ವಿರುದ್ಧವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರೆ ಸರ್ಕಾರಿ ಉದ್ಯೋಗಿಗಳೂ ತಮ್ಮ ಕೆಲಸ ಕಳೆದುಕೊಳ್ಳಬೇಕಾಗುತ್ತಿತ್ತು.

"ಆಂತರಿಕ ವ್ಯವಹಾರಗಳ ಮಂತ್ರಾಲಯದ ಒಳಗೆ ಒಂದು ಪ್ರಬಲ ಪೋಲೀಸ್ ಪಡೆಯ ಜೊತೆಗೆ ಪೋಲೀಸ್ ಮುಖ್ಯಸ್ಥರ ನೇರ ಉಸ್ತುವಾರಿಯಲ್ಲಿ ಒಂದು ಹೊಸದಾದ ದಕ್ಷ ಗುಪ್ತ ಪೋಲೀಸ್ ಸಂಸ್ಥೆಯನ್ನು ಸೃಷ್ಟಿಸಿ, ಭಯಮೂಡಿಸುವ ರೀತಿಯಲ್ಲಿ, ನಿಗೂಢವಾಗಿ ಅದನ್ನು ಓವಿಆರ್‌ಎ (ಆರ್ಗನೈಸೇಷನ್ ಆಫ್ ವಿಜಿಲೆನ್ಸ್ ಎಂಡ್ ರಿಪ್ರೆಷನ್ ಆಪ್ ಆ್ಯಂಟಿ-ಫ್ಯಾಸಿಸಂ ) ಎಂದು ಕರೆಯಲಾಯಿತು. ಯಾವುದೇ ಫ್ಯಾಸಿಸಂ ವಿರೋಧದ ಸುಳಿವು ಕಂಡ ಕೂಡಲೇ ಅದನ್ನು ದಮನ ಮಾಡುವ, ಮತ್ತು ಯಾವುದೇ ಭಿನ್ನಮತದ ಅಭಿವ್ಯಕ್ತಿಯನ್ನು ನಿಯಂತ್ರಿಸುವ ಉದ್ದೇಶದಿಂದ ಇದನ್ನು ಸೃಷ್ಟಿಸಲಾಗಿತ್ತು. ಅತ್ಯಂತ ಕಡಿಮೆ ಸಮಯದಲ್ಲಿಯೇ ಇದು ಫ್ಯಾಸಿಸ್ಟ್ ನಾಯಕರನ್ನೂ ಒಳಗೊಂಡಂತೆ ಒಂದು ಲಕ್ಷಕ್ಕೂ ಹೆಚ್ಚು ಜನರ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿ ಗೂಢಚಾರರ, ವಿಶೇಷ ಏಜೆಂಟರ, ಮಾಹಿತಿ ನೀಡುವವರ ಒಂದು ಪ್ರಭಾವಶಾಲಿ ಬಲೆಯನ್ನು ಸೃಷ್ಟಿಸಿತ್ತು, ಇದರ ವ್ಯಾಪ್ತಿಯು ಇಡೀ ದೇಶದಲ್ಲಿ ಮಾತ್ರವಲ್ಲದೆ ವಿದೇಶಗಳಿಗೂ ಹರಡಿತ್ತು."

ನಾನು ಈ ಮಾತುಗಳನ್ನು ರಿಝಿಯ ಪುಸ್ತಕದಿಂದ ಈ ಲೇಖನಕ್ಕಾಗಿ ದಾಖಲಿಸುತ್ತಿರುವಾಗಲೇ ನಮ್ಮ ಗೃಹ ಮಂತ್ರಾಲಯವು ನಾಗರಿಕರ ಮೇಲೆ ನಿಜ ಸಮಯ ಕಣ್ಗಾವಲು(ರಿಯಲ್ ಟೈಮ್ ಸರ್ವೈಲೆನ್ಸ್) ನಡೆಸುವುದಕ್ಕಾಗಿ ಹಣಕಾಸು ಆಯೋಗದಿಂದ ೫೦,೦೦೦ ಕೋಟಿ ರೂಪಾಯಿಗಳಿಗೆ ಬೇಡಿಕೆ ಇಟ್ಟಿರುವ ಸುದ್ದಿ ಬಂದಿದೆ. ಕೇಂದ್ರವು ರಾಜ್ಯಗಳಿಗೆ ನ್ಯಾಯಯುತವಾಗಿ ನೀಡಬೇಕಾದ ಹಣವನ್ನು ನಿರಾಕರಿಸುತ್ತಿರುವ, ಮತ್ತು ಈಗಾಗಲೇ ತನ್ನ ಅಧಿಕಾರವನ್ನು ಅಪಾಯಕರವಾಗಿ ದುರುಪಯೋಗಪಡಿಸಿಕೊಂಡಿರುವ ಗೃಹಮಂತ್ರಾಲಯವು ಸ್ವತಂತ್ರ ಚಿಂತಕರ, ಪತ್ರಕರ್ತರ, ಚಳುವಳಿಗಾರರ ಮೇಲೆ ನಕಲಿ/ಸುಳ್ಳು ಮೊಕದ್ದಮೆಗಳನ್ನು ಹೂಡುತ್ತಿರುವ ಈ ಸಂದರ್ಭದಲ್ಲಿ ಇದು ಆಗುತ್ತಿದೆ.

೧೯೨೯ರಲ್ಲಿ ಇಟಲಿಯ ಪಾರ್ಲಿಮೆಂಟಿನ ಬಗ್ಗೆ ರಿಝಿಯ ವಿವರಣೆ ಹೀಗಿದೆ: "ಪಾರ್ಲಿಮೆಂಟ್ ಸರ್ಕಾರದ ತೀರ್ಮಾನಗಳ ರಬ್ಬರ್ ಸ್ಟಾಂಪ್ ಆಗಿಬಿಬಿಟ್ಟಿದೆ. ಉಳಿದಿದ್ದ ಕೆಲವೇ ವಿರೋಧ ಪಕ್ಷದವರ ಭಾಷಣಗಳನ್ನು ನಿರ್ಲಕ್ಷಿಸಲಾಗುತ್ತಿದೆ ಅಥವಾ ಬಹಳಷ್ಟು ಸಲ ಸದನದಲ್ಲಿ ಸಾರ್ವಜನಿಕ ಗ್ಯಾಲರಿಯಿಂದ ಮೂದಲಿಸಿ, ಗದ್ದಲವೆಬ್ಬಿಸಿ ಅವರ ಸದ್ದಡಗಿಸಲಾಗುತ್ತಿದೆ."

## ಪ್ಯಾಟ್ರಿಯಾ ಮತ್ತು ಗ್ಲೋರಿಯಾ

ರಿಝಿಯವರು ಬರೆದ ಬೆನೆಡಿಟ್ಟೋ ಕ್ರೋಚೆಯ ಈ ಬೌದ್ಧಿಕ ಜೀವನಚರಿತ್ರೆಯನ್ನು ಓದಿದ ನಂತರ ನಾನು ಡೇವಿಡ್ ಗಿಲ್‌ಮೋರ್‌ರ ಮಹತ್ವದ ಪುಸ್ತಕ 'ಇಟಲಿಯ ಅನ್ವೇಷಣೆ'(ದಿ ಪರ್ಸ್ಯೂಟ್ ಆಫ್ ಇಟಲಿ) ಕಡೆಗೆ ತಿರುಗಿದೆ. ಇದು ಇಟಲಿ ದೇಶದ ವಿಶಾಲ ವ್ಯಾಪ್ತಿಯ ಮತ್ತು ಆಸಕ್ತಿಯಿಂದ ಓದಿಸಿಕೊಂಡುಹೋಗುವ ಪ್ರಾರಂಭದ ಕಾಲದಿಂದಲೂ ಇರುವ ಇತಿಹಾಸವನ್ನು ಹೇಳುವ ಪುಸ್ತಕ. ನಾಲ್ಕು ನೂರು ಪುಟಗಳ ಈ ಇತಿಹಾಸ ಪುಸ್ತಕದ ಮುವ್ವತ್ತು ಪಟಗಳು ಮುಸೊಲಿನಿಯ ಅಧಿಕಾರದ ಅವಧಿಯ ಬಗ್ಗೆ ಹೇಳುತ್ತವೆ. ರಿಝಿಯ ಹೇಳಿರುವಂತೆಯೇ, ಇಟಲಿಯ ಬಗ್ಗೆ ಹಿಂದೆ ಗಿಲ್‌ಮೋರ್ ಹೇಳಿರುವುದು ಕೂಡ, ಪ್ರಸ್ತುತ ನನ್ನ ದೇಶದಲ್ಲಿ ನಾನು ಕಾಣುತ್ತಿರುವುದನ್ನು ಭೀತಿ ಮೂಡಿಸುವ ರೀತಿಯಲ್ಲಿ ಪ್ರತಿಧ್ವನಿಸುತ್ತದೆ.

ಈ ಅಭಿಪ್ರಾಯಗಳನ್ನು ಪರಿಗಣಿಸಿ: "೧೯೩೦ರಲ್ಲಿ, ಆಳ್ವಿಕೆಯ ವಿಧಾನವು ಬಹಳ ವೈಭವೋಪೇತ ಪ್ರದರ್ಶನವಾಗಿ ಮಾರ್ಪಟ್ಟಿತು. ಅಲ್ಲಿ ಹೆಚ್ಚು ಹೆಚ್ಚು ಪರೇಡ್‌ಗಳು, ಹೆಚ್ಚು ಹೆಚ್ಚು ಸಮವಸ್ತ್ರಗಳು, ಹೆಚ್ಚು ಸೆನ್ಸಾರ್‌ಗಳು, ಹೆಚ್ಚು ಬೆದರಿಕೆಗಳು, ನಾಯಕನಿಂದ ಹೆಚ್ಚು ಭಾಷಣಗಳು, ಹೆಚ್ಚು ಕೂಗಾಟಗಳು, ಬಾಲ್ಕನಿಯಿಂದ ಜನರ ಗುಂಪಿನ ಕಡೆಗೆ ವಿಚಿತ್ರ ಅಂಗಭಂಗಿ ಮಾಡುವುದು, ಸಂಜ್ಞೆಮಾಡುವುದು ನಡೆಯುತ್ತಿತ್ತು. ಮುಸೊಲಿನಿಯಿಂದ ಮಾತೃಭೂಮಿ ಮತ್ತು ಅದರ ವೈಭವದ ಒಂದು ಮಾತು ಬಂದರೆ ಸಾಕು, ಡ್ಯೂ-ಸ್, ಡ್ಯೂ-ಸ್,ಡ್ಯೂ-ಸ್, ಎಂದು ಜನರ ಗುಂಪು ಹರ್ಷೋದ್ಗಾರ ಮಾಡುತ್ತಾ ಅಭಿವಂದಿಸುತ್ತಿತ್ತು!".

ಬಹುತೇಕ ಮೋದಿಯವರ ಆಡಳಿತದ ಬಗೆಗೆ, ವಿಶೇಷವಾಗಿ ೨೦೧೯ರ ಅವರು ಜಯಗಳಿಸಿದ ಎರಡನೆಯ ಅವಧಿಯ ಬಗೆಗೂ ಕೂಡ ಇದನ್ನು ಹೇಳಬಹುದು, ಅವರ ಪ್ರತಿಯೊಂದು ಮಾತನ್ನೂ 'ಮೋ-ದಿ!' 'ಮೋ-ದಿ! ಮೋ-ದಿ!' ಎಂದು ಕೂಗುವ ಮೂಲಕ ಸ್ವಾಗತಿಸಲಾಗುತ್ತಿದೆ.

ಇಟಲಿಯ ಈ ಜನನಾಯಕ ಅಷ್ಟೊಂದು ಜನಪ್ರಿಯತೆಯನ್ನು ಪಡೆದದ್ದಾರೂ ಏಕೆ? ಅದಕ್ಕೆ ಗಿಲ್ಮೋರ್‌ರ ಉತ್ತರ ಇಲ್ಲಿದೆ: ಮುಸೊಲಿನಿಯು ಅಷ್ಟು ದೀರ್ಘ ಕಾಲ ಉಳಿದುಕೊಂಡಿದ್ದು ಭಾಗಶಃ ಆತ ಇಟಾಲಿಯನ್‌ತನದ ಕೆಲವು ಎಳೆಗಳನ್ನು ಮೈಗೂಡಿಸಿಕೊಂಡಿದ್ದರಿಂದ; ಆತ ಆಸೆ-ಆಕಾಂಕ್ಷೆಗಳ, ಭಯದ ಮತ್ತು ಉದಾರವಾದಿ ರಾಜಕಾರಣಿಗಳಿಂದ ಹಾಗೂ ಯುದ್ಧಕಾಲದ ಮಿತ್ರರಿಂದ ಇಟಲಿಗೆ ಏನು ಸಿಗಬೇಕಾಗಿತ್ತೋ ಅದು ಸಿಗದೇ ವೋಸವಾಗಿದೆ ಎಂದು ನಂಬುವ ತಲೆಮಾರಿನವರ ಳ ಸಾಕಾರಮೂರ್ತಿಯಾಗಿದ್ದನು.

ಇದೇ ರೀತಿಯಲ್ಲಿ ಮೋದಿ ದೇಶದ ಒಳಗೆ ಮತ್ತು ಹೊರಗೂ ಕೂಡ ಹಿಂದೂಗಳು ಅತ್ಯುನ್ನತ ಸ್ಥಾನದಲ್ಲಿದ್ದ ಗತಕಾಲದ ಸುವರ್ಣಯುಗದ ಬಗೆಗಿನ ಕಲ್ಪನೆಗಳನ್ನು ನೆನಪು ಮಾಡುತ್ತಾರೆ.. ಕ್ರಮೇಣ ಹಿಂದೂಗಳು, ಮುಸ್ಲಿಮ್ ಮತ್ತು ಬ್ರಿಟಿಷ್ ಆಳ್ವಿಕೆಗಳಿಂದ ಆ ಉನ್ನತ ಸ್ಥಾನದಿಂದ ಕೆಳಕ್ಕೆ ತಳ್ಳಲ್ಪಟ್ಟಿದ್ದಾರೆ ಎಂದು ವಾದಿಸುತ್ತಾರೆ ಹಾಗೂ ಹಿಂದುಗಳನ್ನು ಮತ್ತು ಭಾರತವನ್ನು ಸಂಚುಕೋರ ಮತ್ತು ಭ್ರಷ್ಟ ಕಾಂಗ್ರೆಸ್ ನಾಯಕರು ಹಿಂದಕ್ಕೆ ಎಳೆದೊಯ್ಯುವರೆಂದು, ಅವರೆದುರು ತಮ್ಮನ್ನು ಸ್ಪರ್ಧೆಗೆ ಒಡ್ಡಿಕೊಳ್ಳುತ್ತಾರೆ.

೨೦೨೦ರ ಭಾರತದಲ್ಲಿ ೧೯೨೦ರ ಇಟಲಿಯ ಬಗ್ಗೆ ಓದುತ್ತಾ, ಈ ಎರಡರ ನಡುವೆ ಹಲವಾರು ಸಾಮ್ಯತೆಗಳನ್ನು ಕಂಡು ನಾನು ಖಿನ್ನನಾದೆ. ಆದರೆ ಕೆಲವಾದರೂ ಭಿನ್ನತೆಗಳನ್ನು ಕಂಡು ತುಸು ಸಮಾಧಾನಗೊಂಡೆ. ಮುಸೊಲಿನಿಯ ಇಟಲಿಯಂತಲ್ಲದೆ ಮೋದಿಯವರ ಭಾರತದಲ್ಲಿ ಭಾರತೀಯ ಜನತಾ ಪಕ್ಷವು ಕೇಂದ್ರದಲ್ಲಿ ವಿರೋಧ ಪಕ್ಷಗಳ ಅಂತಹ ವಿರೋಧವನ್ನು ಎದುರಿಸುತ್ತಿಲ್ಲವಾದರೂ ಕನಿಷ್ಠ ಅರ್ಧ ಡಜನ್ ರಾಜ್ಯಗಳಲ್ಲಿ ಸಾಕಷ್ಟು ಬಲವಾಗಿರುವಂತಹ ಪಕ್ಷಗಳೊಂದಿಗೆ ಹೊಡೆದಾಡಬೇಕಾಗಿದೆ. ಹಾಗೇ ಪತ್ರಿಕಾ ಮಾಧ್ಯಮವನ್ನು ಪಳಗಿಸಲಾಗಿದೆಯಾದರೂ ಸಂಪೂರ್ಣ ದಮನ ಮಾಡಲಾಗಿಲ್ಲ. ಮುಸೊಲಿನಿಯ ಇಟಲಿಯಲ್ಲಿ ಆತನನ್ನು ಪ್ರಶ್ನಿಸುವುದಕ್ಕೆ ಬೆನೆಡಿಟ್ಟೋ ಕ್ರೋಚೆ ಒಬ್ಬ ಮಾತ್ರ ಇದ್ದರೆ, ಮೋದಿಯವರ ಭಾರತದಲ್ಲಿ ಹಲವಾರು ಲೇಖಕರು, ಚಿಂತಕರು, ನಮ್ಮ ಗಣರಾಜ್ಯದ ಸ್ಥಾಪಕ ತತ್ವಗಳ ಪರವಾಗಿ ಧೈರ್ಯದಿಂದ ಮಾತನಾಡುತ್ತಾರೆ.

'ಇಟಲಿಯ ಅನ್ವೇಷಣೆ' (ದಿ ಪರ್ಸ್ಯೂಟ್ ಆಫ್ ಇಟಲಿ) ಎಂಬ ಕೃತಿಯಲ್ಲಿ, ಮುಸೊಲಿನಿಯು ಹೇಗೆ ತನ್ನ ಆಳ್ವಿಕೆಯನ್ನು ಕ್ರೋಡೀಕರಿಸಿಕೊಂಡ ಎಂಬುದನ್ನು ವಿವರಿಸುತ್ತಾ ಗಿಲ್ಮೋರ್, "ಏಳಿಗೆಯನ್ನು ಸಾಧಿಸಲು ಸಾಧ್ಯವಾಗದೆ ಫ್ಯಾಸಿಸಂನ ಜನಪ್ರಿಯತೆ ಮೊನಚು ಕಳೆದುಕೊಂಡಿತ್ತು. ಇಟಾಲಿಯನ್ನರು ಬಹು ಚೆನ್ನಾಗಿ ಆಳಲ್ಪಡುತ್ತಿದ್ದಾರೆಂಬ ಭ್ರಮೆ ಮೂಡಿಸಿ ಮೋಸಗೊಳಿಸಬಹುದಿತ್ತು, ಆದರೆ ಜನತೆ ಸುಖವಾಗಿದ್ದಾರೆಂದು ನಂಬಿಸುವುದು ಸಾಧ್ಯವಿರಲಿಲ್ಲ," ಎನ್ನುತ್ತಾನೆ. ಉದ್ಯೋಗಗಳನ್ನು ನೀಡುವುದು, ಏಳಿಗೆಯನ್ನು ಸಾಧಿಸುವುದು ಮುಸೊಲಿನಿಗೆ ಸಾಧ್ಯವಾಗಲಿಲ್ಲ; ಆದರೆ ಮೋದಿಯವರ ಆರ್ಥಿಕ ಕ್ಷೇತ್ರದ ಸಾಧನೆ ಇನ್ನೂ ಕೆಟ್ಟದಾಗಿದೆ. ಸರಿಯಾದ ಪೂರ್ವಾಲೋಚನೆಯಿಲ್ಲದ ಯೋಜನೆಗಳು ಕಳೆದ ಮೂರು ದಶಕಗಳಲ್ಲಿ ಭಾರತದ ಅರ್ಥವ್ಯವಸ್ಥೆ ಮಾಡಿದ ಸಾಧನೆಗಳನ್ನೂ ಮಣ್ಣುಪಾಲು ಮಾಡಿವೆ.

ಇಂದು ಕೋಟ್ಯಾಂತರ ಯುವಕರು ಮೋದಿಯವರನ್ನು ಭಾವಾವೇಶದಿಂದ ಅನುಸರಿಸುತ್ತಿದ್ದಾರೆ. ಅವರ ಮತ್ತು ನಮ್ಮ ಭವಿಷ್ಯವು, ಮುಸೊಲಿನಿಯನ್ನು ಭಾವಾವೇಶದಿಂದ ಅನುಸರಿಸಿದ ಇಟಲಿಯ ಯುವಜನತೆಯ ಭವಿಷ್ಯವನ್ನು ಕುರಿತು ಬೆನೆಡಿಟ್ಟೋ ಕ್ರೋಚೆ ಆಡಿದ ಮಾತುಗಳಲ್ಲಿ ಸೂಚಿತವಾಗುತ್ತದೆ. ಇಟಲಿಯ ಸರ್ವಾಧಿಕಾರಿಯ ಸಾವಿನ ನಂತರ ಆಳ್ವಿಕೆಯು ಪತನಗೊಂಡಾಗ "ದಮನಕಾರಿ ಆಳ್ವಿಕೆಯು ದಾರಿತಪ್ಪಿಸಿದ, ಶೋಷಿಸಿದ, ಕೊನೆಯಲ್ಲಿ ವಂಚಿಸಿದ ನೈತಿಕ ಮೌಲ್ಯಗಳಳ ಖಜಾನೆಯನ್ನು" ಕುರಿತು ಕ್ರೋಚೆಯು ವಿಷಾದದಿಂದ ಬರೆಯುತ್ತಾನೆ.

ಬೆನಿಟೋ ಮುಸೊಲಿನಿ ಮತ್ತು ಆತನ ಫ್ಯಾಸಿಸ್ಟ್ ಅನುಯಾಯಿಗಳು ತಾವು ಇಟಲಿಯನ್ನು ನಿರಂತರವಾಗಿ ಆಳಬಹುದೆಂದು ಭಾವಿಸಿದ್ದರು. ನರೇಂದ್ರ ಮೋದಿ, ಮತ್ತು ಬಿಜೆಪಿ ಯ ಆಲೋಚನೆ ಕೂಡ ಹಾಗೆಯೇ ಇದೆ. ನಿರಂತರ ಆಳ್ವಿಕೆಯ ಈ ಭ್ರಮೆ ಫಲಪ್ರದವಾಗುವುದಿಲ್ಲ. ಆದರೆ ಪ್ರಸ್ತುತ ಆಡಳಿತ ಅಧಿಕಾರದಲ್ಲಿ ಇರುವವರೆಗೆ ದೇಶ ಆರ್ಥಿಕ, ರಾಜಕೀಯ, ಸಾಮಾಜಿಕ, ಮತ್ತು ನೈತಿಕ ನೆಲೆಗಳಲ್ಲಿ ಅಪಾರ ಪ್ರಮಾಣದ ಬೆಲೆಯನ್ನು ತೆರಬೇಕಾಗುತ್ತದೆ. ಮುಸೊಲಿನಿ ಮತ್ತು ಆತನ ಪಕ್ಷದ ಹಾವಳಿಯಿಂದ ಸುಧಾರಿಸಿಕೊಳ್ಳಲು ಇಟಲಿಗೆ ಹಲವಾರು ದಶಕಗಳೇ ಬೇಕಾಯಿತು; ಮೋದಿ ಮತ್ತು ಅವರ ಪಕ್ಷದ ಹಾವಳಿಯಿಂದ ಸುಧಾರಿಸಿಕೊಳ್ಳಲು ಭಾರತಕ್ಕೆ ಇನ್ನೂ ಹೆಚ್ಚು ಕಾಲವೇ ಬೇಕಾಗಬಹುದು.



**(ಮೂಲ ಲೇಖಕರು ಖ್ಯಾತ ಇತಿಹಾಸಕಾರರು ಮತ್ತು ರಾಜಕೀಯ ವಿಶ್ಲೇಷಕರು)**

(ಕನ್ನಡಕ್ಕೆ: **ಎಂ. ರಾಜು** ಕೃಪೆ: ***ಜನತಾ***, ೨೦ ಸೆಪ್ಟಂ. ೨೦೨೦)

---

**೩ನೇ ಪುಟದಿಂದ)**

'ಬಳಕೆದಾರರಾಗಿ' ಬದಲಾಗಿದ್ದೇವೆ. ಡಿಜಿಟಲ್ ಪ್ರಪಂಚದಲ್ಲಿ ಬಳಕೆದಾರ ಎಂದರೆ ಯಾವ ಆಯ್ಕೆಯೂ ಇಲ್ಲದ ಗ್ರಾಹಕ ಅಷ್ಟೇ.


ಕೇವಲ ಇಷ್ಟು ಮಾತ್ರ ಬಿಲ್‌ಗೇಟ್ಸ್‌ನ ದರ್ಶನವಲ್ಲ. ಅದು ಇದಕ್ಕಿಂತಲೂ ಹೆಚ್ಚು ದುಷ್ಟತನದ್ದು ಮತ್ತು ಕೆಡುಕಿನದ್ದಾಗಿದೆ. ಅದೆಂದರೆ ನಮ್ಮ ಮತ್ತು ನಮ್ಮ ಮಕ್ಕಳ ಮನಸು, ಶರೀರ ಮತ್ತು ಜೀವಸ್ಫೂರ್ತಿಯನ್ನು ಬೃಹತ್ ತಂತ್ರಜ್ಞಾನದ ಮೂಲಕ ಸಂಪೂರ್ಣ ನಿಯಂತ್ರಿಸಿ ನಮಗೆ ಅವು ಏನು ಎಂದು ಅರ್ಥ ಮಾಡಿಕೊಳ್ಳುವುದಕ್ಕೆ ಮೊದಲೇ ವಶಪಡಿಸಿಕೊಳ್ಳುವ ಬೃಹತ್ ಹುನ್ನಾರವಾಗಿದೆ.

೨೦೨೦ರ ಮೇ ತಿಂಗಳಿನಲ್ಲಿ ನ್ಯೂಯಾರ್ಕ್ ನಗರದ ಗವರ್ನರ್ ಆಂಡ್ರೆ ಕುಮಾ ಬಿಲ್‌ಗೇಟ್ಸ್ ಫೌಂಡೇಶನ್ ಜೊತೆಗೆ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಒಂದು ಪಾಲುಗಾರಿಕೆಯ ಒಪ್ಪಂದವೊಂದನ್ನು ಘೋಷಿಸಿದ. ಆತನು ಬಿಲ್ ಗೇಟ್ಸ್‌ನನ್ನು ಒಬ್ಬ ಶ್ರೇಷ್ಠ ದಾರ್ಶನಿಕ ಎಂದು ಹೆಸರಿಸಿ, ಈ ಕೆಟ್ಟ ಸಾಂಕ್ರಾಮಿಕ ರೋಗವು ಶಿಕ್ಷಣ ಕ್ಷೇತ್ರಕ್ಕೆ ಹೊಸ ಸಾಧ್ಯತೆ ತೆರೆದಿಟ್ಟಿದೆ ಎಂದು ಘೋಷಿಸಿದ. ಆಧುನಿಕ ಶಿಕ್ಷಣಕ್ಕೆ ಈ ಬೌತಿಕ ಕಟ್ಟಡಗಳು, ತರಗತಿ ಕೊಠಡಿಗಳು ಅವಶ್ಯಕತೆಯೇ ಇಲ್ಲ. ಎಲ್ಲವನ್ನು ತಂತ್ರಜ್ಞಾನದ ಬಳಕೆಯ ಮೂಲಕ ನಿಯಂತ್ರಿಸಬಹುದು ಎಂದು ಸಹ ಅಭಿಪ್ರಾಯ ಪಟ್ಟ, ಮುಂದುವರೆದು ಆತನು ಕಂಪ್ಯೂಟರ್ ತಂತ್ರಜ್ಞಾನ ಇರುವುದು ಏತಕ್ಕೆ ಎಂದು ಪ್ರಶ್ನಿಸಿದ.

ಹಾಗೆ ನೋಡಿದರೆ ಬಿಲ್ ಗೇಟ್ಸ್ ಕಳೆದ ಎರೆಡು ದಶಕಗಳಿಂದಲೂ ಅಮೆರಿಕಾದ ಸಾರ್ವಜನಿಕ ಶಿಕ್ಷಣ ಕ್ಷೇತ್ರದ ಮೇಲೆ ಆಕ್ರಮಣ ಮಾಡುತ್ತಲೇ ಇದ್ದ. ಆತನಿಗೆ ವಿದ್ಯಾರ್ಥಿ ಎಂದರೆ ದತ್ತಾಂಶ (Data) ಮಾತ್ರ, ಹೊಸ ಶಿಕ್ಷಣ ಪದ್ಧತಿಯಲ್ಲಿ ಮಕ್ಕಳ ಮೇಲೆ ದೂರದ ಪ್ರದೇಶದಿಂದಲೇ ತಂತ್ರಜ್ಞಾನದ ಮೂಲಕ ಹತೋಟಿ ಸಾಧಿಸಬಹುದು. ಅಂತರ್ಜಾಲ ಮತ್ತು ಕ್ಯಾಮರಾಗಳ ಕಣ್ಗಾವಲಿನ ಮೂಲಕ ಅವರು ಮನೆಯಲ್ಲಿದ್ದೇ ಓದುವುದರಲ್ಲಿ ತೊಡಗಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಕಂಡುಕೊಳ್ಳಬಹುದು. ಈ ಭಯಂಕರ ಪ್ರಪಂಚದಲ್ಲಿ ಮಕ್ಕಳು ಶಾಲೆಗೆ ಹೋಗುವಂತಿಲ್ಲ, ಸ್ನೇಹಿತರನ್ನು ಭೇಟಿ ಮಾಡುವಂತಿಲ್ಲ ಅಥವಾ ಎಲ್ಲರೂ ಒಟ್ಟಾಗಿ ಸೇರಿ ಆಟವಾಡುವಂತಿಲ್ಲ ಹೀಗೆ ಶಾಲೆಗಳಿಂದ ದೂರ ಮಾಡಿ, ಸ್ನೇಹಿತರಿಂದ ಬೇರ್ಪಡಿಸಿ, ಮಾನವೀಯ ಸಂಬಂಧಗಳಿಂದ ಹೊರತುಪಡಿಸಿ, ಪ್ರೀತಿ ಇಲ್ಲದಂತೆ ಮಾಡುವುದೇ ಒಂದು ದೊಡ್ಡ ಹುನ್ನಾರ.

ಹೀಗೆ ಬಿಲ್‌ಗೇಟ್ಸ್ ಮತ್ತು ಆತನ ರೀತಿಯ ತಂತ್ರಜ್ಞಾನದ ಒಡೆಯರನ್ನು ಗಮನಿಸಿದರೆ ಅವರ ತಂತ್ರಜ್ಞಾನದ ಪ್ರಪಂಚದಲ್ಲಿ ಮಾನವ ಸಂಬಂಧ ಮತ್ತು ಕ್ರಿಯೆಗೆ ಯಾವುದೇ ಸ್ಥಾನವಿಲ್ಲ. ಅವರ ತಾಂತ್ರಿಕ ಪ್ರಪಂಚದಲ್ಲಿ ಸೇರಿಸಿಕೊಳ್ಳುವುದು ಡಿಜಿಟಲ್ ಗುಲಾಮರನ್ನಷ್ಟೇ.

ಅಥವಾ ನಾವಿದನ್ನು ಪ್ರತಿರೋಧಿಸಬಹುದು. ಪ್ರಜಾಸತ್ತಾತ್ಮಕ ಮೌಲ್ಯಗಳಿರುವ ಪರ್ಯಾಯ ಭವಿಷ್ಯಕ್ಕೆ ನಾವು ನಾಂಧಿ ಹಾಡಬಹುದು, ನಮ್ಮ ಸಮಾನ ಹಿತಾಸಕ್ತಿ ಹಾಗೂ ಭೂಮಿಯನ್ನು ಒಂದು ಜಾಗತಿಕ ಕುಟುಂಬದಂತೆ ಪರಿಗಣಿಸಬಹುದು. ಈ ಭವಿಷ್ಯದ ವ್ಯವಸ್ಥೆಯಲ್ಲಿ ಸಹಜವಾಗಿಯೇ ಸಮೃದ್ಧವಾಗಿರುವ ವೈವಿಧ್ಯತೆ ಮತ್ತು ಸ್ವಾತಂತ್ರದ ನೆಲೆಗಳ ಮೂಲಕ ನಾವೆಲ್ಲ ಒಂದಾಗಬಹುದು. ಇದೇ ಆರೋಗ್ಯಕರವಾಗಿರುವ ನಮ್ಮ ಭವಿಷ್ಯವಾಗಿದೆ. ನಾವು ವಿನಾಶದ ಅಂಚಿನಲ್ಲಿದ್ದೇವೆ ಈಗಿರುವ ಪ್ರಶ್ನೆಯೆಂದರೆ ನಾವು ನಮ್ಮ ಸ್ವಾತಂತ್ರವನ್ನು ತೀರದ ದಾಹದ ದಲ್ಲಾಳಿಗಳಿಗೆ ಬಿಟ್ಟುಕೊಡುತ್ತೇವೆಯೇ? ಅಥವಾ ಈ ಬೃಹತ್ ಯಂತ್ರವನ್ನು ನಿಲ್ಲಿಸಿ ನಮ್ಮ ಹಕ್ಕು, ಸ್ವಾತಂತ್ರ್ಯ, ಹೊಂದಾಣಿಕೆ, ವೈವಿಧ್ಯತೆ ಮತ್ತು ಮಾನವೀಯತೆಯನ್ನು ಉಳಿಸಿಕೊಳ್ಳುತ್ತೇವೆಯೇ ಎಂಬುದು.




**ಲೇಖಕಿ ವಿಶ್ವವಿಖ್ಯಾತ ಪರಿಸರವಾದಿ ಮತ್ತು ಹೋರಾಟಗಾರ್ತಿ. ಅವರು ರೈತರ ಮತ್ತು ಮಹಿಳೆಯರ ಪ್ರಶ್ನೆಯನ್ನು ಪ್ರಧಾನವಾಗಿಟ್ಟುಕೊಂಡು ಹೊಸ ಸಂಕಥನ ಕಟ್ಟುತ್ತಿದ್ದಾರೆ. ಅವರು ನವಧಾನ್ಯ ಎಂಬ ಸಂಸ್ಥೆಯ ಸಂಚಾಲಕರು ಹೌದು)**

(ಕನ್ನಡಕ್ಕೆ:**ಅವಿನಾಶ್ ಟಿ.** ಕೃಪೆ: ***ಜನತಾ***, ೨೦ ಸೆಪ್ಟಂ. ೨೦೨೦)

# ಇಂದು ಕನ್ನಡ-ಕರ್ನಾಟಕವನ್ನು ಕಾಪಾಡುವ ಕೆಲಸ ಎಂದರೆ..

-ಬಂಜಗೆರೆ ಜಯಪ್ರಕಾಶ್

ಕನ್ನಡ ಮತ್ತು ಕರ್ನಾಟಕ ಜಾಗತೀಕರಣದ ಹೊಡೆತಗಳಿಂದ ತತ್ತರಿಸುತ್ತಿರುವಾಗಲೇ ಕೋವಿಡ್ ದಾಳಿ ನಡೆಸಿ ನಮ್ಮ ಭಾಷೆ ಸಂಸ್ಕೃತಿ ಮತ್ತು ರಾಜಕಾರಣದ ಲಂಗರುಗಳನ್ನೇ ಅಸ್ತವ್ಯಸ್ತಗೊಳಿಸಿ ಸಮಸ್ಯೆಯನ್ನು ಇನ್ನಷ್ಟು ಸಂಕೀರ್ಣಗೊಳಿಸಿದೆ. ವಲಸೆ ಮತ್ತು ಉದ್ಯೋಗದ ಬಿಕ್ಕಟ್ಟು ಭಾಷೆ-ಸಂಸ್ಕೃತಿ ಮತ್ತು ರಾಜಕಾರಣಗಳ ಆಧಾರಗಳನ್ನೇ ಅಲ್ಲಾಡಿಸುತ್ತಿವೆ. ಇಂತಹ ಸಂದರ್ಭದಲ್ಲಿ ನಮ್ಮ ಇತಿಹಾಸ ಮತ್ತು ಪರಂಪರೆಯತ್ತ ಒಂದು ಹಿನ್ನೋಟ ಬೀರುವ ಮೂಲಕವೇ ನಾವು ನಮ್ಮನ್ನು-ನಮ್ಮ ಬೇರುಗಳಿಂದ ಬೇರ್ಪಟ್ಟು ಬುಡಮೇಲುಗೊಳ್ಳದಂತೆ ಕಾಪಾಡಿಕೊಳ್ಳಬಹುದು ಎನ್ನುತ್ತದೆ ಈ ಲೇಖನ-ಸಂ




**ಕ**ರೋನಾ ಕಾರಣಕ್ಕೆ ಲಾಕ್‌ಡೌನ್ ಆದಾಗ ಲಕ್ಷಾಂತರ ಕೆಲಸಗಾರರು ದಿಕ್ಕು ತೋಚದಂತಾದರು. ಅವರು ನಂಬಿದ್ದ ಉದ್ಯೋಗ ಕೈತಪ್ಪಿಹೋಗಿತ್ತು. ಗಳಿಸುತ್ತಿದ್ದ ಕೂಲಿಯಲ್ಲಿ ತಮ್ಮ ಸ್ವಂತ ಊರುಗಳಲ್ಲಿರುವ ಅವಲಂಬಿತರೂ ಕೂಡ ಬದುಕಬೇಕಾಗಿತ್ತು ಅಥವಾ ಒಂದು ಮಟ್ಟಿಗಾದರೂ ಈ ಕೂಲಿಯ ಮೇಲೆ ಅವರೂ ಆಧಾರಪಟ್ಟಿದ್ದರು. ತಮ್ಮ ಕೆಲಸಕ್ಕೆ ಬಂದ ಕೂಲಿ ಹಣದಲ್ಲಿ ಹೆಚ್ಚಿನ ಉಳಿತಾಯವನ್ನೇನೂ ಮಾಡಿಕೊಂಡಿರದಿದ್ದ ಕೆಲಸಗಾರರು ಹೊತ್ತುಹೊತ್ತಿನ ಊಟ ತಿಂಡಿಗೂ ಪರದಾಡುವಂತಾಯಿತು. ದೂರದ ಊರುಗಳಿಂದ ಬಂದಿದ್ದ ಅವರೆಲ್ಲ ಯಾವುಯಾವುದೋ ಜೋಪಡಿಗಳಲ್ಲಿ ವಾಸವಾಗಿದ್ದರು. ಊರಿಗೆ ಹಿಂತಿರುಗಿ ಹೋಗುವುದೊಂದೇ ಮಾರ್ಗ ಅವರ ಮುಂದೆ ಉಳಿದುಕೊಂಡಿತ್ತು. ಅವರಿಗೆ ಪ್ರಯಾಣ ಮಾಡಲು ವಾಹನಗಳು ಲಭ್ಯವಿರಲಿಲ್ಲ. ಊರಿಗೆ ಹೋದ ಮೇಲೆ ಮಾಡಲು ಏನು ಉದ್ಯೋಗವಿದೆ ಎಂಬ ಬಗೆಯೂ ಕಲ್ಪನೆಯಿಲ್ಲ. ಅಲ್ಲಿ ಸಾಕಾಗುವಷ್ಟು ಕೂಲಿ ಹುಟ್ಟುವುದಿಲ್ಲವೆಂದೇ ಇಷ್ಟು ದೂರದ ಊರುಗಳಿಗೆ ಅವರು ಬಂದವರಾಗಿದ್ದರು. ಅಂಗಾಲುಗಳು ರಕ್ತ ಸುರಿಸುತ್ತಿದ್ದರೂ ಹೇಗೋ ಬದುಕಿಕೊಳ್ಳುವ ಭರವಸೆಯಿಟ್ಟುಕೊಂಡು ಅವರೆಲ್ಲ ಕಾಲ್ನಡಿಗೆಯಲ್ಲೇ ಊರುಗಳನ್ನು ತಲುಪಿದರು. ಈಗವರ ಸ್ಥಿತಿ ಹೇಗಿದೆಯೋ ಗೊತ್ತಿಲ್ಲ.

ಇಲ್ಲಿ ಉದ್ಯೋಗ ಮಾಡುತ್ತಿದ್ದಾಗ ಅವರು ಬಹಳ ಕಷ್ಟಪಟ್ಟು ದುಡಿಯುತ್ತಿದ್ದರು. ಊಟಕ್ಕೆ ಬೇಯಿಸಿಕೊಂಡ ರೊಟ್ಟಿಗಳು ಅಥವಾ ತಳ್ಳುವ ಗಾಡಿ ಹೋಟೆಲ್‌ಗಳಿಂದ ಪೊಟ್ಟಣ ಕಟ್ಟಿಸಿಕೊಂಡು ಬಂದ ಊಟ ಹೊಟ್ಟೆ ತುಂಬಿಸುತ್ತಿತ್ತು. ಬಂಧುಬಳಗದಿಂದ, ಸ್ವಂತ ಊರಿನಿಂದ ದೂರವಾಗಿ ಬರೀ ದುಡಿಮೆಯೊಂದನ್ನೇ ಮಾಡಿಕೊಂಡು, ಉಳಿದ ಸಾಮಾಜಿಕ-ಸಾಂಸ್ಕೃತಿಕ ಬಾಂಧವ್ಯಗಳಿಂದ ದೂರವಿದ್ದ ಅವರಿಗೆ ಮನಸ್ಸಿನಲ್ಲೊಂದು ಖಾಲಿತನದ, ಏಕತಾನತೆಯ ಭಾವನೆ ಉಳಿದುಕೊಂಡೇ ಇತ್ತು. ವರ್ಷಗಟ್ಟಲೆ ಇಲ್ಲಿದ್ದರೂ ಅವರಿಗೆ ಇಲ್ಲಿನ ಜನರ ಜೊತೆ ಸೌಹಾರ್ದ ಸಂಬಂಧ ಬೆಳೆಯುವ ಅವಕಾಶಗಳೇನೂ ಇರಲಿಲ್ಲ. ಅಪರಿಚಿತತೆ ಹಾಗೂ ಅನಾಮಿಕತೆಗಳಿಂದ ಬಾಧಿತರಾದ ಅವರು ಶಕ್ತಿ ಮೀರಿ ದುಡಿಯುತ್ತಿದ್ದರು. ಅವರಲ್ಲಿ ಮುಂಜಾನೆ, ಮಧ್ಯಾಹ್ನ, ಸಂಜೆ ಮೂರೂ ಹೊತ್ತು ಕುಡಿಯುವವರೂ ಇದ್ದರು. ಕೆಲವರು ಹಗಲಿನಲ್ಲಿ ಗುಟ್ಕಾ ಜಗಿದು, ಸಂಜೆ ಮಾತ್ರ ಕುಡಿಯುತ್ತಿದ್ದರು.

ಅವರು ನೆಲೆಸಿದ ಬೆಂಗಳೂರು ಹಾಗೂ ಸುತ್ತಮುತ್ತಲ ಊರುಗಳಲ್ಲಿ ಸ್ಥಳೀಯರಿಗೂ ಸಾಕಷ್ಟು ವ್ಯಾಪಾರ ವಹಿವಾಟು ನಿರ್ಮಾಣವಾಗಿತ್ತು. ಬಾಡಿಗೆಗೆ ರೂಮುಗಳನ್ನು ಕೊಡುವುದು, ತರಕಾರಿ ಅಂಗಡಿಗಳು, ಕುಡಿದಾಗ ನಂಚಿಕೊಳ್ಳಲು ಕಬಾಬ್, ಫಿಶ್ ಫ್ರೈ ತಯಾರಿಸುವುದು, ಕಟಿಂಗ್ ಶಾಪ್, ಟೀ ಶಾಫ್, ಪಾನ್ ಶಾಪ್, ಮೊಬೈಲ್ ಶಾಪ್, ಬಟ್ಟೆ ಅಂಗಡಿ- ಎಲ್ಲಾ ಚೆನ್ನಾಗಿಯೇ ಇತ್ತು. ಆಟೋ ಓಡಿಸುವವರು, ಬಾಡಿಗೆ ವಾಹನ ಓಡಿಸುವವರು, ಡಾಕ್ಟರ್ ಶಾಪ್‌ಗಳು. ಕೇವಲ ಹತ್ತು ವರ್ಷಗಳಲ್ಲಿ ಹಣದ ಚಲಾವಣೆ ವಿಪರೀತವಾಯಿತು.

ಆದರೆ ಒಂದು ಲಾಕ್‌ಡೌನ್ ಹೊಡೆತಕ್ಕೆ ಸರಣಿಯೋಪಾದಿಯಲ್ಲಿ ಆರ್ಥಿಕ

ಕನ್ನಡಿಗರು ಜಾತ್ರೆಯನ್ನೇ ಜೀವನ ಎಂದು ನಂಬಿ ತಮ್ಮ ಮಕ್ಕಳನ್ನು ಕನ್ನಡ ಎಂಬ ಊರಿನಿಂದ ವಲಸೆ ಕಳುಹಿಸುತ್ತಿದ್ದಾರೆ. ಆದ್ದರಿಂದ ಮಕ್ಕಳಲ್ಲಿ ಉಂಟಾಗುವ ಪರಕೀಯತೆ, ಸಾಂಸ್ಕೃತಿಕ ಟೊಳ್ಳುತನ ಅವರ ಗಮನಕ್ಕೆ ಬರುತ್ತಿಲ್ಲ. ತನ್ನ ಭಾಷಿಕ ಅನನ್ಯತೆಯನ್ನು ಕಳೆದುಕೊಳ್ಳುವ ಯುವ ಜನಾಂಗ ಕಳೆದುಕೊಳ್ಳುವುದು ಒಂದು ಭಾಷೆಯನ್ನು ಮಾತ್ರವಲ್ಲ. ಒಂದು ಪರಂಪರೆಯನ್ನು, ಒಂದು ಸಾಂಸ್ಕೃತಿಕ ವ್ಯಕ್ತಿತ್ವವನ್ನು, ಸಾಮುದಾಯಿಕ ವಿವೇಕವನ್ನು.

ಆಘಾತಗಳು ಎರಗಿದವು. ಇಷ್ಟೆಲ್ಲಾ ವಹಿವಾಟು ಇದ್ದಕ್ಕಿದ್ದಂತೆ ಬಂದ್ ಆದೊಡನೆ 'ಬಂಗಾರಕ್ಕೆ ಮಾರುಕಟ್ಟೆ ದರಕ್ಕಿಂತ ಹೆಚ್ಚು ಹಣ' ಕೊಡುತ್ತೇವೆಂದು ಪ್ರಕಟಣೆ ಕೊಡುವ ಬಂಗಾರದ ಲೇವಾದೇವಿ ಕಂಪನಿಗಳ ಭರಾಟೆ ಹೆಚ್ಚಿತು. ತಮ್ಮ ಬಳಿ ಇದ್ದ ಕಾರು, ವಾಹನಗಳನ್ನು ಮಾರಿದವರೆಷ್ಟೋ, ಹಳ್ಳಿಗೆ ತಂದು ಹೊದಿಕೆ ಹೊದಿಸಿ ನಿಲ್ಲಿಸಿದವರೆಷ್ಟೋ.

ಸ್ಥಿತಿ ಇನ್ನೂ ಸುಧಾರಣೆಗೊಂಡಿಲ್ಲ. ಈ ವರ್ಷ ಹೇಗಿರುತ್ತದೋ ಊಹಿಸಲು ಸಾಧ್ಯವಾಗುತ್ತಿಲ್ಲ. ಸರ್ಕಾರದ ಕೈಯಲ್ಲೂ ಹಣವಿಲ್ಲ ಎಂಬ ಸಬೂಬು ಮಾಮೂಲಿಯಾಗಿದೆ. ಕರೋನಾ ಬಂದಿಲ್ಲದಿದ್ದರೆ ಎಲ್ಲ ಸುಗಮವಾಗಿರುತ್ತಿತ್ತೇ, ಹಾಗೆಂದು ಭಾವಿಸಲಾಗುತ್ತಿದೆ. ಆದರೆ ಆರ್ಥಿಕ ಹಿಂಜರಿತದ ಪ್ರಕ್ರಿಯೆ ಆರಂಭವಾಗಿ ಒಂದು ದಶಕಕ್ಕೂ ಹೆಚ್ಚು ಕಾಲವಾಗಿದೆ. ಅಮೆರಿಕಾ ಸೇರಿದಂತೆ ಹಲವಾರು ಶ್ರೀಮಂತ ರಾಷ್ಟ್ರಗಳು ಆರ್ಥಿಕ ಮುಗ್ಗಟ್ಟಿನಲ್ಲಿವೆ. ಹಿಂದುಳಿದ ದೇಶಗಳಲ್ಲಿ ಅಪಾರ ಬಂಡವಾಳ ಹೂಡಿ ಲಾಭ????? ಸೂರೆ ಹೊಡೆಯುತ್ತಿದ್ದ ಬಹುರಾಷ್ಟ್ರೀಯ ಕಂಪನಿಗಳು ಕೂಡ ಮೂಲಭೂತ ಉತ್ಪಾದನಾ ಕ್ಷೇತ್ರದಲ್ಲಿ ಬಿಕ್ಕಟ್ಟು ಅನುಭವಿಸುತ್ತಿವೆ. ಆದ್ದರಿಂದ ಹೊಸಹೊಸ ಸೇವಾ ಕ್ಷೇತ್ರ ಮತ್ತು ದಿನಬಳಕೆಯ ಸರಕುಗಳ ಉತ್ಪಾದನೆ ಮತ್ತು ಮಾರಾಟಕ್ಕಿಳಿದಿವೆ. ಈಗಲ್ಲದಿದ್ದರೂ ಇನ್ನು ಕೆಲವು ವರ್ಷಗಳಲ್ಲಿ ಈ ಆರ್ಥಿಕತೆಯ ಭರಾಟೆ ಮಣ್ಣು ಮುಕ್ಕುತ್ತಿತ್ತೆಂಬುದರಲ್ಲಿ ಆಶ್ಚರ್ಯವೇನೂ ಇಲ್ಲ. ತಮ್ಮ ಊರು, ಸೀಮೆ ಬಿಟ್ಟು, ದುಡ್ಡು ನಂಬಿ ಬಂದಿದ್ದ ಕೆಲಸಗಾರರು; ಪ್ರಯಾಸದ ದುಡಿಮೆ ಮಾಡಿ ಹಣ ಕಾಣುತ್ತಿದ್ದೇವೆ, ಇದು ನಮ್ಮನ್ನು ಸಲಹುತ್ತದೆ ಎಂದು ಭಾವಿಸಿಕೊಂಡಿರುವವರು ಆರ್ಥಿಕ ಮಹಾಕ್ಷೋಭೆ ಬಂದೊಡನೆ ಕಂಗಾಲಾಗುವುದು ನಿಶ್ಚಿತ.

ಕನ್ನಡ ಭಾಷೆಯ ಬಿಕ್ಕಟ್ಟಿನ ಬಗ್ಗೆ ಬರೆಯಲು ಹೊರಟಾಗ ನನ್ನ ಕಣ್ಣ ಮುಂದೆ ಕಂಡಿದ್ದು ಈ ವಲಸೆ ಕೆಲಸಗಾರರ ದಾರುಣ ಉದಾಹರಣೆ. ಕನ್ನಡದ ಪೋಷಕರೂ ಕೂಡ ಈಗ ತಮ್ಮ ಮಕ್ಕಳನ್ನು ಇಂಗ್ಲಿಷ್ ಎಂಬ ಊರಿಗೆ ವಲಸೆ ಹೋಗುವಂತೆ ಮಾಡುತ್ತಿದ್ದಾರೆ. ಉದ್ಯೋಗ ಸಿಗುತ್ತದೆ ಎಂಬ ನಂಬಿಕೆ ಅವರದು. ಕನ್ನಡ ಭಾಷೆ ಓದಿದರೆ ಉದ್ಯೋಗ ಸಿಗುವುದಿಲ್ಲ ಎನ್ನುವ ಪರಿಸ್ಥಿತಿ ಯಾಕೆ ಬಂದಿದೆ? ಉದ್ಯೋಗವೆಂದರೇನು? ಹಣ ಗಳಿಕೆಯೆಂದರೇನು? ಆದಾಯ ಬರುತ್ತದೆ ಎಂದರೆ ಅದು ಯಾವ ಬಗೆಯ ಆದಾಯ? ಎಷ್ಟು ಸ್ಥಿರವಾದ ನೆಲೆಗಟ್ಟು ಅದಕ್ಕಿದೆ? ಎಂಬ ಬಗ್ಗೆ ಕನ್ನಡಿಗರು ಯೋಚಿಸುತ್ತಿರುವಂತಿಲ್ಲ. ಈಗ ಖಾಸಗೀಕರಣ, ಜಾಗತೀಕರಣದ ಜಾತ್ರೆ ನಡೆಯುತ್ತಿದೆ. ಜಾತ್ರೆ ನಡೆಯುವಾಗ ಟೆಂಟು ಅಂಗಡಿ, ಮರದ ಕೆಳಗಿನ ಹೋಟೆಲ್, ಸರ್ಕಸ್, ಟೂರಿಂಗ್ ಟಾಕೀಸ್, ಶರಬತ್ತು ಮಾರುವವರು, ರಂಕಲ ರಾಟೆ ತಿರುಗಿಸುವವರು ಎಲ್ಲರಿಗೂ ಉದ್ಯೋಗ ದೊರೆತಂತೆ ಆಗಿರುತ್ತದೆ. ಆದರೆ ಅದು ಉದ್ಯೋಗವಲ್ಲ. ಹಣದ ಚಲಾವಣೆ ಮಾತ್ರ. ಆ ಚಲಾವಣೆಯ ಭರಾಟೆಯೂ ಖಾತ್ರಿಯದಲ್ಲ.

ಆದರೆ ಕನ್ನಡಿಗರು ಜಾತ್ರೆಯನ್ನೇ ಜೀವನ ಎಂದು ನಂಬಿ ತಮ್ಮ ಮಕ್ಕಳನ್ನು ಕನ್ನಡ ಎಂಬ ಊರಿನಿಂದ ವಲಸೆ ಕಳುಹಿಸುತ್ತಿದ್ದಾರೆ. ಆದ್ದರಿಂದ ಮಕ್ಕಳಲ್ಲಿ ಉಂಟಾಗುವ ಪರಕೀಯತೆ, ಸಾಂಸ್ಕೃತಿಕ ಟೊಳ್ಳುತನ ಅವರ ಗಮನಕ್ಕೆ ಬರುತ್ತಿಲ್ಲ. ತನ್ನ ಭಾಷಿಕ ಅನನ್ಯತೆಯನ್ನು ಕಳೆದುಕೊಳ್ಳುವ ಯುವ ಜನಾಂಗ ಕಳೆದುಕೊಳ್ಳುವುದು ಒಂದು ಭಾಷೆಯನ್ನು ಮಾತ್ರವಲ್ಲ. ಒಂದು ಪರಂಪರೆಯನ್ನು, ಒಂದು ಸಾಂಸ್ಕೃತಿಕ ವ್ಯಕ್ತಿತ್ವವನ್ನು, ಸಾಮುದಾಯಿಕ ವಿವೇಕವನ್ನು. ಕರ್ನಾಟಕಕ್ಕೆ ಒಂದು ಆರ್ಥಿಕ ಬದುಕಿದೆ. ಅದು ಇತಿಹಾಸದಲ್ಲಿ ಸ್ವಾಭಾವಿಕವಾಗಿ ವಿಕಾಸಗೊಳ್ಳುತ್ತಾ ಸ್ಥಿರಗೊಂಡದ್ದು. ಕನಿಷ್ಠ ೧೫೦೦ ವರ್ಷಗಳ ಉತ್ಪಾದನಾ ಸಂಬಂಧಗಳ ಸಂರಚನೆ ಅದು. ಕೃಷಿ-ಹಲವು ಕೃಷಿ ವಲಯಗಳು ಒಂದಕ್ಕೊಂದು ಪರಸ್ಪರ ವಿನಿಮಯ ಸಂಬಂಧದಲ್ಲಿ ಜೊತೆಗೂಡುತ್ತಾ ರೂಪಿಸಿದ ಸಾಮಾಜಿಕ ಜೀವನ; ಕೃಷಿಯಲ್ಲಿ ಬಂದ ಹೆಚ್ಚುವರಿ

ಉತ್ಪಾದನೆ ಆಧರಿಸಿ ರೂಪುಗೊಂಡ ವಾಣಿಜ್ಯ ಮತ್ತು ಜೀವನಾವಶ್ಯಕ ಸರಕುಗಳ ಉತ್ಪಾದನೆ; ಜನರ ಜೀವನ ವಿಕಾಸಗೊಂಡಂತೆಲ್ಲಾ ಅದರ ಸಂಕೀರ್ಣ ಅಗತ್ಯಗಳನ್ನು ಪೂರೈಸಲು ನೆಲೆಗೊಳ್ಳುತ್ತಾ ಬಂದ ವೃತ್ತಿನಿರತ ಸಮುದಾಯಗಳು; ನೈಸರ್ಗಿಕ ಸಂಪನ್ಮೂಲಗಳು ಸೂಕ್ತ ಬಳಕೆಗಾಗಿ ಬೆಳೆದುಕೊಂಡು ಬಂದ ತಂತ್ರಜ್ಞಾನ; ಇವುಗಳ ಜೊತೆ ಜನರ ಲೌಕಿಕೇತರ ಅಗತ್ಯಗಳನ್ನು ಈಡೇರಿಸಲು ರೂಪುಗೊಂಡ ಧಾರ್ಮಿಕ ಪಂಥಗಳು, ಗುಡಿಗುಂಡಾರಗಳು, ಹಾಡು, ನಾಟಕಗಳು, ವಸ್ತ್ರಧಾರಣೆ ಶೈಲಿ ಕೂಡ ಭೌಗೋಳಿಕ ವಾತಾವರಣ ಆಧರಿಸಿ ರೂಪುಗೊಂಡಿತು. ಆಹಾರ ಕ್ರಮ, ವಾಸದ ನಿರ್ಮಾಣಗಳ ಸ್ವರೂಪ, ಸಂಚಾರ ಸಾಧನಗಳ ಬೆಳವಣಿಗೆ – ಇವೆಲ್ಲವೂ ಸೇರಿ ಒಂದು ಸಂಯೋಜಿತ ನಾಡನ್ನು ಸಾಕಾರಗೊಳಿಸಿದವು. ಪರಸ್ಪರ ಸಾವಯವ ಸಂಬಂಧವಿಲ್ಲದ ಆರ್ಥಿಕ ವಹಿವಾಟು ಎನ್ನುವುದಿರಲಿಲ್ಲ. ಸಂಪತ್ತು ದೋಚಿಕೊಳ್ಳಲು, ದುಡಿಮೆಯನ್ನು ಹಿಡಿತದಲ್ಲಿಟ್ಟುಕೊಳ್ಳಲು, ಮನೋಧೋರಣೆಗಳನ್ನು ಅಂಕುಶಕ್ಕೊಳಪಡಿಸಲು ಜಾತಿ ಮತ್ತು ಪುರೋಹಿತಶಾಹಿಯೂ ಇದರ ಜೊತೆ ಬೆಳೆದು ಬಂತೆಂಬುದೂ ಕೂಡ ವಾಸ್ತವ. ಅದು ಉಂಟುಮಾಡಿದ ಹಾನಿಗಳನ್ನು ಪಕ್ಕಕ್ಕಿಟ್ಟು ನೋಡಿದರೆ ಕನ್ನಡಿಗರು ಒಂದು ವಿಸ್ತಾರ ಭಾಷಿಕ ಸಮುದಾಯವಾಗಿ, ಕರ್ನಾಟಕ ಎಂಬುದು ಇಂತಹ ದೊಡ್ಡ–ಚಿಕ್ಕ ಭಾಷಿಕ ಸಮುದಾಯಗಳ ಬದುಕಿನ ರಂಗಸ್ಥಳವಾಗಿ ರೂಪುಗೊಂಡಿತು.

ಕರ್ನಾಟಕದ ವಿವಿಧ ಪ್ರಾಂತ್ಯಗಳು ತಮ್ಮ ವೈಶಿಷ್ಟ್ಯಗಳ ಸಮೇತವೇ ಜೋಡಣೆಗೊಂಡವು. ವಿವಿಧ ಭಾಷಿಕ ಸಮುದಾಯಗಳು ತಮ್ಮ ಆಡುನುಡಿಯ ಸತ್ವ ಉಳಿಸಿಕೊಂಡೇ ಕನ್ನಡದೊಂದಿಗೆ ??ಡಣೆಗೊಂಡವು. ಇವೆಲ್ಲವೂ ವಾಸ್ತವಿಕ ಅಗತ್ಯಗಳ ಆಧಾರದಲ್ಲಿ ಪರಸ್ಪರ ಜೋಡಣೆಗೊಂಡವು. ಈ ಜೋಡಣೆ ನಿರ್ಬಂಧಕಾರಿಯಾಗಿರಲಿಲ್ಲ. ಅನನ್ಯತೆ ಮತ್ತು ಏಕತೆ ಪರಸ್ಪರ ಅನುಸಂಧಾನದಲ್ಲಿದ್ದು ಒಂದು ಭಾಷಾ ಭೌಗೋಳಿಕ ಘಟಕವಾಗಿ ಚಾಲ್ತಿಗೊಂಡಿತು. ಕನ್ನಡವೇ ಅನ್ನದ ಭಾಷೆಯಾಗಿತ್ತು. ಆ ಅನ್ನದ ಭಾಷೆಯಾದರೂ ಸ್ವಯಂಭೂ ಆಗಿರಲಿಲ್ಲ. ಸಹೋದರ ಸಹೋದರಿ ಭಾಷೆಗಳ ಸತ್ವವನ್ನೂ ಒಳಗೊಂಡಂತೆ ಅದು ಸಾಮಾನ್ಯ ಸಂವಹನ ಭಾಷೆಯಾಗಿ ಬೆಳೆಯಿತು. ಅದು ಅನ್ನದ ಭಾಷೆ, ಆಡಳಿತದ ಭಾಷೆ, ಸಾಹಿತ್ಯದ ಭಾಷೆ, ಆಧ್ಯಾತ್ಮದ ಭಾಷೆ, ಸಂಶೋಧನೆಯ ಭಾಷೆ, ತಂತ್ರಜ್ಞಾನದ ಪರಿಭಾಷೆ ಎಲ್ಲವೂ ಆಗಿ ರೂಪುಗೊಂಡಿತು. ಕರ್ನಾಟಕ ಒಂದು ನಾಡಾಗಿ, ಕನ್ನಡ ಒಂದು ಭಾಷೆಯಾಗಿ ಬೆಳೆದು ಬರುವಾಗ ತನ್ನ ನೆರೆಯ ಭಾಷಿಕ ರಾಜ್ಯಗಳಿಂದ ಗೋಡೆ ಕಟ್ಟಿಕೊಂಡು ಪ್ರತ್ಯೇಕತೆ ಕಾಪಾಡಿಕೊಂಡಿರಲಿಲ್ಲ. ದಕ್ಷಿಣಾಪಥದ ಉದ್ದಕ್ಕೂ ಕನ್ನಡಿಗರು ವಹಿವಾಟು ಇಟ್ಟುಕೊಂಡಿದ್ದರು. ಉತ್ತರಾಪಥದವರೂ ಇಲ್ಲಿ ಬಂದು ವಾಣಿಜ್ಯ ವಿನಿಮಯ ನಡೆಸುತ್ತಿದ್ದರು. ಸಮುದ್ರ ದಾಟಿ ಬೇರೆ ದೇಶಗಳ ಜೊತೆ ವ್ಯವಹರಿಸುವುದೂ ಅಪರಿಚಿತವಾಗಿರಲಿಲ್ಲ.

ಕನ್ನಡಿಗರಲ್ಲಿ ಹಲವರಿಗೆ ಹಲವು ಭಾಷೆಗಳು ಗೊತ್ತಿದ್ದವು. ಇದರಿಂದಾಗಿ ಎಷ್ಟೆಷ್ಟೋ ಹೊಸಜ್ಞಾನ, ತಂತ್ರಜ್ಞಾನ, ಪದಸಂಪತ್ತು ಹಾಗೂ ಧನಸಂಪತ್ತು ಲಭ್ಯವಾಯಿತು. ಹೀಗಿದ್ದ ಕರ್ನಾಟಕ ಬ್ರಿಟಿಷ್ ಆಳ್ವಿಕೆಯಿಂದ ಆರಂಭವಾಗಿ ತನ್ನ ಬದುಕಿನ ಭದ್ರ ನೆಲೆಗಳಿಗೆ ಕುತ್ತು ಕಂಡಿತು. ಪರಸ್ಪರ ಜೈವಿಕ ಸಂಬಂಧ ಹೊಂದಿದ್ದ ಆರ್ಥಿಕ ಸಂರಚನೆಯಲ್ಲಿ ಖಾಲಿ ಸ್ಥಳಗಳು ಏರ್ಪಡತೊಡಗಿದವು. ರೈತರು ಬಡವರಾದರು. ವೃತ್ತಿನಿರತ ಸಮುದಾಯಗಳು ಔದ್ಯೋಗಿಕವಾಗಿ ಪೆಟ್ಟು ತಿಂದವು. ಇಷ್ಟಾದರೂ ಕನ್ನಡ ಬೆಳೆಯಿತು. ಕನ್ನಡ ಕಲಿಸುವ ಶಾಲೆಗಳು ಲಕ್ಷಾಂತರ ಜನರಿಗೆ ಆಧುನಿಕ ರೀತಿಯಲ್ಲಿ ಭಾಷೆ, ವಿಜ್ಞಾನ, ರಾಜ್ಯಶಾಸ್ತ್ರ, ಗಣಿತ ಕಲಿಸಿದವು. ಪರಂಪರೆಯ ಭಾಷೆ ಈ ಆಧುನಿಕ ಕಾಯಕಲ್ಪದಿಂದ ಕೈಗಾರಿಕೀಕರಣದ ಸಮಾಜಕ್ಕೂ ಹೊಂದಿಕೊಳ್ಳುವಂತೆ ಬೆಳೆಯಿತು. ಉನ್ನತ ಶಿಕ್ಷಣವನ್ನೂ ಕನ್ನಡದಲ್ಲೇ ಒದಗಿಸಲಾಯಿತು. ಸ್ವಾತಂತ್ರ್ಯ ನಂತರದಲ್ಲಿ ಮೊದಲ ಮೂರು ದಶಕಗಳಲ್ಲಿ ಕನ್ನಡ ಗಟ್ಟಿಗೊಂಡ ಬಗೆ ಇದು. ಅನುವಾದ ಮತ್ತು ಸ್ವಂತ ರಚನೆಗಳ ಶಾಸ್ತ್ರಗ್ರಂಥಗಳ ?ಂಡಾರವೂ ಸೃಷ್ಟಿಯಾಯಿತು.

ಆವರೆಗೆ ಅರ್ಧ ಸ್ಥಳೀಯ ಉತ್ಪಾದನೆ, ಅರ್ಧ ಹೊರಗಿನಿಂದ ಬಂದ ಉತ್ಪಾದನೆ ಎಂಬಂತಿದ್ದ ಪರಿಸ್ಥಿತಿ ೯೦ರ ದಶಕದ ನಂತರ ಧಾನ್ಯ, ಹಾಲು, ಹೈನು ಮತ್ತಿತರೆ ಕೆಲವು ಆಹಾರ ಸಾಮಗ್ರಿಗಳನ್ನು ಹೊರತುಪಡಿಸಿದರೆ ಮಿಕ್ಕ ಅನುಭೋಗಿ ಸರಕುಗಳಿಗಾಗಿ ಆಮದನ್ನು ಅವಲಂಬಿಸಲಾಯಿತು. ಕೃಷಿ ಕ್ಷೇತ್ರಕ್ಕೆ ಬಳಕೆಯಾಗುವ ಬೀಜ, ಗೊಬ್ಬರ, ಸಾಧನೋಪಕರಣಗಳು ಕೂಡ ವಿದೇಶೀ ತಂತ್ರಜ್ಞಾನ ಆಧರಿಸಿ ಇಲ್ಲಿ ಉತ್ಪಾದನೆಗೊಂಡವು. ಬಹಳ ಬೇಗನೆ ಉತ್ಪಾದನಾ ಕ್ಷೇತ್ರದ ಮುಖ್ಯ ಚಟುವಟಿಕೆಗಳು ವಿದೇಶೀ ತಂತ್ರಜ್ಞಾನ ಮತ್ತು ವಿದೇಶೀ ಬಂಡವಾಳಗಳನ್ನು ಆಧರಿಸಿ ನಡೆಯತೊಡಗಿದವು. ಬೆಳೆಗಳನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಯ ಅಗತ್ಯಗಳಿಗೆ ಅನುಸಾರವಾಗಿ ಮಾರ್ಪಡಿಸಲಾಯಿತು.

ಕಳೆದ ಎರಡು ದಶಕಗಳಿಂದ ಸೇವಾ ವಲಯವೂ ವಿದೇಶೀ ಬಂಡವಾಳ ಮತ್ತು ತಂತ್ರಜ್ಞಾನಕ್ಕೆ ಮುಕ್ತವಾಯಿತು. ಆರ್ಥಿಕ ಕ್ಷೇತ್ರ ಪ್ರಧಾನವಾಗಿ ನಗರಕೇಂದ್ರಿತವಾಗಿ ತಂತ್ರಜ್ಞಾನಾಧಾರಿತವಾಗಿ ರೂಪುಗೊಂಡಿತು. ದೇಶದ ಜಿಡಿಪಿಗೆ ಹೆಚ್ಚಿನ ಪ್ರಮಾಣದ ಕೊಡುಗೆ ನೀಡುತ್ತಿದ್ದ ಕೃಷಿ ಕ್ಷೇತ್ರ ಹಿಂದೆ ಸರಿದು ಐಟಿ ಉದ್ಯಮ ಆ ಸ್ಥಾನ ಆಕ್ರಮಿಸಿತು. ಈ ಬೆಳವಣಿಗೆಯಾದ ಹೊತ್ತಲ್ಲೇ ಕನ್ನಡವೆಂಬುದು ಅನ್ನ ಕೊಡುವ ಭಾಷೆಯಲ್ಲ ಎಂಬ ಮಾತು ಹುಟ್ಟಿತು. ಇಂಗ್ಲಿಷ್ ಉದ್ಯೋಗದ ಭಾಷೆ ಎಂಬ ಮನಃಸ್ಥಿತಿ ಕ್ರಮೇಣ ಭಾರತಾದ್ಯಂತ ಹುಟ್ಟಲು ಮುಕ್ತ ಆರ್ಥಿಕನೀತಿ ಕಾರಣವಾಯಿತು.

ಇಂಗ್ಲಿಷ್ ಕಲಿತರೆ ಉದ್ಯೋಗ ಸಿಗುತ್ತದೆ. ಹೆಚ್ಚು ಕೂಲಿ ಸಿಗುತ್ತದೆ ಎಂಬ ಭ್ರಮೆಯನ್ನು ಹಳ್ಳಿಹಳ್ಳಿಗಳಿಗೂ ಹಬ್ಬಿಸಲಾಗಿದೆ. ಇದರಿಂದ ಆರ್ಥಿಕ ವಹಿವಾಟಿನಲ್ಲಿ ಬಹುಪಾಲು ಕನ್ನಡಿಗರು ಕೇವಲ ನೌಕರಿದಾರರು ಮತ್ತು ವಿದೇಶೀ ಕಂಪನಿಗಳ ಸರಕುಗಳ ಗ್ರಾಹಕರೂ ಆಗಿದ್ದಾರೆ. ಕರ್ನಾಟಕವೀಗ ಒಂದು ಸುಸಂಯೋಜಿತ ಉತ್ಪಾದನಾ ಘಟಕವಾಗಿ ಉಳಿದಿಲ್ಲ. ಉತ್ಪಾದನಾ ಕ್ಷೇತ್ರದ ಸುಸಂಯೋಜನೆ ತಪ್ಪಿ ಉತ್ಪಾದನೆಯಲ್ಲಿ ಮಾಲೀಕರಾಗಿ ಪಾಲ್ಗೊಳ್ಳುವುದು ಇಲ್ಲವಾದೊಡನೆ 'ಚಾಕರಿ ಪ್ರಜ್ಞೆ' ಪ್ರಬಲಗೊಂಡಿದೆ. ಹಾಗಾಗಿ ಚಾಕರರಾಗಲು ಕನ್ನಡಿಗರು ತಮ್ಮ ಮಕ್ಕಳನ್ನು ಕನ್ನಡ ಕಲಿಕೆಯಿಂದ ದೂರ ಮಾಡತೊಡಗಿದ್ದಾರೆ.

ಇದರಿಂದ ಕರ್ನಾಟಕಕ್ಕೆ ಕುತ್ತಾಗುವುದಿಲ್ಲವೇ. ಕರ್ನಾಟಕದ ಅಸ್ಮಿತೆ, ಅನನ್ಯತೆ, ಸ್ವಂತ ಅಸ್ತಿತ್ವ ಹಾಳಾಗುವುದಿಲ್ಲವೇ? ಈ ಬಗ್ಗೆ ನಾಡುನುಡಿಯ ಅಭಿಮಾನದಿಂದ ಆಲೋಚಿಸುವ ಮನಃಸ್ಥಿತಿ ಜನರಲ್ಲಿ ಎಷ್ಟಿದೆ. ಕನ್ನಡಕ್ಕೆ ಏನಾಗುತ್ತದೋ ಅವರಿಗೆ ಪ್ರಶ್ನೆ?ಲ್ಲ. ತಮ್ಮ ಕುಟುಂಬಕ್ಕೆ ಕೂಲಿ ಹುಟ್ಟುತ್ತದೆ ಅಷ್ಟೆ. ಈ ಬಗೆಯಲ್ಲಿ ವಿದ್ಯಾಭ್ಯಾಸ ಪಡೆದ, ಇಂಗ್ಲಿಷ್ ಕಲಿತ ಚಾಕರರಿಂದ ಕರ್ನಾಟಕದಲ್ಲಿ ಸ್ವಂತ ತಂತ್ರಜ್ಞಾನ ಬೆಳೆಯುತ್ತದೆಯೇ? ಉತ್ಪಾದನೆಯಲ್ಲಿ ಕ್ರಿಯಾಶೀಲವಾಗಿ ತೊಡಗಿಕೊಳ್ಳಲು ಆಗುತ್ತದೆಯೇ? ಸ್ವಂತಿಕೆಯ ಆಲೋಚನೆ, ಅಭಿಪ್ರಾಯಗಳಿರುತ್ತವೆಯೇ? ಹಣಕಾಸು ಲೆಕ್ಕಾಚಾರವನ್ನೂ ಮೀರಿದ ಮಾನವೀಯ ಸ್ಪಂದನಗಳಿರುತ್ತವೆಯೇ? ಹೋಗಲಿ ನಿಜವಾದ ಭಾಷಾಹಿಡಿತ ಮತ್ತು ಅಭಿವ್ಯಕ್ತಿಶಕ್ತಿ ಬರುತ್ತದೆಯೇ? ಎಷ್ಟೇ ಕಲಿತರೂ ನಾವು ಇಂಗ್ಲಿಷಿನವರಾಗಲು ಸಾಧ್ಯವೇ? ಇಡೀ ಕರ್ನಾಟಕಕ್ಕೆ ಇಂಗ್ಲಿಷ್ ಉದ್ಯೋಗ ಮತ್ತು ಜೀವನಾಧಾರ ಒದಗಿಸುತ್ತದೆಯೇ? ಈ ಎಲ್ಲಾ ಪ್ರಶ್ನೆಗಳು ಮೈಲು ದೂರ ಹೋದಂತಿವೆ. ಇವುಗಳನ್ನು ಕಟ್ಟಿಕೊಂಡು ಯಾರಿಗೇನಾಗಬೇಕು?

ಕೇಂದ್ರ ಸರ್ಕಾರಕ್ಕೆ ಕರ್ನಾಟಕ ತೆರಿಗೆ ಪಾವತಿದಾರನಾಗಿರುವುದು ಮುಖ್ಯ. ಅದರ ಆದಾಯ ಸ್ಥಿರ ಆರ್ಥಿಕತೆಯಿಂದ ಬರುತ್ತಿದೆಯೋ ಇಲ್ಲವೋ ಲೆಕ್ಕಕ್ಕಿಲ್ಲ. ಅಲ್ಲಿ ಹಣಕಾಸು ಚಲಾವಣೆ ನಡೆಯುತ್ತಿದ್ದರೆ ಸಾಕು. ಮೂಲ ಉತ್ಪಾದನಾ ಕ್ಷೇತ್ರಗಳು ಸಬಲಗೊಳ್ಳುತ್ತಿವೆಯೇ, ಅತಂತ್ರಗೊಳ್ಳುತ್ತಿವೆಯೇ ಎಂಬ ಪ್ರಶ್ನೆಯಿಲ್ಲ. ಕರ್ನಾಟಕ ಎಂಬ ಒಂದು ಅಸ್ತಿತ್ವ ತನ್ನ ಅಸ್ಮಿತೆಯನ್ನು ಕಾಪಾಡಿಕೊಳ್ಳದಿರುವುದೇ ಕೇಂದ್ರ ಸರ್ಕಾರಕ್ಕೆ ಬೇಕು. ವಹಿವಾಟಿಗೆ ಇಂಗ್ಲಿಷ್, ದೇಶಾಭಿಮಾನಕ್ಕೆ ಹಿಂದಿ, ಸನಾತನ ಪರಂಪರೆಯ ಹೆಮ್ಮೆಗೆ ಸಂಸ್ಕೃತ ಈ ಮೂರು ಭಾಷೆಗಳನ್ನು ಕಲಿತರೆ ದೇಶ ಅಭಿವೃದ್ಧಿಯಾಗುತ್ತದೆ, ಕನ್ನಡದಿಂದ ಆಗಬೇಕಾದುದೇನು ಎಂದು ಅದು ಆಲೋಚಿಸುತ್ತಿದೆ. ಹೊಸ ಶಿಕ್ಷಣ ನೀತಿಯಲ್ಲಿ ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ ಕೊಡುವುದು ಅಪೇಕ್ಷಣೀಯ ಎಂದು ತಿಪ್ಪೆ ಸಾರಿಸಲಾಗಿದೆ. ಆದರೆ ಅದು ನೀತಿ ಎಂದಾಗಿಲ್ಲ. ನೀತಿ ಎಂದಾಗಿರುವುದು ಹಿಂದಿ, ಸಂಸ್ಕೃತಗಳ ಪರವಾಗಿ ಮಾತ್ರ. ಖಾಸಗಿ ಶಾಲೆಗಳಿರುವವರೆಗೂ ಇಂಗ್ಲಿಷ್ ಹೇಗೂ ಇದ್ದೇ ಇರುತ್ತದೆ ಎಂಬ ದೃಢ ನಂಬುಗೆ ಅದರದ್ದು. ಹಾಗಾದರೆ ಕನ್ನಡ ಕಲಿಕೆಯ ವಿಷಯ?

ರಾಜ್ಯ ಸರ್ಕಾರಕ್ಕೆ ಕರ್ನಾಟಕದಲ್ಲೂ ಒಂದು ಸರಕಾರವಿರಬೇಕೆಂದಿದೆಯೇ ಹೊರತು ಅದು ಸ್ವಾಯತ್ತ ಸರ್ಕಾರವಾಗಿರಬೇಕು ಎಂದಿಲ್ಲ. ಅದಕ್ಕೀಗ ಬೇಕಿರುವುದು ಜನರ ಬೆಂಬಲವಲ್ಲ. ವಾಣಿಜ್ಯ ಕಂಪನಿಗಳ ಬೆಂಬಲ. ಅವು ಕೊಡುವ ಹಣಕ್ಕಾಗಿ ಅವುಗಳಿಗಾಗಿಯೇ ನಿರ್ಮಾಣ ಯೋಜನೆಗಳನ್ನು ರೂಪಿಸಿದರೆ ಆಯಿತು. ಅದರಿಂದ ಪಕ್ಷಕ್ಕೆ, ನಾಯಕರಿಗೆ ಬೇಕಾದಷ್ಟು ರಿಷ್ವತ್ತು ಸಿಗುತ್ತದೆ. ಆ ಹಣವನ್ನೇ ಚುನಾವಣೆಯಲ್ಲಿ ಹಂಚಿದರೆ ಜನರು ಮತ ಹಾಕುತ್ತಾರೆ. ಎಷ್ಟು ಹಣ ಹಂಚುತ್ತಾರೆ ಎಂಬುದು ಮುಖ್ಯ, ಕರ್ನಾಟಕ, ಕನ್ನಡ ಇತ್ಯಾದಿ ಕಾಪಾಡುವ, ಬೆಳೆಸುವ ಮಾತುಗಳಿಗೆ ಮಾರುಹೋಗುವ ಜನರೆಲ್ಲಿದ್ದಾರೆ ಈಗ?

ಹಣ ಗಳಿಕೆಯೊಂದನ್ನೇ ಬಹಳ ದೊಡ್ಡ ಮೌಲ್ಯ ಮಾಡಿರುವ ಸಾಮಾಜಿಕ ಸಂದರ್ಭ ನಮ್ಮೆದುರಲ್ಲಿದೆ. ನಾಡು–ನುಡಿ, ನ್ಯಾಯ–ನೀತಿಗಳ ಪದಬಳಕೆ ಒಂತರಾ ತುಕ್ಕು ಹಿಡಿದ ನಾಣ್ಯಗಳಂತಾಗಿವೆ. ಹಾಗಾಗಿಯೇ ಸರ್ಕಾರಿ ಶಾಲೆಗಳು ಕೂಡ ಇಂಗ್ಲಿಷ್ ಮಾಧ್ಯಮದ ಶಾಲೆಗಳಾಗಿ ಬದಲಾದರೆ ಮಾತ್ರ ಉಳಿಗಾಲ ಎಂಬಂತಾಗಿದೆ. ಕನ್ನಡವನ್ನು ಕೇಳುವವರು ಯಾರು? ಪರಿಸ್ಥಿತಿ ಹೀಗೇ ಮುಂದುವರಿದರೆ ಈಗ ಶಾಲೆಗೆ ಸೇರುತ್ತಿರುವ ಮಕ್ಕಳು ನಾಳೆ ಕನ್ನಡದಲ್ಲಿ ಓದಲು, ಬರೆಯಲು ಬರದಂತಾಗುತ್ತಾರೆ. ಕನ್ನಡ ಸಾಹಿತ್ಯ ಓದುವವರು ಯಾರು? ಕನ್ನಡ ಕೇವಲ ಅಡುನುಡಿ ಮಾತ್ರವಾಗಿದ್ದರೆ ಅದರ ಘನತೆಗೆ, ಪ್ರಗತಿಗೆ ಕುತ್ತು ಬರುತ್ತದೆ. ಬಂಧು ಬಳಕೆಯ, ಮನೆ ಬಳಕೆಯ ವ್ಯಾಪ್ತಿಗೆ ಸೀಮಿತವಾಗಿರುವ ಎಷ್ಟೋ ಭಾಷೆಗಳಿಗೆ

(೯ನೇ ಪುಟಕ್ಕೆ

# ಶಾಸ್ತ್ರೀಯ ಕನ್ನಡ ಎನ್ನುವುದು ಹುಡುಕಾಟದ ಕನ್ನಡ : ಪ್ರೊ. ಶಿವರಾಮಶೆಟ್ಟಿ

## ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರೊಂದಿಗೆ ಸಂದರ್ಶನ ಸಂದರ್ಶಕರು: ಸಂತೋಷ್ ಚೊಕ್ಕಾಡಿ

**ಸಾರ್ವಜನಿಕ ರಂಗಗಳಲ್ಲಿ ಕನ್ನಡದ ಬಳಕೆ ಕಡಿಮೆಯಾಗುತ್ತಾ, ಅದರ ಸಮೃದ್ಧಿ ಮತ್ತು ಬೆಳವಣಿಗೆ ಕುಂಠಿತವಾಗುತ್ತಿದ್ದರೂ, ಈ ಸ್ಪರ್ಧಾತ್ಮಕ ಯುಗದಲ್ಲಿ ಅದಕ್ಕೆ ತೊಡಿಸಲಾಗುತ್ತಿರುವ ಹೊರ ಆಭರಣಗಳಿಗೇನೂ ಕೊರತೆಯಾಗಿಲ್ಲ. ಶಾಸ್ತ್ರೀಯ ಭಾಷೆ ಎಂಬುದು ಇಂತಹ ಒಂದು ಆಭರಣ. ಇದು ಆಭರಣವಿದ್ದಂತಾಗಿರುವುದೇ ಅದು ಘೋಷಣೆಯಾಗಿ ಒಂದು ದಶಕಕ್ಕಿಂತಲೂ ಹೆಚ್ಚು ಕಾಲ ಕಳೆದಿದ್ದರೂ, ಅದರಿಂದ ಕನ್ನಡಕ್ಕೇನು ದೊರೆತಿದೆ ಎಂಬುದು ಕನ್ನಡಿಗರಿಗೆ ಸ್ಪಷ್ಟವಾಗದಿರಲು ಕಾರಣವಿರಬಹುದು. ಇದನ್ನು ಸ್ಪಷ್ಟಪಡಿಸಲೆಂದೇ ಸ್ಥಾಪಿತವಾಗಿರುವ ಮೈಸೂರಿನಲ್ಲಿನ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಈಗ ನಿಜವಾದ ಅಧ್ಯಯನದಲ್ಲಿ ತೊಡಗಿದವರೆಂದು ಹೆಸರಾದ ಪ್ರೊ. ಬಿ ಶಿವರಾಮ ಶೆಟ್ಟಿಯವರು ನಿರ್ದೇಶಕರಾಗಿ ನೇಮಕವಾಗಿದ್ದಾರೆ. ಅದೂ ಒಂದು ವರ್ಷದ ಅವಧಿಗಂತೆ! ಆದರೂ ಅವರಿಂದ ಕನ್ನಡಕ್ಕೆ ಬೆಲೆಯುಳ್ಳದ್ದೇನಾದರೂ ಸಲ್ಲಬಹುದೆಂಬ ನಿರೀಕ್ಷೆಯಿಂದ 'ಹೊಸ ಮನುಷ್ಯ'ದ ಪರವಾಗಿ ಕವಿ, ವಿಮರ್ಶಕ ಹಾಗೂ ಕನ್ನಡ ಅಧ್ಯಾಪಕ ಸಂತೋಷ ಚೊಕ್ಕಾಡಿ ಅವರನ್ನು ಮಾತನಾಡಿಸಿದ್ದಾರೆ.-ಸಂ**



**ಸರ್, ನಮಸ್ಕಾರ, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಬಂದಿದ್ದೀರಿ. ತಮಗೆ ಮೊದಲಿಗೆ ಅಭಿನಂದನೆಗಳು. ಸರ್, ತಮ್ಮ ದೃಷ್ಟಿಯಲ್ಲಿ ಶಾಸ್ತ್ರೀಯ ಕನ್ನಡ ಎಂದರೇನು, ಅದರಿಂದ ಕನ್ನಡಕ್ಕಾಗುವ ಉಪಯೋಗಗಳೇನು? ಇದರ ಹುಟ್ಟಿನ ಹಿನ್ನೆಲೆ ಬಗ್ಗೆ ಹೇಳುವಿರಾ ?**

ಎಲ್ಲ ವಿಷಯಗಳ ಬಗ್ಗೆ ವಿಚಾರಮಾಡುವ ಮೊದಲು ಈ ಕೇಂದ್ರ ಸ್ಥಾಪನೆಯಾದ ಉದ್ದೇಶ ಮತ್ತು ಅದರ ಆಶಯ, ಹಿನ್ನೆಲೆಗಳನ್ನು ತಿಳಿದುಕೊಳ್ಳೋಣ. ನಮಗೆಲ್ಲ ಗೊತ್ತಿದ್ದ ಹಾಗೆ ಈ ಶಾಸ್ತ್ರೀಯ ಭಾಷೆ ಅಂದುಕೊಳ್ಳುವ ವಿದ್ಯಮಾನ ಶುರುವಾದದ್ದು ಇತ್ತೀಚೆಗೆ, ಅಂದರೆ ಬಹಳ ಮುಖ್ಯವಾಗಿ ಇದು ೨೦೦೦ದ ನಂತರದ ವಿದ್ಯಮಾನ. ಈ ಒಂದು ಕಾಲಘಟ್ಟವನ್ನು ಗಮನಿಸಬೇಕು. ನಮ್ಮ ದೇಶದ ಇತಿಹಾಸದಲ್ಲಿ ಶಾಸ್ತ್ರೀಯ ಭಾಷೆ ಎಂದು ಭಾರತ ಸರ್ಕಾರ ೨೦೦೪ರಲ್ಲಿ ಮೊದಲು ಘೋಷಿಸಿದ್ದು ತಮಿಳನ್ನು. ಅದರ ಹಿನ್ನೆಲೆ ಗಮನಿಸಿದರೆ ಅದು ರಾಜಕೀಯ ಪ್ರಕ್ರಿಯೆಯಾಗಿ ಆರಂಭವಾದದ್ದು. ಇದನ್ನು ನಿರ್ಣಯ ಮಾಡುವುದು ಪ್ರಭುತ್ವ, ಅಧಿಕಾರ ಕೇಂದ್ರಗಳು ನಿರ್ಣಯ ಮಾಡುವಾಗ ಸಹಜವಾಗಿ ಅಧಿಕಾರದ ನೆರಳು ಇದ್ದೇ ಇರುತ್ತದೆ. ತಮಿಳಿಗೆ ಬಂದಾಗ ದಕ್ಷಿಣ ಭಾರತದ ಬೇರೆ ಭಾಷೆಗಯೀ ಮಾನ್ಯತೆ ಕೇಳುವ ಪ್ರಯತ್ನ ಮಾಡಿದವು. ಆನಂತರ ೨೦೦೮ರಲ್ಲಿ ಕನ್ನಡವನ್ನು ಶಾಸ್ತ್ರೀಯ ಭಾಷೆ ಎಂದು ಘೋಷಿಸಲಾಯಿತು. ಆದರೆ ಅದಕ್ಕೆ ಒಂದು ಸ್ಪಷ್ಟ ನೆಲೆ ಇರಲಿಲ್ಲ, ಮಾರ್ಗದರ್ಶಿ ನಕ್ಷೆ ಕೂಡಾ ಇರಲಿಲ್ಲ, ಸಾಹಿತ್ಯ, ಶಾಸನದ ಮೂಲಕ ಭಾಷೆಯೊಂದರ ಪ್ರಾಚೀನತೆಯನ್ನು ಗ್ರಹಿಸಲಾಗಿತ್ತು. ಆದರೆ ಈಗ ಕೇಂದ್ರ ಹೇಗೆ ಮುನ್ನಡೆಯಬೇಕು, ಅದರ ನಡಿಗೆ ಹೇಗಿರಬೇಕು ಎಂದು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ. ಅದು ಭಾಷೆ, ಸಾಹಿತ್ಯ ಮಾತ್ರವಲ್ಲ ಅದು ಭಾಷೆಗೆ ಸಂಬಂಧಿಸಿದ ಬೇರೆ ಬೇರೆ ಸಂಗತಿಗಳೂ ಸೇರಿದ ಶಾಸ್ತ್ರೀಯ ಕನ್ನಡ ಎಂಬ ನಿಲುವಿಗೆ ಬರಬೇಕಾಗಿದೆ. ಈ ಕೆಲಸಗಳಿಗಾಗಿಯೇ ೨೦೧೧ರಲ್ಲಿ ಈ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಸ್ಥಾಪನೆಯಾಗಿದೆ. ಅನೇಕ ಕೆಲಸಗಳು ಅಲ್ಲಿಂದೀಚೆಗೆ ಆಗಿವೆ. ಈಗ ಜನರು ಮಾತನಾಡುವ ಭಾಷೆಯನ್ನೂ ಪರಿಗಣಿಸಿಕೊಂಡು ಕನ್ನಡದ ಪ್ರಾಚೀನತೆಯನ್ನು ಪುನರ್‌ರಚಿಸುವ ಕೆಲಸ ಮಾಡಬೇಕಾಗಿದೆ. ಈ ಮೂಲಕ ಶಾಸ್ತ್ರೀಯ ಕನ್ನಡವನ್ನು ಕಟ್ಟುವ ಕೆಲಸ ಆಗಬೇಕಾಗಿದೆ.

**ಸರ್. ಈ ಕೇಂದ್ರದ ಕಾರ್ಯನಿರ್ವಹಣೆಯ ಸ್ವರೂಪದ ಬಗ್ಗೆ ಹೇಳುವಿರಾ?**

**ಉ :** ಇದು ತಿಳಿವಳಿಕೆ ಸೃಷ್ಟಿಮಾಡುವ ಕೇಂದ್ರ. ಇಲ್ಲಿ ಯೋಜನೆಯೇ ಮುಖ್ಯವೇ ಹೊರತು ಉದ್ಯೋಗವಲ್ಲ. ಯೋಜನೆಯೆಂದರೆ ನಿರ್ದಿಷ್ಟ ಕಾಲಾವಧಿಯಲ್ಲಿ ಮುಗಿಸುವ ಯೋಜನೆಗಳು. ಶಾಸ್ತ್ರೀಯ ಕನ್ನಡ ಎಲ್ಲವನ್ನೂ ಒಳಗೊಳ್ಳುತ್ತದೆ. ಆ ಬಗೆಯಲ್ಲಿ ಕೇಂದ್ರವನ್ನು ರೂಪಿಸಬೇಕಾಗಿದೆ. ಈಗ ಶಾಸ್ತ್ರೀಯ ಎಂದರೆ ಭಾಷೆ, ಸಾಹಿತ್ಯ ಎಂಬುದು ಮಾತ್ರ ಎಂಬ ಭಾವನೆ ಇದೆ. ಇದರಿಂದ ಬಿಡಿಸಿಕೊಳ್ಳಬೇಕಾಗಿದೆ. ಎಲ್ಲವನ್ನೂ ಒಳಗೊಂಡು ಕನ್ನಡವನ್ನು ಕಟ್ಟಬೇಕಾಗಿದೆ. ಇನ್ನೂ ಒಂದು ಅಂಶವೆಂದರೆ ಇದರಲ್ಲಿ ಹೊಸಗನ್ನಡ ಬರುವುದಿಲ್ಲ. ಶಾಸ್ತ್ರೀಯ ಕನ್ನಡವೆಂದರೆ ಹಳೆಯದು ಎಂದು ಹೇಳುವ ಮೂಲಕ ಜೀವಂತ ಅಲ್ಲದ್ದು ಎಂದು ಭಾವಿಸಲಾಗಿದೆ. ಹೀಗೆ ನಿಲುಗಡೆಯಾಗಿ ಕಾಣುವುದೇ ಸಮಸ್ಯಾತ್ಮಕ. ಇಡೀ ಪ್ರಕ್ರಿಯೆ ಡಾಕ್ಯುಮೆಂಟೇಷನ್(ದಾಖಲೀಕರಣ), ರೀಸರ್ಚ್ (ಸಂಶೋಧನೆ)ರ್ ಮತ್ತು ಪ್ರೊಪಗೇಷನ್([ರಸಾರ) ಎಂಬ ಮೂರು ಆಯಾಮಗಳಲ್ಲಿ ನಡೆಯುತ್ತಿದೆ. ಈ ಚಟುವಟಿಕೆ ಶಾಸ್ತ್ರೀಯ ಕನ್ನಡದ ವ್ಯಾಪಕತೆಯನ್ನು ನಿರ್ಬಂಧಿಸಿಬಿಟ್ಟಿದೆ. ನನ್ನ ಯೋಚನೆ ಇದನ್ನು ಜನಪರಗೊಳಿಸುವ ಬಗೆ ಹೇಗೆ ಎಂಬುದು. ಸಿದ್ಧಮಾದರಿಯ ಕಲ್ಪನೆಯನ್ನು ಮೀರುವುದೇ ನಮ್ಮ ಅಗತ್ಯ. ಭಾರತೀಯ ಪರಂಪರೆಯಲ್ಲಿ ಓದು, ಬರಹದ ಜತೆ ಕೇಳುವ ಪರಂಪರೆ ಇದೆ. ಈ ಪರಂಪರೆಯಲ್ಲಿ ಶಾಸ್ತ್ರೀಯ ಕನ್ನಡವನ್ನು ಜನರ ಕನ್ನಡವನ್ನಾಗಿ ಮಾಡುವ ದಿಕ್ಕಿನಲ್ಲಿ ನಾವು ಕೆಲಸಗಳನ್ನು ಮಾಡಬೇಕಾಗಿದೆ.

**ಜಾಗತೀಕರಣದ ಈ ಸಂದರ್ಭದಲ್ಲಿ ಕನ್ನಡ ಭಾಷೆ ಹಲವು ಭಾಷೆಗಳ ಪೈಪೋಟಿಯನ್ನು ಎದುರಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡದ ಮಹತ್ವವನ್ನು ಅತ್ಯುನ್ನತ ನೆಲೆಗೆ ಒಯ್ಯುವಲ್ಲಿ ನೀವು ತೆಗೆದುಕೊಳ್ಳುವ ಕ್ರಮಗಳೇನು?**

**ಉ :** ತಮಿಳರ ಮುನ್ನಡೆ ಬಹಳ ಹಿಂದಿನಿಂದಲೇ ಆಗಿದೆ. ಅದಕ್ಕೆ ರಾಜಕೀಯ ಸಂಕಲ್ಪ ಇದೆ. ನಮ್ಮಲ್ಲಿ ಎಲ್ಲವೂ ಸರ್ಕಾರದ ನೆಲೆಯಿಂದಲೇ ನಡೆಯುತ್ತವೆ. ಜನಪ್ರತಿನಿಧಿಗಳಿಗೆ ಸಂಸ್ಕೃತಿ, ಚರಿತ್ರೆ, ಬದುಕು ಇದರ ವ್ಯಾಮೋಹ ಬೇಕು. ಆಕಾಶವಾಣಿಯಲ್ಲಿ ಕೆಲವು ಕಾರ್ಯಕ್ರಮಗಳನ್ನು ಮಾಡಬಹುದು ಎಂದು ನನ್ನ ಯೋಚನೆ. ಅಂದರೆ ವಾರಕ್ಕೆ ಒಂದರ ಹಾಗೆ ಸರಣಿ ಕಾರ್ಯಕ್ರಮಗಳನ್ನು ಮಾಡುವುದು. ಇದು ಪಂಪನನ್ನು ಓದುವುದು ಹೇಗೆ ಎಂಬ ರೀತಿಯಲ್ಲ. ಪರಂಪರೆ ಲೋಕವನ್ನು ಹೇಗೆ ಪರಿಕಲ್ಪಿಸಿಕೊಂಡಿದೆ ಎಂಬ ರೂಪಕಗಳ ಮೂಲಕ, ಭಾಷೆಯ ಲಯ, ನಾದದ ಮೂಲಕ ಹಳಗನ್ನಡವನ್ನು ಜನರಿಗೆ ತಲುಪಿಸಬೇಕು. ಜನಪದದ ಬೇರೆ ಬೇರೆ ರೂಪಗಳನ್ನು ಬಳಸಿಕೊಳ್ಳಬಹುದು. ಕನ್ನಡದ ತಿರುಳನ್ನು ಒಂದು ತಿಳಿವಳಿಕೆಯಾಗಿ ತಲುಪಿಸುವ ಪ್ರಯತ್ನ ನಮ್ಮದು. ಆಗ ಅದು ಜನರ ಕನ್ನಡವಾಗುತ್ತೆ. ಜನರೇ ಇದು ನಮ್ಮದೆನ್ನುವ ಹಾಗೆ ಮಾಡಬೇಕು.

**Excelence ಅನ್ನುವ ಪದಕ್ಕೆ ಅತ್ಯುನ್ನತ ಎಂದು ಕನ್ನಡೀಕರಣ ಮಾಡಲಾಗಿಯಿದು ಎಷ್ಟು ಸೂಕ್ತ?**

ಪದಗಳ ನಿರಾಕರಣೆ ಮುಖ್ಯವಲ್ಲ. ನಾವು ಅದನ್ನು ಹೇಗೆ ಅರ್ಥೈಸುತ್ತೇವೆ, ಹೇಗೆ ಬಳಸಿಕೊಳ್ಳುತ್ತೇವೆ ಎನ್ನುವುದು ಮುಖ್ಯ. ಇಂಗ್ಲೀಷಿನಲ್ಲಿ ಕ್ಯಾನ್ಸರ್ ಎನ್ನುವುದಕ್ಕೆ ತುಳುವಿನಲ್ಲಿ ದಲ್‌ಪುಂಚ ಎಂಬ ಪದಬಳಕೆ ಇದೆ. ಅದೊಂದು ರೂಪಕವಾಗಿ ಇದೆ. ನಮ್ಮ ಪಾರಂಪರಿಕ ತಿಳಿವಳಿಕೆಯಲ್ಲಿ ಎಲ್ಲವೂ ಇವೆ. ಆಧುನಿಕತೆ ಇದನ್ನು ಅವೈಚಾರಿಕ ಎಂದು ತಿರಸ್ಕರಿಸಿದೆ. ನನ್ನ ಆಶಯ ಇದನ್ನು ವಿಶ್ವಾತ್ಮಕಗೊಳಿಸುವುದು. ಜಾಗತೀಕರಣ ಸ್ಥಳೀಯತೆಯನ್ನು ನುಂಗಿ ಹಾಕುತ್ತದೆ. ಇಂಥ ಸಂದರ್ಭದಲ್ಲಿ ಹಳೆಯದರ ಜತೆ ವರ್ತಮಾನವನ್ನು ಸೇರಿಸಿಕೊಂಡು ಕನ್ನಡದ ತಿರುಳೇನು ಎಂದು ಹುಡುಕಬೇಕಾಗಿದೆ. ಶಾಸ್ತ್ರೀಯ ಕನ್ನಡ. ಹುಡುಕಾಟದ ಕನ್ನಡ ಅದು ಸ್ಥಿರಗೊಂಡದ್ದಲ್ಲ, ಅದೊಂದು ಹುಡುಕಾಟದ ಯಾನ. ಕನ್ನಡದ ತಿರುಳನ್ನು ಅಂತಸ್ಸತ್ವವನ್ನು ಹುಡುಕುವ ಪ್ರಯತ್ನ. ಈ ಹುಡುಕಾಟದ ಪ್ರಯತ್ನವಾಗಿ ಯೋಜನೆಗಳನ್ನು ರೂಪಿಸಬೇಕು. ಈ ಹುಡುಕಾಟದ ಕಥನವಾಗಿ ಕನ್ನಡವನ್ನು ಕಟ್ಟಬೇಕು.

**ನೀವು ಹಮ್ಮಿಕೊಂಡಿರುವ ನಿರ್ದಿಷ್ಟ ಯೋಜನೆಗಳು ಮತ್ತು ಅದನ್ನು ಕಾರ್ಯಗತಗೊಳಿಸುವ ಬಗೆ ಹೇಗೆ?**

ಮಾಡಬೇಕಾದ ಕೆಲಸಗಳು ತುಂಬ ಇವೆ. ಯೋಜನಾಬದ್ಧವಾಗಿ ಮಾಡಬೇಕು ಮತ್ತು ಅನುದಾನವನ್ನು ಅವಲಂಬಿಸಿಯೆ ಮಾಡಬೇಕು. ಈಗಾಗಲೇ ಅನೇಕ ಕೆಲಸಗಳು ಆಗಿವೆ. ಇವತ್ತಿನ ಕಾಲ ಎಂದರೆ ಒಂದರಿಂದ ಹಲವನ್ನು ಪಡೆಯುವುದು. ಉದಾರಣೆಗೆ ಒಂದು ಪದ, ಅಥವಾ ವಿಷಯ ಎಲ್ಲೆಲ್ಲಿ ಸಿಗುತ್ತವೆ ಅನ್ನುವುದನ್ನು ನೋಡುತ್ತ ಹೋದರೆ

ಬೃಹತ್ತಾದ ಕ್ಯಾನ್‌ವಾಸ್ ಒಂದು ಕಾಣಿಸುತ್ತದೆ. ಈ ತರದ ಕೆಲವು ಯೋಜನೆಗಳನ್ನು ರೂಪಿಸುವ ಪ್ರಯತ್ನದಲ್ಲಿದ್ದೇವೆ. ಹಾಗೆಯೇ ಕನ್ನಡದಲ್ಲಿ ಬರುವ ಸಂಶೋಧನೆಗಳನ್ನು ಗಮನಿಸುವುದಾದರೆ interaction ಕೊರತೆ ಇದೆ. Interaction ಆಗುವ ವೇದಿಕೆಯನ್ನು ಕಲ್ಪಿಸುವ ಪ್ರಯತ್ನ ಮಾಡಬೇಕಾಗಿದೆ. ಕನ್ನಡ ಸಂಶೋಧನೆಯನ್ನು ಈ ನೆಲೆಯಲ್ಲಿ ರೂಪಿಸಬೇಕಾಗಿದೆ. ಹಾಗೆಯೇ ಸದ್ಯ *ಕಲ್ಚರಲ್ ಮ್ಯಾಪಿಂಗ್* ಕೆಲಸ ಕೂಡಾ ಆಗಬೇಕಾಗಿದೆ. ಆಧುನಿಕತೆ ಭಾಷಾಕೇಂದ್ರಿತ ಪರಿಧಿಗಳನ್ನು ಹಾಕಿಕೊಂಡಿದೆ. ಆಧುನಿಕ ಪೂರ್ವ ಜಗತ್ತು ಒಂದರ ಜತೆ ಇನ್ನೊಂದು ಸೇರಿಕೊಂಡಿತ್ತು. ಈ ಬಗೆಯ ಮ್ಯಾಪಿಂಗ್ ಮತ್ತೆ ಪುನರ್‌ರಚನೆ ಮಾಡಲು ಸಾಧ್ಯವೇ ಎಂಬ ಯೋಚನೆ ನನ್ನದು. ವಸಾಹತುಶಾಹಿ ನಮ್ಮ ಜ್ಞಾನಶಾಖೆಗಳನ್ನು ಪ್ರತ್ಯೇಕಿಸಿದೆ. ನಾವು ಮತ್ತೆ ಅದನ್ನು ಬೆಸೆಯಬೇಕಾಗಿದೆ. ಬೇರೆ ಬೇರೆ ಜ್ಞಾನಶಿಸ್ತುಗಳ ಜತೆ ಹೊಂದಾಣಿಕೆ ಮಾಡಿಕೊಂಡು ಯೋಜನೆಗಳನ್ನು ರೂಪಿಸಬೇಕಾಗಿದೆ. ಕನ್ನಡವನ್ನು ಎಲ್ಲ ವಲಯಕ್ಕೆ ವಿಸ್ತರಿಸಬೇಕಾಗಿದೆ. ಇದೂ ಒಂದು ಹುಡುಕಾಟವೇ. ಕನ್ನಡ ಜಂಗಮ, ಅನುಭವಮಂಟಪ, ಕನ್ನಡ ನುಡಿ–ನಡೆ, ನಿತ್ಯಂ ಪೊಸತು ಹೀಗೆ ಬೇರೆ ಬೇರೆ ವೇದಿಕೆಯಡಿ ಕಾರ್ಯಕ್ರಮಗಳನ್ನು ಮಾಡುವ ಉದ್ದೇಶ ಇಟ್ಟುಕೊಳ್ಳಲಾಗಿದೆ. ಆಗಿರುವ, ಆಗುವ ಕೆಲಸಗಳನ್ನು ಜನರ ಗಮನಕ್ಕೆ ತರಲು "ಸೊಲ್ಲರಿಮೆ" ಎಂಬ ನುಡಿಚಿತ್ರ (News bulletin) ವೊಂದನ್ನು ಹೊರತರಲಾಗುವುದು. ಹೀಗೆ ಹತ್ತಾರು ಯೋಜನೆಗಳನ್ನು ಹಮ್ಮಿಕೊಂಡು ಶಾಸ್ತ್ರೀಯ ಕನ್ನಡವನ್ನು ಜನಪರವಾಗಿ ಬೆಳೆಸುವ ಪ್ರಯತ್ನ ನಮ್ಮದು.

**ಸರ್, ಇಂದಿನ ಸಂದರ್ಭದಲ್ಲಿ ನಿಮಗಿರುವ ದೊಡ್ಡ ಸವಾಲು ಯಾವುದು?**

ಸಮಯವೇ ದೊಡ್ಡ ಸವಾಲು. ಅನುದಾನದ ಕೊರತೆಯೂ ಸವಾಲು. ಈ ಇತಿಮಿತಿಯ ಒಳಗೆ ಕೆಲಸ ಮಾಡಬೇಕು. ಇದಕ್ಕೆ ದೀರ್ಘಕಾಲೀನ ಯೋಜನೆ ಮತ್ತು ಒಂದು ವರ್ಷದ ಯೋಜನೆ ಎರಡರ ಬಗ್ಗೆಯೂ ಯೋಚನೆ ಮಾಡಿದ್ದೇವೆ. ಕಲ್ಚರಲ್‌ಮ್ಯಾಪಿಂಗ್ ಕೆಲಸವನ್ನು ಒಂದು ವರ್ಷದಲ್ಲಿ ಮಾಡಬಹುದು. ಕೆಲವು ಯೋಜನೆಗೆ ಸುದೀರ್ಘ ಅವಧಿ ಬೇಕಾಗುತ್ತದೆ. ಅದಕ್ಕೆ ಸಂಪನ್ಮೂಲದ ಕೊರತೆಯೂ ಇದೆ. ಆದರೆ ಎಷ್ಟು ಸಾಧ್ಯವೊ ಅಷ್ಟನ್ನು ಮಾಡುವ ಪ್ರಯತ್ನದಲ್ಲಿದ್ದೇವೆ.

---

**೭ನೇ ಪುಟದಿಂದ)**

ಬಂದಿರುವ ತಾತ್ಸಾರದ ಪರಿಸ್ಥಿತಿಯನ್ನೇ ಕನ್ನಡವೂ ಎದುರಿಸಬೇಕಾಗುತ್ತದೆ.

ಇದನ್ನು ಸರಿಪಡಿಸಲು ಕನ್ನಡ ಪುಸ್ತಕ ಓದಿ, ಬೆಳೆದ, ಕನ್ನಡ ಸಿನಿಮಾ ನೋಡಿ ನಲಿದ, ಕನ್ನಡದಲ್ಲೇ ಓದಿದ್ದರೂ ಬೇಕಾದಷ್ಟು ಪಾಂಡಿತ್ಯ, ಪ್ರತಿಭೆ ಪಡೆದ ಕನ್ನಡಿಗರೇ ಮುಂದಾಗಬೇಕು. ಕನ್ನಡ ಎನ್ನುವುದೊಂದು ವಿವೇಕ, ಸಂವೇದನೆ. ಅದನ್ನು ನಮ್ಮ ಮಕ್ಕಳು ಪಡೆಯುವಂತಾಗಬೇಕು. ಬೇರೆ ಭಾಷೆ ಕಲಿಯುವ ಅಗತ್ಯ ಕನ್ನಡ ಕಲಿಯುವ ಮೂಲಭೂತ ಅಗತ್ಯವನ್ನು ಮರೆಯಿಸಬಾರದು. ಕನ್ನಡಿಗರು ಮನಸ್ಸು ಮಾಡಿದರೆ ಸರ್ಕಾರ ಅದಕ್ಕೆ ಮಣಿಯುವಂತಾಗುವುದು ಕಷ್ಟವಲ್ಲ. ನಮಗೆ ಅನ್ನದ ಜೊತೆ ಮಾನವೂ ಬೇಕು.


ಈ ಮಾತನ್ನು ಮರೆತರೆ ವ್ಯಾಪಕವಾದ ರೀತಿಯಲ್ಲಿ ಆರಂಭದಲ್ಲಿ ನಾನು ವಿವರಿಸಿದ ವಲಸೆ ಕಾರ್ಮಿಕರು ಇದ್ದಕ್ಕಿದ್ದಂತೆ ಅನುಭವಿಸಿದ ದಿಕ್ಕೆಟ್ಟ ಸ್ಥಿತಿಯನ್ನೇ ಕನ್ನಡಿಗರು ಅನುಭವಿಸಬೇಕಾಗುತ್ತದೆ. ಯಾಕೆಂದರೆ ಮುಕ್ತ ಆರ್ಥಿಕ ನೀತಿಯ ಆರ್ಥಿಕತೆಯ ಭರಾಟೆ ಎನ್ನುವುದು ನೆಲದ ಮೇಲೆ ಕಾಲೂರಿ ನಿಂತಿರುವ ವಾಸ್ತವಿಕತೆಯಲ್ಲ. ಬಡ ದೇಶಗಳ ಹೆಗಲ ಮೇಲೆ ಹತ್ತಿ ಕೂತ ಸವಾರಿ ಅದು. ಅಂತಹ ದೇಶಗಳು ಹೆಗಲು ಕೊಡವಲೇಬೇಕಾಗಿ ಬರುವ ದುರ್ಬಲತೆಗೀಡಾಗಿವೆ. ಅಂತಹ ಕಾಲ ಬಂದರೆ ಇಂಗ್ಲಿಷಿನಿಂದಾಗಿ ದೊರೆಯುತ್ತಿರುವ ಚಾಕರಿ ಬಂದ್ ಆಗುತ್ತದೆ. ಕನ್ನಡದಲ್ಲೇ ಬದುಕು ಕಟ್ಟಿಕೊಳ್ಳೋಣ ಎಂದುಕೊಂಡರೆ ಕಟ್ಟುವುದು ಗೊತ್ತೇ ಇರುವುದಿಲ್ಲ. ಕಟ್ಟುವುದಕ್ಕೆ ಅವಶ್ಯಕವಾದ ಸರಕೂ ಖಾಲಿಯಾಗಿರುತ್ತದೆ. ಕೇವಲ ಹೊಟ್ಟೆ ಹೊರೆಯುವುದೊಂದೇ ಗುರಿ ಎಂದು ಭಾವಿಸಿ ತನ್ನತನದಿಂದ, ಕನ್ನಡತನದಿಂದ ದೂರ ಹೋದ ತಲೆಮಾರಿಗೆ ನಿಂತು ನೀಸುವ ಪಾಠ ಕಲಿಯಲು ಮತ್ತೆಷ್ಟೋ ಕಾಲ ತಗಲುತ್ತದೆ. ಆಫ್ರಿಕಾದಲ್ಲಾದಂತೆ, ಲ್ಯಾಟಿನ್ ಅಮೆರಿಕಾದಲ್ಲಾದಂತೆ ಮನೆಯಲ್ಲಿ ಆಡುವ ಭಾಷೆಯಲ್ಲಿ ಓದಲು, ಬರೆಯಲು ಬಾರದ ತಲೆಮಾರು ತೀವ್ರ ತಳಮಳಗಳಿಗೀಡಾಗುತ್ತದೆ. ರಾಜಕೀಯ ಪಕ್ಷಗಳು ಚುನಾವಣೆಗಳನ್ನು ಕುರಿತು ಮಾತ್ರ ಯೋಚಿಸುತ್ತಿವೆ. ಮಾಧ್ಯಮಗಳು ಜಾಹೀರಾತು ಬಗ್ಗೆ ಮಾತ್ರ ಯೋಚಿಸುತ್ತಿವೆ. ರಾಜಕಾರಣಿಗಳು ಅಕ್ರಮ ಸಂಪತ್ತು ಗಳಿಸುವ, ಗಳಿಸಿದ್ದನ್ನು ಬಚ್ಚಿಡುವ ಪರದಾಟದಲ್ಲಿದ್ದಾರೆ. ಬಹು??ಲು ಹೋರಾಟಗಾರರು ರಾಜಕಾರಣಿಗಳಂತೆಯೇ ಆಗಲು ಕಾತುರರಾಗಿದ್ದಾರೆ. ಈಗ ಕನ್ನಡವನ್ನು ಉಳಿಸಲು ಬೇರೆಯವರಾದರೂ ಚಿಂತಿಸಬೇಕಲ್ಲವೇ.?



**(ಲೇಖಕರು ನಮ್ಮ ನಡುವಿನ ಬಹುಮುಖ್ಯ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತಕರು ಹಾಗೂ ಕವಿ)**

## ಶ್ರದ್ಧಾಂಜಲಿ

# ಹಿರಿಯ ವಿಮರ್ಶಕ ಜಿ.ಎಸ್.ಆಮೂರ



ಇತ್ತೀಚೆಗೆ ನಿಧನರಾದ ಜಿ.ಎಸ್. ಆಮೂರ್ ಅವರು ಬಹುಶ್ರುತ ವಿದ್ವಾಂಸರು, ಕಾವ್ಯ, ನಾಟಕ, ಸಣ್ಣಕತೆ, ಕಾದಂಬರಿ ಈ ಎಲ್ಲಾ ಪ್ರಕಾರದ ಕೃತಿಗಳ ಬಗ್ಗೆ ಅಧಿಕಾರಯುತವಾಗಿ ಬರೆದ ಸಾಹಿತ್ಯ ವಿಮರ್ಶಕರು. ವೈಯಕ್ತಿಕವಾಗಿ ಅತ್ಯಂತ ನೆಚ್ಚಿನ, ಸುಸಂಸ್ಕೃತ ವ್ಯಕ್ತಿಯಾಗಿದ್ದ ಅವರು ನೂರಾರು ವಿದ್ಯಾರ್ಥಿಗಳು, ಯುವ ಸಂಶೋಧಕರು ಮತ್ತು ಬರಹಗಾರರೊಂದಿಗೆ ಮುಕ್ತ ಮನಸ್ಸಿನಿಂದ ತಮ್ಮ ಓದು ಮತ್ತು ವಿದ್ವತ್ತನ್ನು ಹಂಚಿಕೊಳ್ಳುತ್ತಿದ್ದರು. ಅಭಿಪ್ರಾಯ ಭೇಧವಿದ್ದಲ್ಲಿ ಅಥವಾ ಯಾವುದೇ ಕೃತಿಯಲ್ಲಿ ದೌರ್ಬಲ್ಯ ಕಂಡಲ್ಲಿ ಖಚಿತವಾಗಿ ಆದರೆ ಸಮಚಿತ್ತದಿಂದ ವ್ಯಕ್ತಪಡಿಸುತ್ತಿದ್ದರು. ಮಹಾರಾಷ್ಟ್ರದ ಅಂಬೇಡ್ಕರ್ ಮರಾಠವಾಡಾ ವಿಶ್ವವಿದ್ಯಾಲಯದಲ್ಲಿ ೧೭ ವರ್ಷಗಳ ಕಾಲ ದುಡಿದು ನಿವೃತ್ತರಾಗಿ ಧಾರವಾಡಕ್ಕೆ ಬರುವವರೆಗೆ ಕನ್ನಡದಲ್ಲಿ ಅವರು ಬರೆದದ್ದು ಕಡಿಮೆ. ಆದರೆ ಅಲ್ಲಿಂದಾಚೆಗೆ ಆಶ್ಚರ್ಯವೆನಿಸುವಷ್ಟು ಪ್ರಮಾಣದಲ್ಲಿ ಬರೆದರು. ಕೃತಿಗಳ ಬಗ್ಗೆ ಸಮಗ್ರವಾದ ಖಚಿತವಾದ ವಸ್ತುಸಂಗತಿಗಳನ್ನು ಓದುಗರೆದುರಿಗಿಟ್ಟು, ಅವರ ತಲೆಮಾರಿನ ಪ್ರಧಾನ ವಿಮರ್ಶಾ ವಿಧಾನವಾದ ಕೃತಿನಿಷ್ಠ ಓದಿನ ಬೆಂಬಲದೊಂದಿಗೆ ಚರ್ಚಿಸುವುದು ಅವರ ಪದ್ಧತಿಯಾಗಿತ್ತು. ವಿಸ್ತಾರವಾದ ಓದು ಹಾಗೂ ವಿದ್ವತ್ತು ತರ ತರಹದ ಬರಹದ ಮೇಲೆ ಭಾರವಾಗದ ಶೈಲಿಯನ್ನು ರೂಢಿಸಿಕೊಂಡಿದ್ದರು. ಹೀಗಾಗಿ ಬೇಂದ್ರೆ, ಶ್ರೀರಂಗ, ಹಾಗೂ ಕನ್ನಡದ ಪ್ರಮುಖ ಕತೆಗಾರರು, ಕಾದಂಬರಿಕಾರರನ್ನು ಅಧ್ಯಯನ ಮಾಡುವವರು ಆಮೂರ್ ಅವರ ಬರಹದೊಂದಿಗೆ ಆರಂಭಿಸಬೇಕಾಗುತ್ತದೆ. ಉದಾಹರಣೆಗೆ '<u>ಭುವನದ ಭಾಗ್ಯ</u>' ಕೃತಿಯಲ್ಲಿ ಅವರು ಉದ್ಧರಿಸುವ ಬೇಂದ್ರೆಯವರ ಅಪಾರ ಸಂಖ್ಯೆಯ ಕವನಗಳ ಸಾಲುಗಳು ಅಚ್ಚರಿ ಹುಟ್ಟಿಸುತ್ತವೆಯಲ್ಲದೆ ಆಮೂರರ ಸೂಕ್ಷ್ಮ ಓದು ಹಾಗೂ ಅಭಿರುಚಿಯ ಬಗ್ಗೆ ಗೌರವ ಹುಟ್ಟಿಸುತ್ತವೆ. ಕನ್ನಡ ಕಾದಂಬರಿ ಹಾಗೂ ಸಣ್ಣಕತೆಗಳ ಕುರಿತ ಅವರ ಎರಡೂ ಕೃತಿಗಳು ಏಕಕಾಲಕ್ಕೆ ವಿಮರ್ಶೆ ಹಾಗೂ ಸಾಹಿತ್ಯ ಚರಿತ್ರೆಗಳಾಗಿವೆ.

ಹಿನ್ನೋಟದಲ್ಲಿ ಕನ್ನಡ ವಿಮರ್ಶೆ ಹಾಗೂ ವಿದ್ವತ್ತಿನ ಮೊದಲ ಘಟ್ಟದಲ್ಲಿ ನವೋದಯ ಸಂಪ್ರದಾಯದ ಶ್ರೇಷ್ಠ ವಿದ್ವಾಂಸರಿದ್ದರು. ಗೋವಿಂದ ಪೈ, ಮುಳಿಯ ತಿಮ್ಮಪ್ಪಯ್ಯ, ಡಿ.ಎಲ್.ಎನ್., ತೀ.ನಂ.ಶ್ರೀ ಮತ್ತು ಕುವೆಂಪು. ಚರಿತ್ರೆ, ಕೃತಿ ಸಂಪಾದನೆ ಮುಂತಾದ ಶಿಸ್ತುಗಳು ಇನ್ನೂ ಬೆಳೆಯದೇ ಇದ್ದ ಕಾಲದಲ್ಲಿ ಕನ್ನಡ ಸಾಹಿತ್ಯ ಪರಂಪರೆಯನ್ನು ಸೂಕ್ಷ್ಮವಾದ ಓದು ಮತ್ತು ಪರಂಪರೆಯ ಆಳವಾದ ಅರಿವಿನ ಮೂಲಕ ಕಟ್ಟಿಕೊಟ್ಟರು. ಇವರು ಸಾಂಪ್ರದಾಯಿಕ ಶಾಸ್ತ್ರಬದ್ಧ ಕೃತಿ ಸಂಪಾದಕರು ಮಾತ್ರವಲ್ಲ; ಉನ್ನತ ವಿಮರ್ಶಾ ಪ್ರತಿಭೆಯುಳ್ಳವರು. ಮುಂದಿನ ತಲೆಮಾರುಗಳಲ್ಲಿ ಸಾಹಿತ್ಯ ವಿಮರ್ಶೆ, ಕೃತಿ ಸಂಪಾದನೆ ಮತ್ತು ಸಾಹಿತ್ಯ ಪರಂಪರೆಯ ಪರಾಮರ್ಶೆ ಇವೆರಡು ತಮ್ಮ ಸಂಬಂಧಗಳನ್ನು ಕಳೆದುಕೊಂಡವು. ನವ್ಯ ವಿಮರ್ಶೆಯ ಹಂತದಲ್ಲಿ ಈ ವಿಭಾಗೀಕರಣ ಇನ್ನೂ ತೀವ್ರವಾಯಿತು. ಅಡಿಗರು, ಅನಂತಮೂರ್ತಿ, ಎಂ.ಜಿ.ಕೆ., ಲಂಕೇಶ್ ಇಂಥ ಮಾರ್ಗಪ್ರವರ್ತಕ ವಿಮರ್ಶಕರ ಮುಖ್ಯ ಕಾಳಜಿಗಳು ಬೇರೆಯೇ ಆಗಿದ್ದವು. ಆಮೂರ್‌ರಲ್ಲಿ ಈ ಎರಡು ಮಾರ್ಗಗಳನ್ನು ಒಂದುಗೂಡಿಸುವ ಓದು, ಸಿದ್ಧತೆ ಪರಿಶ್ರಮ ಹಾಗೂ ಪ್ರತಿಭೆಗಳಿದ್ದವು. ಆದರೆ ನನಗೆ ತೋರಿದಂತೆ ಅವರ ಇಂಗ್ಲಿಷ್ ಬರಹಗಳಲ್ಲಿ ಆಮೂರರು ತೋರಿಸುವ ದೃಢವಾದ ಸ್ವಂತಿಕೆ ಅವರ ಕನ್ನಡ ಬರಹಗಳಲ್ಲಿ ಅಷ್ಟಾಗಿಲ್ಲ. <u>Our Own Voices</u> ಎನ್ನುವ ಕೃತಿಯಲ್ಲಿರುವ ಲೇಖನಗಳು ಭಾರತೀಯ ಸಾಹಿತ್ಯದ ಬಗ್ಗೆ, ಪಾಶ್ಚಾತ್ಯ ವಿಮರ್ಶಕರಿಗೆ ಇಸ್ಲಾಮ್ ಹಾಗೂ ಉರ್ದು ಭಾಷೆಗಳ ಬಗ್ಗೆ ಇರುವ ಪೂರ್ವಾಗ್ರಹಗಳ ಬಗ್ಗೆ, ಅನುವಾದಗಳ ಸಾಂಸ್ಕೃತಿಕ ರಾಜಕೀಯದ ಬಗ್ಗೆ, ಸಿನೇಮಾಗಳ ಬಗ್ಗೆ ಅದೆಷ್ಟು ಒಳನೋಟಗಳು ಹಾಗೂ ಪ್ರಬಲ ವಾದಗಳಿಂದ ಕೂಡಿವೆಯೆಂದರೆ ಅವು ಕುತೂಹಲಕಾರಿ ಸಂಶೋಧನೆಗೆ ದಾರಿತೋರಿಸಬಲ್ಲವು. ಅದಿರಲಿ, ಆದರೆ ವಸ್ತುನಿಷ್ಠವಾದ ವಿದ್ವತ್‌ಪೂರ್ಣ ತಿಳುವಳಿಕೆಗಾಗಿ, ಚರ್ಚೆಗಾಗಿ ಸದಾ ಸಿದ್ಧರಿದ್ದ ಆಮೂರ್‌ರು ಈಗಿಲ್ಲವೆನ್ನುವುದು ಕನ್ನಡಕ್ಕೆ ಆದ ಹಿನ್ನಡೆಯಾಗಿದೆ.

–ರಾಜೇಂದ್ರ ಚೆನ್ನಿ

ಇತ್ತೀಚೆಗೆ ನಮ್ಮನ್ನಗಲಿದ ಹಿರಿಯ ರಾಜಕಾರಣಿ ರಾಮ್‌ವಿಲಾಸ್ ಪಾಸ್ವಾನ್, ಕೇಂದ್ರದ ರಾಜ್ಯ ರೈಲ್ವೇ ಮಂತ್ರಿ ಸುರೇಶ್ ಅಂಗಡಿ, ರೈತ ಮುಖಂಡ ಮಾರುತಿ ಮಾನ್ಪಡೆ ಹಾಗೂ ಸಂಗೀತ ವಿದುಷಿ ಟಿ.ಎಸ್ ರಮಾ ಅವರಿಗೆ 'ಹೊಸ ಮನುಷ್ಯ' ತನ್ನ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ.–ಸಂ.



# ಕನ್ನಡ ದಾಸ ದರ್ಶನ

–ಗೀತಾ ವಸಂತ

ಧರ್ಮ ಎಂಬ ಪರಿಕಲ್ಪನೆಗೆ ಹಾಕಿರುವ ಮತೀಯ ಚೌಕಟ್ಟನ್ನು ಕಳಚುವ ಪ್ರಯತ್ನವನ್ನು ಸಂತಪರಂಪರೆಯು ಸದಾ ಮಾಡುತ್ತಲೇಬಂದಿದೆ. ಒಳತಿಳಿವಿನಲ್ಲಿ ಕಂಡದ್ದನ್ನು ಲೋಕಕ್ಕೆ ಹಾಡಾಗಿ ನೀಡಿದವರು ನಮ್ಮ ದಾಸರು. ಪಾಡನ್ನು ಹಾಡಾಗಿಸುವ ಹದವು ಜೀವಕ್ಕೆ ಬರಬೇಕಾದರೆ ಅನುಭವಗಳಲ್ಲಿ ಉರಿಯುವ ತನ್ಮಯತೆ ಬೇಕು. ಭಕ್ತಿಯು ಅಂಥ ಭಾವಶಕ್ತಿ. " ತಮ್ಮ ಜೀವನವನ್ನೇ ದಿವ್ಯಕೃತಿಯಾಗಿ ಮಾಡಿ ಅದರ ಉಚ್ಛ್ವಾಸದಂತೆ ವಚನಪದಗಳನ್ನು ಹಾಡಿದ ನಮ್ಮ ಶರಣರ ದಾಸರ ಶಕ್ತಿ ಹೆಚ್ಚಿನದು" ಎಂದು ಬೇಂದ್ರೆಯವರು ಭಕ್ತಿಪರಂಪರೆಯ ಜೀವಾಳವನ್ನು ತೆರೆದು ತೋರಿದ್ದಾರೆ. ಧರ್ಮವೆಂಬುದು ಬರಿಯ ವೈಚಾರಿಕ ಆಕೃತಿಯಲ್ಲ, ಅದು ನೀತಿಸಂಹಿತೆಯೂ ಅಲ್ಲ. ಬದುಕುವ ಹಾಗೂ ಭಾವಿಸುವ ಕ್ರಮ ಎಂಬುದನ್ನು ದಾಸರ ದೇಸಿ ವಿವೇಕವು ನಮಗೆ ಕಲಿಸಿದೆ. ವೈಚಾರಿಕ ಸ್ಪಷ್ಟತೆಗೆ ಬುದ್ಧಿಯಿಂದ ಕಟ್ಟಿಕೊಂಡ ಮಾತುಸಾಕು. ಒಳ ಉಸಿರಿನಿಂದ ಹುಟ್ಟುವ ನಾದವು ಬದುಕನ್ನೇ ಮಾಧ್ಯಮವಾಗಿಸಿಕೊಂಡು ಪಾಕಗೊಳ್ಳುವ ಮಾರ್ಗವೊಂದನ್ನು ದಾಸಪರಂಪರೆಯು ಸೃಜಿಸಿದೆ. ತತ್ವಶಾಸ್ತ್ರೀಯ ಕಗ್ಗಂಟಿನಲ್ಲಿ ಸಿಲುಕಿದ ಧರ್ಮವನ್ನು ಭಕ್ತಿಯ ಅನಂತ ಸಾಧ್ಯತೆಗಳಲ್ಲಿ ಆರಳಿಸಿರುವುದು ದಾಸದರ್ಶನದ ಹೆಗ್ಗಳಿಕೆ.

ಧರ್ಮಕ್ಕೆ ತತ್ವಶಾಸ್ತ್ರವು ಆಧಾರವಾದರೆ, ಭಕ್ತಿಗೆ ಅನುಭವವೇ ಆಧಾರ. ತಾತ್ವಿಕ ಪರಿಭಾಷೆಯಾಚೆಗೆ ಸಂಬಂಧದ ಒಳಗೊಳ್ಳುವಿಕೆಯಲ್ಲಿ ಭಕ್ತಿಯು ಈ ಜಗತ್ತಿನ ಮೂಲವನ್ನು ತಾಕಿದೆ. ಭಕ್ತಿಯು ವೈಯಕ್ತಿಕ ನೆಲೆಯದಾದರೂ ಅದು ಸಮೂಹ ಚಳುವಳಿಯ ರೂಪತಾಳುವಲ್ಲಿ ಎಲ್ಲರೂ ಮುಕ್ತಿಗೆ ಅರ್ಹರೆಂಬ ನಂಬಿಕೆ ಹಾಗೂ ಭಗವಂತನ ಜೊತೆ ಬಾಂಧವ್ಯ ಬೆಳೆಸಿಕೊಳ್ಳುವ ಅನುಭವದ ನೆಲೆಗಳೇ ಕಾರಣ. ಆಧ್ಯಾತ್ಮದ ಪೂರ್ಣದೃಷ್ಟಿಯು ಪ್ರಭುತ್ವದ ಹಿಂಸೆಯಿಂದ ಪೀಡಿತವಾದ ಧರ್ಮದ ಪರಿಕಲ್ಪನೆಯನ್ನು ನಿರಾಕರಿಸುತ್ತದೆ. ಧರ್ಮವೇ ಪ್ರಭುತ್ವವಾಗುವುದನ್ನೂ ಪ್ರತಿರೋಧಿಸುತ್ತದೆ.ಆ ಕಾರಣದಿಂದಲೇ ಭಕ್ತಿ ಚಳುವಳಿಯು ಕ್ರಾಂತಿಕಾರಕವೆನಿಸುವುದು. ಸದಾ ಪರಿವರ್ತನಶೀಲವಾದ ಜಗತ್ತನ್ನು ತಾತ್ವಿಕ ಚೌಕಟ್ಟಿನಲ್ಲಿ ಬಂಧಿಸದೇ ವಿಶ್ವವೇ ತಾನಾಗಿ ಹಿಗ್ಗುವ ಮೂಲಕ ಸ್ಪಂದಿಸುವ ಈ ಅನುಭೂತಿಮಾರ್ಗವು ಧರ್ಮಕ್ಕೆ ಹೊಸಹರಿವನ್ನು ನೀಡಿದೆ. ದಾಸರ ದೈವದ ಕುರಿತ ರಚನೆಗಳೂ ಕೂಡ ಮನುಷ್ಯ ಕೇಂದ್ರದಿಂದಲೇ ಮೂಡಿದ ಕಾಣ್ಕೆಗಳು. ದೇವರು ನಿಜವಾಗುವುದು ಅಲ್ಲಿ ಮನುಷ್ಯ ಸಂಬಂಧಗಳ ನೆಲೆಯಲ್ಲೇ. ಇಲ್ಲಿ ದಾಸ್ಯವೂ ಕೂಡ ಮೇಲು ಕೀಳಿನ ಶ್ರೇಣೀಕರಣದ ಪರಿಭಾಷೆಯದಲ್ಲ ಬದಲಿಗೆ ಮಹತ್ತಿಗೆ ಶರಣಾಗುವ ಮೂಲಕ ಅದನ್ನು ಸೇರಿಹೋಗುವ ನೆಲೆಯದು. ನಂಬಿ ಕೆಟ್ಟವರಿಲ್ಲವೋ ಎನ್ನುವ ದಾಸರಿಗೆ ನಂಬಿಕೆಯೇ ಶಕ್ತಿ. ಹರಿಯೆಂಬ ನಾಮ ಅವರ ನಂಬುಗೆಗೆ ಆಧಾರ.

**ಪುಟ್ಟಿಸಿದ ತಾಯಿತಂದೆ ಇಷ್ಟಮಿತ್ರನು ನೀನೆ/ಇಷ್ಟ ಬಂಧು ಬಳಗ ಸರ್ವ ನೀನೆ/ ಪೆಟ್ಟಿಗೆಯೊಳಗಿನ ಅಪ್ಪಾಭರಣ ನೀನೆ/ಶ್ರೇಷ್ಠಮೂರುತಿ ಕೃಷ್ಣ ನೀನಿರುವತನಕ**

ಎನ್ನುವ ಪುರಂದರದಾಸರ ರಚನೆ ತನ್ನ ಬಾಂಧವ್ಯವನ್ನೆಲ್ಲ ಇಷ್ಟದೈವದೊಂದಿಗೆ ಬೆಸೆದು ನಿರುಮ್ಮಳ ಭಾವತಾಳುವ ನಂಬಿಕೆಯಿಂದ ಜನಿಸಿದ್ದು. ನೀನಿರಲು ನಾನೇಕೆ ಬಡವನು, ನಾನೇಕೆ ಪರದೇಸಿ ಎನ್ನುವ ದಾಸರು ತಬ್ಬಲಿತನವನ್ನು ನೀಗಿಕೊಳ್ಳುವುದು ಈ ಸಖ್ಯದಲ್ಲಿ. ಕರ್ಮಾಚರಣೆಗಳ ಜಗತ್ತು ಎಂದಿಗೂ ನೀಡದ ನೆಮ್ಮದಿಯಿದು. ಬದುಕಿಗೆ ಭರವಸೆಯಾಗದ ಧರ್ಮದ ಅಮೂರ್ತ ನೆಲೆಯನ್ನು ಮೂರ್ತ ಸಂಬಂಧಗಳ ಮೂಲಕ ಪರಿವರ್ತಿಸುವ ಕಸುವು ಇಲ್ಲಿ ಕಾಣಿಸುತ್ತದೆ.

ಅಂತರಂಗ ಸಾಧನೆ ಹಾಗೂ ಬಹಿರಂಗ ವಿಮರ್ಶೆ ಈ ಎರಡೂ ನೆಲೆಗಳಲ್ಲಿ ದಾಸರು ಪ್ರಾಮಾಣಿಕರಾಗಿದ್ದರು. ಪಂಚೇಂದ್ರಿಯಗಳು ಕೊಡುವ ಕಾಮನೆಯಲ್ಲಿ ತೊಳಲುವ ಬದುಕಿನ ಸಂಕೀರ್ಣತೆಯಿಂದ ಪಾರಾಗಲೂ ಅವರು ನಾರಾಯಣನೆಂಬ ನಾಮದ ಬೀಜವನ್ನೇ ಎದೆಯಲ್ಲಿ ನೆಡುತ್ತಾರೆ.'ರಾಗದ್ವೇಷಗಳನ್ನು ಗೆಲ್ಲುವುದು ಬರಿಯ ವಿರಕ್ತಿಯ ಮಾತಲ್ಲ. ಅದೊಂದು ಆಂತರಿಕ ಸಾಧನೆ. ಅದಕ್ಕಾಗಿ ಎದೆಯ ಹೊಲವನ್ನು ಹದಮಾಡಿಕೊಂಡು ಸ್ವಾಸೋಚ್ಛಾಸವನ್ನೇ ಎತ್ತುಗಳನ್ನಾಗಿಸಿಕೊಂಡು ನಿರ್ಮಮ ಭಾವದಿಂದ ಮಾಡಬೇಕಾದ ಸಾಧನೆಯಿದು. ದಾಸರಲ್ಲಿ ಅನೇಕರು ಯೌಗಿಕ ಸಾಧನಾಮಾರ್ಗಗಳ ಪರಿಚಯವುಳ್ಳವರು.

**ನಾರಾಯಣನೆಂಬ ನಾಮದ ಬೀಜವ/ನಾಲಗೆ ತುದಿಯಿಂದ ಬಿತ್ತಿರಯ್ಯ/ಮದಮತ್ಸರಗಳೆಂಬ ಮರಗಳನೆ ತರಿದು/ಕಾಮಕ್ರೋಧಗಳೆಂಬ ಕಳೆಯ ಕಿತಿ/ಪಂಚೇಂದ್ರಿಯವೆಂಬ ಮಂಚಿಕೆಯನೆ ಹಾಕಿ/ಚಂಚಲವೆಂಬ ಹಕ್ಕಿಯ ಹೊಡೆಯಿರಯ್ಯ**

ನಾಮಜಪ ಸಾಧನೆಯಿಂದ ಮನದ ತೊಡಕುಗಳನ್ನು ಕಿತ್ತು ದೃಢಗೊಳ್ಳುವ ಭಕ್ತಿಮಾರ್ಗವನ್ನು ದಾಸಪರಂಪರೆಯು ಶೋಧಿಸಿ ನೀಡಿದೆ. ಭಕ್ತಿಯು ವರ್ಣನೆ, ಆರಾಧನೆ, ಸಂಕೀರ್ತನೆ ಹಾಗೂ ನಾಮಜಪಗಳ ರೂಪದಲ್ಲಿ ಅಂತರಂಗ ಶೋಧನೆಯ ಕಾಯಕವೇ ಆಗಿದೆ. ಅಹಂ ನಿರಸನದ ಮಹದೋದ್ದೇಶವನ್ನು ಸೇವೆ, ಶರಣಾಗತಿಯ ಮೂಲಕ ಸಾಧಿಸುವ ಭಕ್ತಿಮಾರ್ಗವು ತನ್ನನ್ನು ಅಧಿಕಾರರಚನೆಗಳಿಂದ ದೂರವೇ ಉಳಿಸಿಕೊಳ್ಳಲು ಹಂಬಲಿಸುತ್ತದೆ.

**ಧರಣಿಯನಾಳಬೇಕೆಂಬುದು ನರಚಿತ್ತ/ಪರರ ಸೇವಿಸುವುದು ಹರಿಚಿತ್ತವು/ಪುರಂದರ ವಿಠಲನ ಬಯಸೋದು ನರಚಿತ್ತ /ದುರಿತವ ಕಳೆವುದೆ ಹರಿಚಿತ್ತವಯ್ಯ**

ನರಚಿತ್ತವನ್ನು ಹರಿಚಿತ್ತವಾಗಿ ಪರಿವರ್ತಿಸುವ ಸಂಕಥನವಾಗಿ ಇಡೀ ದಾಸಸಾಹಿತ್ಯವು ಕಾಣಿಸುತ್ತದೆ. ಬದುಕಿನ ತತ್ವವನ್ನು ಅನುಭವದ ನೆಲೆಯಿಂದ ಕಟ್ಟುತ್ತ ಈ ನೆಲದ ವಿವೇಕವೊಂದನ್ನು ರಚಿಸುತ್ತದೆ. ಅಧಿಕಾರ ಬಲದಿಂದ ಗಳಿಸಿದ್ದು, ವ್ಯಾಪಾರವೆಂಬ ದ್ರೋಹಚಿಂತನದಿಂದ ಗಳಿಸಿದ್ದು ಎಲ್ಲವೂ ಅಸ್ಥಿರ ಎಂಬ ಅರಿವಿನಲ್ಲಿ ಚಿತ್ತದ ಸತ್ವವನ್ನು ಶೋಧಿಸಿ ಶುದ್ಧಗೊಳ್ಳಬೇಕೆಂಬ ತಥ್ಯವನ್ನು ಕಾಣಿಸುತ್ತದೆ.

**ಮುನ್ನ ಶತಕೋಟಿ ರಾಯರುಗಳಾಳಿದ ನೆಲವ/ತನ್ನದೆಂದೆನುತ ಶಾಸನವ ಬರೆಸಿ/ಬಿನ್ನಣದ ಮನೆಕಟ್ಟಿ ಕೋಟಿಕೊತ್ತಳವಿಕ್ಕಿ/ಚೆನ್ನಿಗನು ಅಸುವಳಿಯೆ ಹೊರಗೆ ಹಾಕುವರು**

ಅಸ್ಥಿರವಾದುದು ಯಾವುದು ಎಂದು ಸೂಚಿಸುತ್ತಲೇ ಸ್ಥಿರವಾದುದರೆಡೆಗೆ ಕೈತೋರುವ ಈ ರಚನೆಗಳು ಧರ್ಮದ ಮೂಲೋದ್ದೇಶವಾದ ನೈತಿಕ ಮಾದರಿಯನ್ನು ಮುಂದಿರಿಸುತ್ತವೆ. ಶುದ್ಧಚಿತ್ತದ ಕನ್ನಡಿಯಲ್ಲಿ ಕಾಣುವ ಲೋಕಸತ್ಯಗಳನ್ನು ಮಿಥ್ಯೆಯಲ್ಲಿ ಬದುಕುವ ಲೋಕದ ಮುಖಕ್ಕೆ ಹಿಡಿಯುತ್ತವೆ. ನೋಟವನ್ನೆ ಪಲ್ಲಟಿಸುವ ಅರಿವನ್ನು ಆಪ್ತವಾಗಿ ಬಿತ್ತುವ ಪರಿಯಿದು. ಧರ್ಮಶಾಸ್ತ್ರಗಳು ವಿಧಿನಿಷೇಧಗಳ ಭಯ ಹುಟ್ಟಿಸಿಯೂ ಮಾಡಲಾಗದ ಪರಿವರ್ತನೆಯನ್ನು ಆಳವಾದ ವಿವೇಕದ ಮಾತುಗಳಲ್ಲಿ ಸಾಧ್ಯವಾಗಿಸುವ ಸರಳತೆಯಿಂದಾಗಿಯೇ ದಾಸವಾಣಿಯು ಇಂದಿಗೂ ಜನಮಾನಸದಲ್ಲಿ ಕಾಲಾತೀತವಾಗಿ ಅಚ್ಚೊತ್ತಿದೆ. ಸರಳ ಸುಂದರ ಆಡುನುಡಿಯ ಸೊಬಗು ಹಾಗೂ ಜನರ ಸ್ಮೃತಿಯಲ್ಲಿರುವ ಪುರಾಣ ಕಥನಗಳ ನಿದರ್ಶನಗಳ ಮೂಲಕವೇ ಪರಿಣಾಮಕಾರೀ ಅಭಿವ್ಯಕ್ತಿಯನ್ನು ಅದು ರೂಪಿಸಿಕೊಂಡಿದೆ.

**ಕೌರವನು ಧರೆಯೆಲ್ಲ ತನಗಾಗಬೇಕೆಂದು/ವೀರಪಾಂಡವರೊಡನೆ ಕದನವಾಡಿ/ಮಾರಿಯ ವಶವೈದಿ ಹೋಹಾಗ ತನ್ನೊಡನೆ/ಶ್ಯಾರೆ ಭೂಮಿಯ ಒಯ್ದಿಲ್ಲವೊ ನೋಡೊ/ವರಯಜ್ಞಗಳ ಮಾಡಿ ನಹುಷ ಸುರಪತಿಯೆನಿಸಿ/ಉರಗಜನುಮವನೈದಿಹೋಹಾಗ ತನ್ನೊಡನೆ/ ಸುರಲೋಕದೊಳಗೇನ ಕೊಂಡೊಯ್ದ ನೋಡೊ**

ಶ್ರೀಪಾದರಾಯರ ಈ ರಚನೆಯಲ್ಲಿ ಪುರಾಣ ಕಥನಗಳ ಉಲ್ಲೇಖವಿದೆ. ಪ್ರಭುತ್ವದ ಮಹತ್ವಾಕಾಂಕ್ಷೆ ಹಾಗೂ ಧಾರ್ಮಿಕ ಆಚರಣೆಗಳೆರಡೂ ಅಮರನಾಗಬೇಕೆನುವ ಮನುಷ್ಯನ ದಾಹವನ್ನು ತೀರಿಸಲಾರವು. ಅಹಂ ಕಳಚಿದ ಅರಿವೊಂದೇ ನಿಜ ಮುಕ್ತಿಯ ಸಾಧನವೆಂಬ ನಿಲುವು ಧಾರ್ಮಿಕ ಪ್ರಭುತ್ವವನ್ನೂ ಕಳಚಿಹಾಕುವಂತಹುದು.

ಸ್ವತಃ ದಂಡನಾಯಕನಾಗಿದ್ದ ಕನಕದಾಸರು ಎಲ್ಲ ಬಗೆಯ ಅಧಿಕಾರ ರಚನೆಗಳನ್ನು ಮೀರಿ ವಿಕಾಸಗೊಂಡಿದ್ದು ಭಕ್ತಿಯ ಮಾರ್ಗದಿಂದಲೇ ಎಂಬುದು ಗಮನಾರ್ಹ. ಸಕಲ ಜೀವರಲ್ಲೂ ಪರಮಾತ್ಮನನ್ನು ಕಾಣುವ ಭಕ್ತಿಮಾರ್ಗವು ಧರ್ಮದ ಕರ್ಮಠ ಚೌಕಟ್ಟುಗಳನ್ನು ಕಳಚಿಹಾಕಿದ ಅಪರೂಪದ ಘಟನೆಯೊಂದನ್ನು ಕನಕದಾಸರ ಸಂದರ್ಭದಲ್ಲಿ ಕೇಳುತ್ತೇವೆ. ಕೃಷ್ಣದರ್ಶನವನ್ನು ನಿರಾಕರಿಸಿದ ವ್ಯವಸ್ಥೆಗೆ ಅವರು ಪ್ರತಿಕ್ರಿಯಿಸಿದ ರೀತಿಯೇ ಭಕ್ತಿಯ ಶಕ್ತಿಯನ್ನು ತೋರುತ್ತದೆ. ಕೃಷ್ಣ ತನ್ನ ನಿಷ್ಕಲ್ಮಷ ಭಕ್ತಿದೆ ಒಲಿದೇ ಒಲಿವ ಎಂಬ ನಂಬಿಕೆ ಹಾಗೂ ಅರ್ಪಣೆ ಅವರಿಗೆ ಪ್ರಮುಖವಾಗಿತ್ತೇ ವಿನಃ ಸುತ್ತಲಿನವರ ಪ್ರತಿಕ್ರಿಯೆಗಳಲ್ಲ. ಕನಕದಾಸರ ಉತ್ಕಟತೆ ಕೃಷ್ಣನನ್ನೇ ಆಲಯದಿಂದ ಬಯಲುಗೊಳಿಸಿತು. ದೈವದ ದಿಕ್ಕನ್ನೇ ಬದಲಿಸಿತು. ಅವರು ವ್ಯವಸ್ಥೆಯ ವಿರುದ್ಧ ಬಂಡೇಳಲಿಲ್ಲ. ಆದರೆ ವ್ಯವಸ್ಥೆಯ ಅಂತರಂಗವನ್ನೇ ತನ್ನ ಕ್ರಿಯೆಯಿಂದ ಬದಲಿಸುವ ಶಕ್ತಿ ಅಲ್ಲಿತ್ತು. ಅದು ಭಕ್ತಿಯ ಕೊಡುಗೆ.

"ಕುಲಕುಲ ಕುಲವೆನ್ನುತಿಹರೋ ಕುಲವಾವುದು ಸತ್ಯ ಸುಜನರಿಗೆ?" ಎಂದು ಪ್ರಶ್ನಿಸುವ ಕನಕ ಶ್ರೇಷ್ಠ– ಕನಿಷ್ಠಗಳು ಬರಿ ನೋಟದ ತೊಡಕುಗಳೆಂಬುದನ್ನು ಲೋಕವಿವರಣೆಯ ಮೂಲಕವೇ ಅರಿವಾಗುವಂತೆ ಮಾಡುತ್ತಾರೆ.

**ಕೆಸರೊಳು ತಾವರೆ ಪುಟ್ಟಲು ಅದ ತಂದು/ಕುಸುಮನಾಭನಿಗೆ ಅರ್ಪಿಸರೇನಯ್ಯ/ಪಶುವಿನ ಮಾಂಸದೊಳುತ್ಪತ್ತಿ ಕ್ಷೀರವ/ವಸುಧೆಯೊಳಗೆ ಭೂಸುರರುಣ್ಣರೇನಯ್ಯ**

ಕೆಸರೊಳಗೆ ಹುಟ್ಟುವ ತಾವರೆ ಜಗದ್ವಂದ್ಯನಾದ ಹರಿಗೆ ಒಪ್ಪಿತವಷ್ಟೇ ಅಲ್ಲ ಪ್ರಿಯವಾದುದು. ಧರೆಗೆ ಶ್ರೇಷ್ಠರೆನಿಸಿಕೊಂಡ ಬ್ರಾಹ್ಮಣರು ಪವಿತ್ರವೆಂದು ಸ್ವೀಕರಿಸುವ ಹಾಲು ಉತ್ಪತ್ತಿಯಾಗುವುದು ಪಶುವಿನ ಮಾಂಸಲವಾದ ದೇಹದಲ್ಲೇ. ಮೂಲಕ್ಕೆ ಹೋಗಿ ನೋಡಿದಾಗ ಶ್ರೇಷ್ಠ ಕನಿಷ್ಠವೆಂಬ ತರ್ಕವೇ ಅರ್ಥಹೀನ. ಆದರೆ ಇಲ್ಲಿ ಪ್ರಶ್ನೆಯಿರುವುದು

# ನವಿಲುಗರಿ

## ಒಂದು ಗಝಲ್



ಮರೆಯುವುದು ಸುಲಭವಾಗದು ನಿನಗೆ ಮರೆತುಬಿಡು
ಕಡುಕಷ್ಟವದು ಅನ್ನಲಾಗದು ನಿನಗೆ ಮರೆತುಬಿಡು

ಕೊಡಬಹುದು ಕಾಡಲಾಗದು ನಿನಗೆ ಮರೆತುಬಿಡು
ನೋಡಬಹುದು ನೋಯಿಸಲಾಗದು ನಿನಗೆ ಮರೆತುಬಿಡು

ಪ್ರೇಮಿಸಬಹುದು ವಂಚಿಸಲಾಗದು ನಿನಗೆ ಮರೆತುಬಿಡು
ಹಂಬಲಿಸಿರಬಹುದು ಅಂಗಲಾಚಲಾಗದು ನಿನಗೆ ಮರೆತುಬಿಡು

ಮೋಹಿಸಿರಬಹುದು ಮುಡಿಯಲಾಗದು ನಿನಗೆ ಮರೆತುಬಿಡು
ಹಾಡಿಸಿರಬಹುದು ಕಾಡಿಸಲಾಗದು ನಿನಗೆ ಮರೆತುಬಿಡು

ಗೆದೆಯಬಹುದು ಕದಿಯಲಾಗದು ನಿನಗೆ ಮರೆತುಬಿಡು
'ಹೊನ್ನಸಿರಿ' ಪ್ರೀತಿಸಬಹುದು ದೂರಲಾಗದು ನಿನಗೆ ಮರೆತುಬಿಡು



**–ಸಿದ್ಧರಾಮ ಹೊನ್ಕಲ್**

**(ಇವರ ಇತ್ತೀಚಿನ 'ಆಕಾಶಕ್ಕೆ ಹಲವು ಬಣ್ಣಗಳು' ಗಝಲ್ ಸಂಕಲನದಿಂದ ಆಯ್ದ ಒಂದು ಗಝಲ್)**

## ಈಚೆಗೆ ನನ್ನ ಮೌನ

ಬಿಸಿಲಿಗೆ ಚಾಚಿದ
ಹೆಬ್ಬಾವಿನಂತ
ಕರಿಯ ಬಂಡೆ
ಮುದುರಿ ಬಿದ್ದ ಹಣ್ಣೆಲೆ
ಕಿವಿ ಕೆಪ್ಪಾಗುವಂತೆ
ಜೀರುಂಡೆಯ ಜೀ ಸದ್ದು
ಇರಬಹುದೇನೋ...

ಇನ್ನೊಂದು ಕಡಲು
ದಾಟಿಸುವ ಹಾಯಿದೋಣಿ
ಇದಲ್ಲ
ಅಮರ್ತ್ಯಕ್ಕೆ ಮುಟ್ಟಿಸುವ ಏಣಿ
ಇದಲ್ಲ



ಚಿತ್ರಗಳು: ವಿಜಯಶ್ರೀ ಹಾಲಾ

ಸಣ್ಣತನಗಳ ಹೆಡೆಮುರಿ ಕಟ್ಟುವ
ಮಾತಿನ ಬವಣೆ ನೀಗುವ ಹತಾರ
ಇದಲ್ಲ



ಮಾತು ವ್ರಣ
ಮೌನ ಕನ್ನಡಿ


**–ಆರ್. ಪವಿತ್ರ ಪ್ರಿಯಭಾಷಿಣಿ**

## ಹಿಂಚಲನೆ

ಕಪ್ಪೆಚಿಪ್ಪಿನ ಬೆಚ್ಚನೆಯ ಎದೆಗೂಡಲಿ
ಅಡಗಿದ ಮುದ್ದಾದ ಮುತ್ತಿಗೆ ಮತ್ತೆ ಮರಳಿ
ಮಳೆಯ ಪಾರದರ್ಶಕ ಹನಿಯಾಗುವ
ಬಯಕೆ
ಕೋಶಕಳಚಿ ಹೊರಬಿದ್ದ ಬಣ್ಣದ ಚಿಟ್ಟೆಗೆ
ಕಂಬಳಿಹುಳುವಾಗಿ ಪುನಃ ಸೋಮಾರಿ
ನಿದ್ರೆಗೆ ಜಾರುವ ತವಕ
ನಾಚಿಕೆ ಮರೆತು ತನ್ನನ್ನು ಸ್ಪರ್ಷಕ್ಕೆ
ತೆರೆದುಕೊಂಡ ಮುಳ್ಳಿಗೆ ತಿರುಗಿ ಮುದುಡಿ
ಅವಿತುಕೊಳ್ಳುವ ಹಂಬಲ
ಸೃಷ್ಟಿ ಸೌಂದರ್ಯಕ್ಕೆ ಪುಟ್ಟ ಕೊಡುಗೆಯಾಗಿ
ಹಬ್ಬಿನಿಂತ ಬಿರಿದ ಹೂವಿಗೆ ಇನ್ನೊಮ್ಮೆ
ಮೊಗ್ಗಾಗಿ ಬಚ್ಚಿಟ್ಟುಕೊಳ್ಳುವ ಆಸೆ
ಧುಮ್ಮಿಕ್ಕಿ ಮುನ್ನುಗ್ಗಿ ಸರಬರನೆ ಸಾಗಿ
ಕಡಲ ತೆಕ್ಕೆ ಸೇರಿದ ಉತ್ಸುಕದ ನದಿಜೀವಕ್ಕೆ
ಹಿಂದಿರುಗಿ ಭುವಿಯಾಳ ಸೇರುವ ಇಚ್ಛೆ
ಹಿಂಚಲನೆಯ ಸಂಕೇತಗಳ
ಪ್ರಕ್ರಿಯೆಯಲ್ಲ ಇವು
ಭ್ರಮನಿರಸನ ತಪ್ಪಿಸಿ ಮೌನಕ್ಕೆ
ಜಾರುವ ಮೂಕಸನ್ನೆಗಳು



**–ಮಮತಾ ಅರಸೀಕೆರೆ**



---

ಸಾಮಾಜಿಕ ಸ್ವೀಕಾರಾರ್ಹತೆಯದು. ವಿಭಜಿಸುವ ಮತೀಯತೆಯದು.

**ಆತ್ಮ ಯಾವಕುಲ ಜೀವ ಯಾವಕುಲ/ತತ್ವೇಂದ್ರಿಯಗಳ ಕುಲ ಪೇಳಿರಯ್ಯ/ಆತ್ಮನು ಕಾಗಿನೆಲೆಯಾದಿಕೇಶವನೊಲಿದ/ಭಕ್ತರಿಗೆ ಕುಲವಾವುದು ಹೇಳಿರಯ್ಯ**

ಕುಲದ ಅಹಂಕಾರದಿಂದ ದೇವರನ್ನೇ ಬಂಧಿಸಿದ ಹುಸಿ ಧಾರ್ಮಿಕತೆಯನ್ನು ಬಯಲುಮಾಡುವ ಶಕ್ತಿಯನ್ನು ಕನಕರಿಗೆ ಕೊಟ್ಟಿದ್ದು ಭಕ್ತಿಮಾರ್ಗದ ವಿವೇಕ. ಆತ್ಮಕ್ಕೆ ಕುಲದ ಬಂಧನವಿಲ್ಲ ಎಂಬುದು ಅವರ ದರ್ಶನ.

**ಮುಕುತರಾದರು ಎನ್ನ ನೂರೆಂಟು ಕುಲದವರು/ಮುಕುತಿ ಮಾರ್ಗಕೆ ಯೋಗ್ಯ ನಾನಾದೆನೋ/ಅಕಳಂಕ ಶ್ರೀಹರಿ ಭಕುತಿಗೆನ್ನಮನ ಬೆಳೆದು/ರುಕುಮಿಣಿಯರಸ ಕೈವಶವಾದನೆನಗೆ**

ಕೃಷ್ಣನೇ ತನ್ನ ಕೈವಶವಾದನೆಂಬಲ್ಲಿ ಈ ನೂರೆಂಟು ಕುಲದ ಆತ್ಮವಿಶ್ವಾಸವೇ ಮಾತಾಡುವಂತೆ ತೋರುತ್ತದೆ. ಮನುಷ್ಯರನ್ನು ಅವರ ಸಾಮಾಜಿಕ ಸ್ತರಗಳಿಂದ ಮೇಲಕ್ಕೆತ್ತಿ ಆಧ್ಯಾತ್ಮಕ ನೆಲೆಯಲ್ಲಿ ಮುಕ್ತಿ ಯೋಗ್ಯರನ್ನಾಗಿಮಾಡುತ್ತದೆ.

ಆತ್ಮದ ಅರಿವನ್ನು ಇಹದ ಬದುಕಿನ ಸಂದರ್ಭಗಳಿಗೂ ವಿಸ್ತರಿಸುವ ಮೂಲಕ ದಾಸದರ್ಶನವು ಸಮಾಜಮುಖಿಯಾಗಿದೆ. ವ್ಯಕ್ತಿಯ ಶೀಲವನ್ನು ರೂಪಿಸುವುದರ ಜೊತೆಗೆ ಸಾಮಾಜಿಕ ಶೀಲವನ್ನೂ ಅದು ಸೂಚಿಸುತ್ತಲೇ ಬಂದಿದೆ. ನೈತಿಕ ವಿಕಾಸದ ಪರಿಧಿಯನ್ನು ಬದುಕಿನ ಎಲ್ಲ ನೆಲೆಗಳಿಗೆ ವಿಸ್ತರಿಸುವ ಮೂಲಕ ಧರ್ಮದ ನಿಜ ಕರ್ತವ್ಯವನ್ನು ದಾಸರು ನಿಭಾಯಿಸಿದ್ದಾರೆ.

**ತಾನು ಉಣ್ಣದ ಪರರಿಗಿಕ್ಕದ ಧನವಿದ್ದ್ಯಾತಕೆ/ಮಾನಹೀನನಾಗಿ ಬಾಳ್ವ ಮನುಜನ್ಯಾತಕೆ/ಜ್ಞಾನವಿಲ್ಲದೆ ನೂರುಕಾಲ ಬದುಕ್ಯಾತಕೆ/ಮಾನಿನಿಯ ತೊರೆದ ಮೇಲೆ ಭೋಗವ್ಯಾತಕೆ?**


ಎಂದು ಕನಕದಾಸರು ಕೇಳಿದರೆ,

**ಪರಸತಿಯ ಬಯಸದಿದ್ದರೆ ಒಂದು ಸ್ನಾನ/ಪರರ ನಿಂದಿಸದಿರುವುದು ಒಂದು ಸ್ನಾನ/ಪರರೊಡವೆಯನಪಹರಿಸದಿರೆ ಒಂದು ಸ್ನಾನ/ಪರತತ್ವ ತಿಳಿದುಕೊಂಡರೆ ಗಂಗಾಸ್ನಾನ**

ಎಂದು ಪುರಂದರದಾಸರು ಸೂಚಿಸುತ್ತಾರೆ. ಧರ್ಮವೆಂಬುದು ಇಹಕ್ಕೂ ಪರಕ್ಕೂ ಸಲ್ಲುವ ಮಾರ್ಗದರ್ಶಿ. ಅದನ್ನು ಹೆಚ್ಚುಹೆಚ್ಚು ಮಾನವೀಯಗೊಳಿಸುವ ಮೂಲಕ ದಾಸರು ಜನಮನಕ್ಕೆ ಹತ್ತಿರವಾಗಿದ್ದಾರೆ. ಧರ್ಮವನ್ನು ವ್ಯಾಖ್ಯಾನಿಸುವ ಪಾಂಡಿತ್ಯಕ್ಕಿಂತ ಅದನ್ನು ಪಾಲಿಸುವ ನೈತಿಕತೆ ಅವರಿಗೆ ಮುಖ್ಯವೆನಿಸುತ್ತದೆ. ಮತಕುರುಡನ್ನು ಕಳೆದುಕೊಳ್ಳುವ ಮೂಲಕ ನಮ್ಮೊಳಗೇ ಇರುವ ದೈವತ್ವವನ್ನು ಎಚ್ಚರಿಸುವ ಕೆಲಸವನ್ನು ದಾಸರು ಮಾಡುತ್ತಾರೆ. ಆಗೆಲ್ಲ ಅವರ ಭಾಷೆ ಚಾಟಿಯಂತೆ ವರ್ತಿಸುತ್ತದೆ. ದಿಕ್ಕುತಪ್ಪಿ ಸಂತೆಗೆ ನುಗ್ಗಿದ ಕುರುಡು ನಾಯಿಯಂತಾದ ನಮ್ಮ ಸ್ಥಿತಿಯನ್ನು ವಿಡಂಬನೆಯ ಧ್ವನಿ ತಿವಿದು ಎಚ್ಚರಿಸುತ್ತದೆ.

**ವೇದವಾದಗಳನೋದಿತಂತೆ/ಗಾದೆಮಾಡಿಬಿಟ್ಟಿತಂತೆ/ಹಾದಿತಪ್ಪಿ ನಡೆದು ಯಮನ/ಬಾಧೆಗೆ ತಾ ಗುರಿಯಾಯಿತಂತೆ**

ಅಜ್ಞಾನ ಹಾಗೂ ಅಧರ್ಮವು ಕೈಕೈ ಹಿಡಿದು ಸಾಗುತ್ತಿರುವಾಗ ಈ ಎಚ್ಚರದ ಧ್ವನಿ ದಿಕ್ಸೂಚಿಯಾಗುತ್ತದೆ. ಮಂಗನ ಕೈಗೆ ಸಿಕ್ಕ ಮಾಣಿಕ್ಯದಂತೆ ಮಾನವ ಜನ್ಮವನ್ನು ಹಾಳುಮಾಡಿಕೊಳ್ಳದಿರಿ ಎಂಬ ವಿವೇಕವನ್ನು ಜಾಗ್ರತಗೊಳಿಸುವ ದಾಸದರ್ಶನವು ಈ ನೆಲದ ಅರಿವಿನ ಧರ್ಮವಾಗಿದೆ.



(ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಿಕೆಯಾಗಿರುವ ಲೇಖಕಿ ಕನ್ನಡದ ಖ್ಯಾತ ಕವಯತ್ರಿ, ಕಥೆಗಾರ್ತಿ ಮತ್ತು ವಿಮರ್ಶಕಿಯೂ ಹೌದು)

ಒಂದು ವಾರೆನೋಟ

# ಈ ಕನ್ನಡವನ್ನು ಏನು ಮಾಡಬೇಕು?

–ವಿಜಯೇಂದ್ರ ಪಾಟೀಲ



ಚಿತ್ರ ಗುಜ್ಜಾರ್

ಇಂದಿನ ನನ್ನ ಚುಮು – ಚುಮು ಬೆಳಗಿನ ಎಂಟೂವರೆಗೆ ನನ್ನ ಈ ಗೆಳೆಯ ಹಾಸಿಗೆಯ ಬಳಿಯೇ ಬಂದು ತಲೆಗೆ ಸಣ್ಣದಾಗಿ ಹೊಡೆದು "....... ಇನ್ನು ಈ ಕನ್ನಡವನ್ನು ಏನು ಮಾಡುವುದು..?"ಎಂದು ಕೇಳಿದ. ತಲೆಗೆ ಮೊಟಕಿದಾಗ ಇಳಿಯದ ಅಮಲು, ಅವನ ಪ್ರಶ್ನೆಯಿಂದ ಕ್ಷಣಾರ್ಧದಲ್ಲಿ ಇಳಿದು ಬಿಟ್ಟಿತು. ಎಚ್ಚರಾದೆ! ತೀರ ಸಣ್ಣವನಿದ್ದಾಗ ಕನ್ನಡ ಎಂಬ ಪದ ಕಿವಿಗೆ ಬಿದ್ದ ಕೂಡಲೇ ಝೇಂಡಾ ಹಾರಿದಂತೆ ನೆಗೆದು ನಿಲ್ಲುತ್ತಿದ್ದ ಅಮಲು ಈಚೀಚೆಗೆ ಕನ್ನಡ ಎಂದಾಕ್ಷಣ ಸರ್ರನೆ ಇಳಿಯತೊಡಗುತ್ತದೆ. ಒಳ್ಳೆಯ ಕೊಲೆಸ್ಟರಾಲ್ ಕೆಟ್ಟ ಕೊಲೆಸ್ಟರಾಲ್ ಇರುವಂತೆ ಈ ಅಮಲಿನಲ್ಲೂ ಅಂಥದೇನಾದರೂ ಇರಬೇಕು ಅಂತ ಯೋಚಿಸುತ್ತ ಗೆಳೆಯನ ಕಡೆ ನೋಡಿದೆ. ಆತ ಈ ಸಾರಿ ತಲೆಗೆ ಮೊಟಕದೆ "......ಈ ಕನ್ನಡವನ್ನು ಇನ್ನು ಏನು ಮಾಡಬೇಕು?" ಎಂದು ಮತ್ತೆ ಕೇಳಿದ. ನಾನು ಗೋಡೆಯ ಮೇಲಿನ ಕ್ಯಾಲೆಂಡರ್ ನೋಡಿದಾಗ ಅಚ್ಚುಗನ್ನಡದ ಇವನ ಮಾತಿನ ಅರ್ಥ ಹೊಳೆಯಿತು. "... ಓಹೋ...ನವಂಬರ್ ಹತ್ತಿರ ಬಂತೋ.." ಎಂದುಕೊಳ್ಳುತ್ತ ಎದ್ದು ಬಚ್ಚಲ ಮನೆಗೆ ಹೋದೆ. ನಾವು ಮನದ ಭಾಷೆ ಅರಿಯಬಲ್ಲ ಹಳೆಯ ಗೆಳೆಯರು. ಇವ 'ಕನ್ನಡ ಅನ್ನದ ಭಾಷೆ ಹೌದೋ ಅಲ್ಲವೋ' ಎಂದು ಪರೀಕ್ಷಿಸಲು ಕಾಫಿ, ತಿಂಡಿ, ಊಟಗಳ ಹೊತ್ತಿಗೆ ಬಂದು ಕನ್ನಡವನ್ನು ಗೆಲ್ಲಿಸಿ ತಾನೂ ಗೆದ್ದು ಹೋಗುತ್ತಿರುತ್ತಾನೆ. ಆದರೆ ಅಕ್ಟೋಬರ್ ಕೊನೆ – ಕೊನೆಗೆ ಅವನಿಗೆ ಕನ್ನಡದ ವಿಷಯದಲ್ಲಿ ಹೆಚ್ಚಿನ ಮಹತ್ವಾಕಾಂಕ್ಷೆ ಕಾಣಿಸುತ್ತದೆ. ಕನ್ನಡ ಕೇವಲ ಅನ್ನದ ಭಾಷೆ ಮಾತ್ರವಾಗದೆ ಬಟ್ಟೆ – ಬರೆ ಕೊಡಿಸುವ 'ಶಕ್ತಿ ಕೇಂದ್ರ' ಕೂಡ ಆಗಬೇಕು ಎಂಬುದು ಅವನ ಸದಾಶಯ. ಮುಂದಿನ ಕನ್ನಡ ಮಾಸದಲ್ಲಿ ಮಾತ್ರ ಬೀಸುವ ಹಿತವಾದ ಗಾಳಿಗೆ ವರ್ಷಕ್ಕೆಲ್ಲ ಆಗುವಷ್ಟು ಕಾಳುಗಳನ್ನು ತೂರಿಕೊಳ್ಳಬೇಕು. ಹೀಗಾಗಿ 'ಕನ್ನಡವೆನೆ ಕುಣಿದಾಡುವ' ಎದೆಯವರನ್ನು ಸೇರಿಸಿ ಒಂದು ತಿಂಗಳು ಕುಣಿಸುತ್ತಾನೆ. ಇಷ್ಟಾದರೂ ಅವ ನನ್ನ ಗೆಳೆಯನೇ. ಕನ್ನಡವನ್ನು ಉಳಿಸಿ ಅದರಿಂದ ತಾನುಳಿಯುವ ಸಕಾಮ, ಸ್ವಂತ ಉದ್ಯೋಗ ಅವನದು.! ಕನ್ನಡದ ಸಂಕಟಕ್ಕೆ ಒಳ್ಳೆಯವರನ್ನು ಎಲ್ಲಿಂದ ತರುವುದು? ಸಿಕ್ಕರೆ ಇಂಥವರು ಮಾತ್ರ. ಅನಿವಾರ್ಯ ಕರ್ಮ!

ಈ ವರ್ಷದ ರಾಜ್ಯೋತ್ಸವಕ್ಕೆ ಹೆಚ್ಚು ಸೂಕ್ಷ್ಮವಾದ "....ಈ ಕನ್ನಡವನ್ನು ಏನು ಮಾಡುವುದು..?" ಎಂಬ ಕನ್ನಡ ಗೋವಿನ ಮೂಲಕ ಮಾಡು ಇಲ್ಲವೆ ಮಡಿ ಎಂಬ ಹೊಸ ಹುನ್ನಾರ ಹೂಡಿದ್ದಾನೆಯೇ? ಎಂಬ ಸಂದೇಹ ನನಗೆ. ಈ ಕನ್ನಡೋಪಜೀವಿಗೆ ಪ್ರತಿ ಸಲವೂ ನಾನೇ ಮೊದಲ 'ಬಲಿ ಚಕ್ರವರ್ತಿ'. ಇವನ ಕನ್ನಡದ ದೀವಿಗೆಗೆ ದೀಪದ ಹುಳುಗಳನ್ನು ಹುಡುಕಿ ಕೊಡಬೇಕು. ಅದಕ್ಕೇ ನನ್ನ ಬಳಿ ಬಂದಿರಬೇಕು......

ನಾನು ಹಗುರಾಗಿ ಬಂದೆ. ಕಾಫಿ ಕುಡಿದಾದ ಮೇಲೆ ಆತ ಗಂಭೀರನಾಗಿ ಮತ್ತೆ ಅದನ್ನೇ ಕೇಳಿದ. "....ಈ ಕನ್ನಡವನ್ನು ಏನು ಮಾಡುವುದು...?" ನನಗೊಂದು ಅನುಮಾನ ಶುರುವಾಯಿತು. ಕನ್ನಡದ ಪರಿಚಾರಿಕೆಯಿಂದ ಈತ ನಿವೃತ್ತನಾಗುತ್ತಿದ್ದಾನೆಯೇ? ಉತ್ತರಾಧಿಕಾರಿಯನ್ನು ಹುಡುಕುತ್ತಿದ್ದಾನೆಯೇ? ಅಂತೆಯೇ ರಾವಣ ಕೊಟ್ಟ ಆತ್ಮಲಿಂಗವನ್ನು ಗಣಪತಿ "ಎಲ್ಲಿಡಲಿ?" ಎಂದು ಕೇಳಿದಂತೆ ನನ್ನನ್ನು ಕೇಳುತ್ತಿದ್ದಾನೆಯೇ? ಎಂದು ಆಲೋಚಿಸಿದೆ. ಒಂದಂತೂ ನಿಜ. ಈಚೆಗೆ 'ಕನ್ನಡದ ಭೂಮಿ' ಮೊದಲಿನಂತೆ ಹುಲುಸಾಗಿ ಬೆಳೆಯುತ್ತಿಲ್ಲ. ಒಂದು ಕಾಲದಲ್ಲಿ 'ಓಹೋ ಕನ್ನಡ, ಆಹಾ ಕನ್ನಡ' ಎನ್ನುತ್ತ ಅದನ್ನು ಮೆರೆಸುತ್ತಿದ್ದವರ ಮಕ್ಕಳು – ಮೊಮ್ಮಕ್ಕಳೇ ಇಂದು 'ಛೇ ಛೇ ಕನ್ನಡ, ಛೂ ಛೂ ಕನ್ನಡ' ಎನ್ನುತ್ತಿದ್ದಾರೆ. ನಾನಾದರೂ ಏನು ಹೇಳಲಿ? ನಾನೂ ಇತ್ತೀಚಿನ ವರ್ಷಗಳಲ್ಲಿ 'ಈ ಕನ್ನಡವನ್ನು ಏನು ಮಾಡುವುದು?' ಎಂದೇ ಧೇನಿಸುತ್ತಿರುವವ. ಮನೆಯಲ್ಲಿ ಇರುವ ನಾವಿಬ್ಬರು ಕನ್ನಡದ ಕೊನೆಯ ಕೊಂಡಿಗಳು. ನಮ್ಮ ಜೊತೆಗೆ ಇರುವ ಕನ್ನಡ ಪುಸ್ತಕಗಳನ್ನು ಏನು ಮಾಡುವುದು ಎಂಬ ಚಿಂತೆ ಬೇರೆ. ಆಗ ನಮ್ಮ ಹಿಂದಿನ ಮನೆಯ ಹಿರಿಯರ ನೆನಪಾಯಿತು. ಮಕ್ಕಳು ದೂರ. ಮನೆ ದೇವರ ಪೂಜೆಗೆ ವಾರಸುದಾರರೇ ಇಲ್ಲ.

ಈಚೆಗೆ 'ಕನ್ನಡದ ಭೂಮಿ' ಮೊದಲಿನಂತೆ ಹುಲುಸಾಗಿ ಬೆಳೆಯುತ್ತಿಲ್ಲ. ಒಂದು ಕಾಲದಲ್ಲಿ 'ಓಹೋ ಕನ್ನಡ, ಆಹಾ ಕನ್ನಡ' ಎನ್ನುತ್ತ ಅದನ್ನು ಮೆರೆಸುತ್ತಿದ್ದವರ ಮಕ್ಕಳು – ಮೊಮ್ಮಕ್ಕಳೇ ಇಂದು 'ಛೇ ಛೇ ಕನ್ನಡ, ಛೂ ಛೂ ಕನ್ನಡ' ಎನ್ನುತ್ತಿದ್ದಾರೆ. ನಾನಾದರೂ ಏನು ಹೇಳಲಿ? ನಾನೂ ಇತ್ತೀಚಿನ ವರ್ಷಗಳಲ್ಲಿ 'ಈ ಕನ್ನಡವನ್ನು ಏನು ಮಾಡುವುದು?' ಎಂದೇ ಧೇನಿಸುತ್ತಿರುವವ.

ಹಾಗಾಗಿ ದೇವರ ಪೆಟ್ಟಿಗೆ ತೆಗೆದುಕೊಂಡು ಉಡುಪಿಗೆ ಹೋಗಿ ಸಮುದ್ರದಲ್ಲಿ ಹಾಕಿ ಬಂದಿದ್ದರು. ಅದೇ ಸ್ಫೂರ್ತಿಯಲ್ಲಿ ನಾನೂ ಒಂದು ದಿನ ಸಣ್ಣ ವ್ಯಾನ್ ಬಾಡಿಗೆ ಮಾಡಿಕೊಂಡು ಹತ್ತಿರದ ಸರಕಾರಿ ಶಾಲೆಗೆ ಹೋಗಿದ್ದೆ. ಪ್ರಧಾನ ಗುರುಮಾತೆಯವರನ್ನು ಕಂಡು 'ಶಾಲೆಯ ಗ್ರಂಥಾಲಯಕ್ಕಾಗಿ ಕನ್ನಡ ಪುಸ್ತಕ ತಂದಿದ್ದೇನೆ, ಇದು ಶುದ್ಧ ನಿಷ್ಕಾಮ ದಾನ, ಒಪ್ಪಿಸಿಗೊಳ್ಳಿ' ಎಂದು ಹೆಮ್ಮೆಯಿಂದ ಕೈ ಮುಗಿದು ದಾನ ಫಲಕ್ಕಾಗಿ ಕಾದು ನಿಂತೆ. ಆದರೆ ಅವರೀಗ ಹೆಡ್ ಮಿಸ್ಟ್ರೆಸ್ ಆಗಿ ಬದಲಾಗಿ ಬಿಟ್ಟಿದ್ದರು. ತಮ್ಮ ಭೌತಿಕ ಅಂತರ ಹೆಚ್ಚಿಸಿಕೊಳ್ಳುತ್ತ, ಕಂಗ್ಲೀಷಿನಲ್ಲಿ 'ಇದು ಗವರ್ನಮೆಂಟ್ ಇಂಗ್ಲಿಷ್ ಸ್ಕೂಲ್ ಕಣ್ರೀ......ಕರ್ನಾಟಕ ಗವರ್ನಮೆಂಟ್ ಅಂದ ಕೂಡಲೆ ಕನ್ನಡಾನೇ ಇರಬೇಕು ಅಂತ ರೂಲ್ಸ್ ಇದೆಯೇನ್ರೀ..? ಹೋಗಲಿ. ಇಂಗ್ಲೀಷ್ ಪುಸ್ತಕನಾದ್ರು ತಂದಿದ್ದರೆ ಡೊನೇಟ್ ಮಾಡಿಸಿಗೋಬಹುದಿತ್ತು. ಈ ಪುಸ್ತಕಗಳನ್ನು ತೂಕಕ್ಕೆ ಹಾಕಿ. ವ್ಯಾನ್ ಬಾಡಿಗೆಯಾದರೂ ಸಿಕ್ಕತ್ತೆ...' ಅಂದರು. ನನಗೆ ಅವರು ಹಳೇ ಸಿನಿಮಾದ ರಮಾದೇವಿಯಾಗಿ ಕಂಡರು. ಅವರ ಮಾತು 'ಆಹಾ...ತಂದ್ರು,ತಂದ್ರು...ತಂದೇ ಬಿಟ್ರು. ಹೋಗ್ರಿ ಹೋಗ್ರೀ' ಎಂಬಂತೆ ಕೇಳಿಸಿತು. ಹೊರಗೆ ಕನ್ನಡದಲ್ಲೇ ಬರೆದಿದ್ದ ಸರಕಾರಿ ಇಂಗ್ಲಿಷ್ ಮಾಧ್ಯಮ ಶಾಲೆಯ ಬೋರ್ಡ್ ಓದದ್ದು ತಪ್ಪು ಎಂದು ಪುಸ್ತಕಗಳ ಜೊತೆ ಮರಳಿ ಬಂದಿದ್ದೆ. ಮಕ್ಕಳು – ಮೊಮ್ಮಕ್ಕಳ 'ಹೋಗೇ ಬಿಟ್ಟವು, ಕನ್ನಡ ಪುಸ್ತಕ' ಎಂಬ ಖುಷಿಯ ಕುಣಿತ ನಿಂತು ಹೋಯಿತು. ಹೀಗೆ ಆಲೋಚನೆ ನಡೆದೇ ಇದ್ದಾಗ ನನ್ನ ಗೆಳೆಯ ಹೆಗಲು ಹಿಡಿದು ಜೋರಾಗಿ ಅಲ್ಲಾಡಿಸಿ "...... ಈಗ ಈ ಕನ್ನಡವನ್ನು ಏನು ಮಾಡುವುದು...?" ಎಂದು ಮತ್ತೆ ಕೇಳಿದ....! ಇವನಿಗೆ ಕೂಡ ಕನ್ನಡವೆಂಬುದು ರೋಸಿಹೋಗುವ ಸಂಗತಿಯಾಯಿತೇ ಎಂಬ ಸಂದೇಹ ಕಾಡತೊಡಗಿತು.

ಅವನ ಪ್ರಶ್ನೆ ಬಹುಶಃ ನಿಜವಿದ್ದಿರಬೇಕು. ನನ್ನನ್ನೇ ಕೇಳುತ್ತಿದ್ದಾನೆ. ಈ ಪ್ರಶ್ನೆ ಬರುವುದು ಕನ್ನಡದ ಜೊತೆ ಬಾಳಿದ ನನ್ನಂಥವರಿಗೆ ಮಾತ್ರ ಎಂಬ ಹೆಮ್ಮೆ ಒಂದು ಕಡೆ; ನನಗೇ ಬರಬೇಕೇ ಎಂಬ ಧರ್ಮಸಂಕಟ ಇನ್ನೊಂದುಕಡೆ..! ಈವರೆಗೆ ಎಂದೂ ಕನ್ನಡ ಬೇಕೇ ಎಂಬ ಪ್ರಶ್ನೆ ಹುಟ್ಟಿದ್ದಿಲ್ಲ. ಕನ್ನಡ ಬೇಡವೇ ಎಂಬ ಪ್ರಶ್ನೆ ಕೂಡ ಹುಟ್ಟಿದ್ದಿಲ್ಲ. ಬೇಕೇ, ಬೇಡವೇ ಎಂದು ಕೇಳಿಕೊಂಡು ಇರುವಂಥ ಸಂಬಂಧವೇ ಇದು? 'ಮರೆತೆಯಾದರೆ ಅಯ್ಯೋ! ಮರೆತಂತೆ ನನ್ನ' ಎಂಬ ಸಿಕ್ಕಾ ಮನಸ್ಸಿನಲ್ಲಿ ಕುಳಿತು ಬಿಟ್ಟಿತ್ತು. ಆದರೆ ಕಾಲ ಬದಲಾಗುತ್ತಿದೆ. 'ಕನ್ನಡಕೆ ಹೋರಾಡು ಕನ್ನಡದ ಕಂದ' ಎಂದು ಕೇಳಿಸಿಕೊಂಡ ಅಂದಿನ ಕಂದಮ್ಮಗಳು ಇಂದು ನಮ್ಮಂತೆ ಮುದುಕ??ಗಳಾಗಿವೆ. ಸಾಲದ್ದಕ್ಕೆ ಡುಂಡಿರಾಜ ಹೇಳಿದಂತೆ ಇಂದು 'ಕನ್ನಡವ ಕಾಪಾಡು ಕನ್ನಡಿಗರಿಂದ' ಎಂಬ ಕಷ್ಟವನ್ನೂ ಆ ಮಾಜಿ ಕಂದಮ್ಮಗಳು ಎದುರಿಸಬೇಕಾಗಿದೆ.....! ಗೆಳೆಯ ಪುನಃ ಅದೇ ಪ್ರಶ್ನೆ ಕೇಳಿಯಾನೆಂದು ನಾನೇ ಅವನಿಗೆ ಕೇಳಿದೆ: "ಸರಿ. ನೀನೇ ಹೇಳು, ಈ ಕನ್ನಡವನ್ನು ಏನು ಮಾಡುವುದು..?" ಪರೀಕ್ಷೆಯಲ್ಲಿ ಜೊತೆಯಾಗಿ ನಪಾಸಾದರೆ ಆಗುವ ಸಮಾಧಾನ ಇಬ್ಬರಿಗೂ ಆಯಿತು. ಸಪ್ಲಿಮೆಂಟರಿ ಪರೀಕ್ಷೆಗೆ ಓದುವಂತೆ "ಈ ಕನ್ನಡವನ್ನು ಏನು ಮಾಡಬೇಕು?" ಎಂದು ಜೊತೆಯಾಗಿ ಚಿಂತಿಸತೊಡಗಿದೆವು.

ಕನ್ನಡ ಅನ್ನದ ಭಾಷೆಯಾಗಬೇಕು ಎಂಬ ಕೂಗು ನಮಗೂ ಕೇಳಿಸಿತ್ತು. ದೇವರು ಸಿಗದಾಗ ದೆವ್ವದ ಬಳಿ ಹೋಗುವಂತೆ ಕಹೋ( ಕನ್ನಡ ಹೋರಾಟಗಾರ) ನಾಯಕನ ಬಳಿ ಹೋದೆವು. ಅವರ ಗ್ಯಾಂಗ್ ಕನ್ನಡ ಮಾಸದ ತಯಾರಿಯಲ್ಲಿ ತೊಡಗಿದಂತಿತ್ತು. ಅವರಿಗೆ ಅನ್ನದ ವಿಷಯ ನಿವೇದಿಸಿದೆವು. "ಇದು ಅರ್ಧ ಗಂಟೆಯ ಜಂಬರ. ಬನ್ನಿ ನಮ್ಮ ಸಂಗಡ" ಎಂದವರೇ ವ್ಯಾನ್ ಹತ್ತಿಸಿ 'ಬಾಂಬೇ ಭುವನ'ದ ಮುಂದೆ ಇಳಿಸಿದರು. ಒಳಗೆ ಹೋಗಿ ಕೇಸರಿ, ಖಾರಾ, ಚೌಚೌಭಾತ್‌ಗಳಿಂದ ಹಿಡಿದು ಲೇಮನ್, ಬಿಸಿಬೇಳೆ, ರೈಸ್‌ಭಾತ್‌ಗಳವರೆಗೆ ಎಲ್ಲಾ ತರಿಸಿದರು. ಪಲಾವ್‌ನಲ್ಲಿ ಭಾತ್ ಆಗಲಿ ಕನ್ನಡವಾಗಲಿ ಇರಲಿಲ್ಲ. ಆದರೂ ಸಂಶಯದ ಕಾರಣದಿಂದ ತರಿಸಿದರು. ಕೊನೆಗೆ ಕರ್ಡ್ ರೈಸ್...! ಎಲ್ಲಾ ತಿಂದಾದ ಮೇಲೆ ಗಲ್ಲಾದ ಮೇಲಿನ ವ್ಯಕ್ತಿಗೆ 'ನಿಮ್ಮ ತಿಂಡಿಫಲಕದಲ್ಲಿರುವ ಎಲ್ಲಾ ಭಾತ್ ಗಳನ್ನು ನವೆಂಬರ್ ಒಂದರೊಳಗಾಗಿ ಅನ್ನಗಳೆಂದು ಪರಿವರ್ತಿಸಿ. ಕನ್ನಡ ಅನ್ನದ ಭಾಷೆಯಾಗುವುದು ಇಂದಿನ ಜರೂರು. ನಾವು ಯಾರೆಂದು ಗೊತ್ತಲ್ಲವೇ?' ಎಂದು ಕೇಳಿ, ಎಂದಿನಂತೆ ಬಿಲ್ ಕೊಡದೆ ಹುಲಿಗಳಂತೆ ಹೊರಟೇ ಬಿಟ್ಟರು. ನಾವೂ ಬಾಲವಾದೆವು. ಕನ್ನಡ ಇಷ್ಟು ಅನುಕೂಲಕರವಾಗಿ ಅನ್ನದ ಭಾಷೆ ಆಗಬಹುದೆಂಬುದು ನಮಗೆ ತಿಳಿದಿರಲೇ ಇಲ್ಲ.

ನ್ಯಾಯಾಂಗ ಕನ್ನಡಕ್ಕೆ ಕೊಟ್ಟ ತಪರಾಕಿಗಳ ಗೆರೆ ಕೆನ್ನೆಯ ಮೇಲೆ ಇನ್ನೂ ಇದ್ದರೂ ಆ 'ನ್ಯಾಯ ಮಾರ್ಗ' ದಲ್ಲಿ ಇನ್ನೊಮ್ಮೆ ಏಕೆ ಸಾಗಬಾರದು ಎಂದೆನಿಸಿ; ಮತ್ತು ಕಳೆದುಕೊಂಡಲ್ಲೇ


ಹುಡುಕ ಬೇಕಲ್ಲವೇ ಎಂದು ಧೇನಿಸಿ, ಒಬ್ಬ ವಕೀಲರ ಬಳಿ ಹೋದೆವು. ಕನ್ನಡದ ಕೇಸ್ ಎಂದಾಕ್ಷಣ ಅವರು ಉದ್ರಿ ಗಿರಾಕಿ ಎಂಬರ್ಥದಲ್ಲಿ ನೋಡಿದರು. ಹಣ ಸಂಗ್ರಹಿಸಿ ಕೊಡುತ್ತೇವೆಂದಾಗಲೂ 'ಬೇಡ. ನ್ಯಾಯಾಧೀಶರು ನಿಮ್ಮ ಮಕ್ಕಳನ್ನು ಯಾವ ಮಾಧ್ಯಮದಲ್ಲಿ ಓದಿಸಿದ್ದೀರಿ? ಎಂದು ನನ್ನನ್ನೇ ಕೇಳುತ್ತಾರೆ, ಕೇಸು ಬಿದ್ದು ಹೋಗುತ್ತದೆ' ಎಂದು ಹಳೆಯ ಕತೆಯನ್ನು ನೆನಪು ಮಾಡಿಕೊಟ್ಟರು. ಮಕ್ಕಳಿಗೆ ಕನ್ನಡದಲ್ಲಿ ಓದಿಸುವ ವಕೀಲರನ್ನು ಹುಡುಕುವುದು ಮತ್ತು ಸಾವಿಲ್ಲದ ಮನೆಯ ಸಾಸಿವೆ ತರಲು ಹೊರಡುವುದು ಎರಡೂ ಒಂದೇ ಎಂದು ತಿಳಿದಿತ್ತು. ಇಷ್ಟಕ್ಕೂ ಕೋರ್ಟು ಸಿಟ್ಟಿಗೆದ್ದು "ಇನ್ನು ಮೇಲೆ ಕನ್ನಡದಲ್ಲಿ ಮಾತು ಕೂಡ ಆಡಬಾರದು" ಎಂಬ ನಿರ್ಣಯ ಕೊಟ್ಟು ಬಿಟ್ಟರೆ ಏನು ಮಾಡುವುದು?

ಮುಂದೆ ಬಂದೆವು. ರೈಲು ನಿಲ್ದಾಣದಲ್ಲಿ ಹೊಸ ರೈಲು ಆರಂಭದ ಕಾರ್ಯಕ್ರಮ ನಡೆದಿತ್ತು. ಒಂದಕ್ಷರವೂ ಕನ್ನಡವಿರಲಿಲ್ಲ. ಯಾಕೆ ಹೀಗೆ ಅಂತ ಬ್ಯಾಡ್ಜ್ ಧರಿಸಿದ ಒಬ್ಬರನ್ನು ಕೇಳಿದೆ. 'ನಿಮಗೆ ಅಭಿವೃದ್ಧಿ ಮುಖ್ಯವೋ ಕನ್ನಡ ಮುಖ್ಯವೋ' ಎಂದು ಝುಬರಿಸಿದರು. ಎಲ್ಲೆಲ್ಲೂ ಕನ್ನಡಿಗರೇ. ಆದರೆ ಎಲ್ಲೂ ಕನ್ನಡವಿಲ್ಲ ಎಂಬುದನ್ನು ಕಂಡು 'ನಮದೇ ನಾಡೆಲ್ಲ, ನಮ್ಮವರೆ ಜನರೆಲ್ಲ..' ಎಂದು ಹಾಡಿಕೊಂಡು ಹೊರಗೆ ಬಂದೆವು. ಇಂತಹ ಕನ್ನಡ ಹಾಡುಗಳು ಕೆಲವು ವೇಳೆ ತುಂಬಾ ಪ್ರಯೋಜನಕ್ಕೆ ಬರುತ್ತವೆ....!

ಪಾಲಕರು ಮತ್ತು ವಿದ್ಯಾರ್ಥಿಗಳ ಮನ ಒಲಿಸಿದರೆ ಹೇಗೆ ಎಂಬ ಆಗಹೋಗದ ಯೋಚನೆ ಮತ್ತೆ ಬಂತು. ಆದರೆ ಆಕಾಶದ ನಕ್ಷತ್ರ ಎಣಿಸುವುದು ಸಾಧ್ಯವೇ? ಇವರಿಂದಲೇ ಕನ್ನಡ ಹೀಗಾಗಿರುವುದು ಎಂಬ ಕೋಪ ಬೇರೆ. ಮುಂದುವರಿದ, ಹಿಂದುಳಿದ, ನಡುವಿನವರ ಎಲ್ಲರಿಗೂ ಕನ್ನಡದ ಮೇಲೆಯೇ ಕೋಪ ! ಹೀಗಾಗಿ ಆ ಪ್ರಯತ್ನ ಮಾಡಲಿಲ್ಲ.

ಮರುದಿನ ಗೆಳೆಯನಿಗೊಂದು ಅಗಾಧ ಉಪಾಯ ಹೊಳೆಯಿತು. ಹೇಗಾದರು ಮಾಡಿ ಕನ್ನಡ ಖಾತೆಯ ಮಂತ್ರಿಣಿಯರ ಮೂಲಕ ಮುಖ್ಯಮಂತ್ರಿಯವರನ್ನು ಕಂಡು 'ಈ ಕನ್ನಡವನ್ನು ಏನು ಮಾಡುವುದು' ಎಂಬ ಪ್ರಶ್ನೆ ಇರಿಸಿ ಜವಾಬ್ದಾರಿಯನ್ನು ಅವರ ಕೊರಳಿಗೇ ಹಾಕಿ ಬಿಡುವುದು! ಇದು ಒಳ್ಳೆಯದೆಂದು ನನಗೂ ಅನಿಸಿತು. ಕಸ ಹಾಕಲು ಒಳ್ಳೆಯ ತೊಟ್ಟಿ ಹುಡುಕಿದ ಸಮಾಧಾನ! ಇದು ಸರಕಾರದ ಕೆಲಸ. ಮತ್ತು ಕನ್ನಡದ ಕೆಲಸವೆಂದರೆ ದೇವರ ಕೆಲಸ. ಆಗಲೇ ಬೇಕು. ಕಹೊ ನಾಯಕನ ಮೂಲಕ ಮಂತ್ರಿಣಿಯವರನ್ನು ಹಿಡಿಯಬೇಕೆಂದು ಅವರ ಮನೆಗೆ ಹೋದೆವು. ಆಶ್ಚರ್ಯ! ಬೆಕ್ಕು – ಇಲಿ ಅಲ್ಲಿಯೇ ಇದ್ದವು! ಆದರೆ ಅವರಿಬ್ಬರೂ ನಮ್ಮ ಮುಂದೆಯೇ ಒಂದೇ ಕಾರಿನಲ್ಲಿ ಮಕ್ಕಳ ಸಹಿತ ವಿಮಾನ ನಿಲ್ದಾಣದತ್ತ ಸಾಗಿದರು. ನೈನಿತಾಲದ ಡೂನ್ ಶಾಲೆಯಲ್ಲಿ ಇಬ್ಬರ ಮಕ್ಕಳದೂ ನಾಳೆಯೇ ಎಡ್ಮಿಶನ್. ಆದರೆ ದೈವಬಲವಿತ್ತು. ಯಾರದೋ ವಶೀಲಿಯ ಮೂಲಕ ಸಂಜೆಯೇ ಮುಖ್ಯಮಂತ್ರಿಗಳ ದರ್ಶನಕ್ಕೆ ಅನುಮತಿ ದೊರಕಿತು. ಅಹವಾಲು ಬರೆದು ಕಳಿಸಿದೆವು. ದೈವಕೃಪೆಯೊಂದಿದ್ದರೆ ಕನ್ನಡ ತನ್ನ ಗತವೈಭವ ಪಡೆದೇ ಪಡೆಯುತ್ತದೆಂದು ಸಂಜೆ ಮುಖ್ಯ ಮಂತ್ರಿಗಳ ಕಚೇರಿಗೆ ಹೋದೆವು. ಅರ್ಧಗಂಟೆ ಕಾಯುತ್ತಿರುವಾಗ ನಮ್ಮ ಹಾಗೇ ಕನ್ನಡದ ಕೆಲಸಕ್ಕೆ ಬಂದ ಸೂಟು–ಬೂಟಿನವರು ಸಿಕ್ಕರು. ಜೊತೆಗೆ ದುಬಾಷಿಯಿದ್ದರು. ಇನ್ನೂ ಇಬ್ಬರು ನಮ್ಮ ಹಾಗೆ ಕನ್ನಡದ ಕೆಲಸಕ್ಕೆಂದೇ ಬಂದಿದ್ದರು. ಆನೆ ಬಲ ಬಂದಂತಾಯ್ತು. ನಮಗೆಲ್ಲ ಒಟ್ಟಿಗೆ ಬುಲಾವ್ ಬಂತು. ದೊಡ್ಡ ಕೋಣೆ. ಯಾವಾಗಲೂ ಟೀವೀಯಲ್ಲಿ ಕಾಣಿಸುವ ಮುಖ್ಯ ಮಂತ್ರಿಯವರನ್ನು ಪ್ರತ್ಯಕ್ಷ ಕಂಡಾಗ ಬಂದ ಕೆಲಸವೇ ಮರೆತಂತಾಗಿತ್ತು. ಆದರೆ ಅವರು ಮರೆತಿರಲಿಲ್ಲ. 'ಈ ಕನ್ನಡವನ್ನು ಏನು ಮಾಡಬೇಕು..?' ಎಂಬ ವಿಷಯವನ್ನು ಮೊದಲು ಎತ್ತಿಕೊಂಡು "ಚಿಂತಿಸ ಬೇಡಿ. ರಾಜ್ಯದ ಮುಖ್ಯಮಂತ್ರಿಯಾಗಿ ಕನ್ನಡ ಕಾಪಾಡುವ ಹೊಣೆ ನನ್ನದು. ಅದಕ್ಕಾಗಿ ನೇಮಿಸಿದ ಸಮಿತಿ ವರದಿ ಕೊಟ್ಟಿದೆ. ಮತ್ತು ಸರಕಾರ ಅದನ್ನು ಪೂರ್ತಿಯಾಗಿ ಒಪ್ಪಿಕೊಂಡಿದೆ. ಇನ್ನು ಮುಂದೆ ಕನ್ನಡದ ಹಿತವನ್ನು ಕಾಪಾಡುವ ಹೊಣೆಯನ್ನು ಮೆ.ಜಿಂಗರ್ & ಜಿಂಗರ್ ಅಂತರ್ ರಾಷ್ಟ್ರೀಯ ಕಂಪನಿಗೆ ಕೊಡಲಾಗುತ್ತದೆ. ಟೆಂಡರ್ ಅವರಿಗೇ ಆಗಿದೆ....." ಎಂದು ಘೋಷಿಸಿದರು. ನಮ್ಮ ಪಕ್ಕದ ಸೂಟು ಬೂಟಿನ ವ್ಯಕ್ತಿ ಇಷ್ಟು ಮಾತ್ರದ ಕನ್ನಡ ಚನ್ನಾಗಿ ಅರ್ಥ ಮಾಡಿಕೊಂಡಂತೆ ಎದ್ದು ನಿಂತು ಇಂಗ್ಲೀಷ್‌ನಲ್ಲಿ ಮುಖ್ಯ ಮಂತ್ರಿಗಳಿಗೆ ಬಾಗಿ ವಂದಿಸಿ, ಧನ್ಯವಾದ ಹೇಳಿದ್ದೂ ಅಲ್ಲದೇ ನಮ್ಮ ಕಡೆ ತಿರುಗಿ ಅದೇ ಇಂಗ್ಲೀಷ್‌ನಲ್ಲಿ "ಡೋಂಟ್ ವರಿ. ಇನ್ನು ನಿಮ್ಮ ಕನ್ನಡ ನಾವು ನೋಡಿಕೊಳ್ಳುತ್ತೇವೆ. ಅದಕ್ಕಾಗಿ ನಮ್ಮ ರಾಜ್ಯದಿಂದ ಫರ್ಸ್ಟ್ ಬ್ಯಾಚ್ ಈಗಾಗಲೇ ಹೊರಟಿದೆ. ......" ಎಂದು ಹೇಳಿ ಗುಡ್ ಬಾಯ್ ಎನ್ನುವಂತೆ ಕೈ ಮಾಡಿದರು. ಅದು ಕನ್ನಡಕ್ಕೇ ಗುಡ್ ಬಾಯ್ ಅನಿಸಿಬಿಟ್ಟಿತು. ಹೊರಗೆ ಹೋಗುವ ಸೂಚನೆ ದೊರಕಿತು.........

ಅಂತೂ ಕನ್ನಡಕ್ಕೆ ಕಾರ್ಪೊರೇಟ್ ಸ್ಥಾನಮಾನ ದೊರಕುತ್ತಿದೆ ಎಂಬ ಟನ್ ತೂಕದ ಸಮಾಧಾನ ತಲೆಯ ಮೇಲೆ ಹೊತ್ತು ನಾವು ಹೊರಬಿದ್ದೆವು. ಇನ್ನು ಮುಂದೆ ಕನ್ನಡ ಭಾಷೆಯಲ್ಲಿ ಕರ್ತೃ, ಕರ್ಮಗಳಿರುವುದಿಲ್ಲ, ಬರಿ ಕ್ರಿಯಾ ಪದದ ಮೂಲಕವೇ ಕನ್ನಡವನ್ನು ಗುರುತಿಸಬೇಕೇನೊ ಎಂದುಕೊಂಡು, ಕನ್ನಡದ ಕ್ರಿಯಾ ಕರ್ಮ ಒಂದು ರೀತಿಯಲ್ಲಿ ಮುಗಿದಂತಾಗಿ ನಾವು ಮನೆಗೆ ಬಂದು ಸ್ನಾನ ಮಾಡಿದೆವು..



**(ಈಗ ಧಾರವಾಡ ನಿವಾಸಿಯಾದ ಲೇಖಖರು ನಿವೃತ್ತ ಬ್ಯಾಂಕ್ ಮ್ಯಾನೇಜರ್ ಮತ್ತು ಕನ್ನಡದ ವಿಶಿಷ್ಟ ಹಾಸ್ಯ ಬರಹಗಾರರು)**

**೨ನೇ ಪುಟದಿಂದ)**

ಹಂಬಲಿಸುವನು. ಇದರಿಂದಲೇ ಪರಂಪರೆ ಬೆಳೆಯುವುದು. ಇಂಥದೊಂದು ಪರಂಪರೆ ಈ ದೇಶದಲ್ಲಿ ಬೆಳೆದಂತೆ ಬೇರೆಲ್ಲೂ ಬೆಳೆದಿಲ್ಲ. ಇದೇ ಈ ದೇಶದ ವಿಶೇಷತೆ. ಹಿಂದೂ ಧರ್ಮ ಎಂದರೆ ಸಾಧು–ಸಂತರ ಧರ್ಮ ಎಂದು ಗಾಂಧೀಜಿ ಹೇಳಿದ್ದು ಈ ಅರ್ಥದಲ್ಲಿ.

ಇಂಥ ಸಾಧು–ಸಂತರ ಮಹತ್ವ ನಮ್ಮ ಜನಸಾಮಾನ್ಯರಿಗೆ ಅವರ ಒಳನೋಟ ದಿಂದಲೇ ಮನವರಿಕೆಯಾಗಿದೆ. ಆದುದರಿಂದಲೇ ಜಾತಿ ಮತ ಭೇದವನ್ನು ಮರೆತು ಸಂತರಿಗೆ ಜನ ನಡೆದುಕೊಳ್ಳುವರು. ಗಾಂಧೀಜಿಗೆ ಇದು ತಿಳಿದಿದ್ದುದರಿಂದಲೇ ಈ ದೇಶದಲ್ಲಿ ಹಿಂದೂಗಳು ಮುಸ್ಲಿಮರು ಸೋದರರಂತೆ ನಡೆದುಕೊಳ್ಳುವುದು ಸಾಧ್ಯವಾಗದಿದ್ದರೆ ಅದು ಬೇರೆಲ್ಲಿ ಸಾಧ್ಯ ಎಂದು ತಿಳಿದಿದ್ದರು. ನನಗೆ ಯಾವಾಗಲೂ ಅನ್ನಿಸುವುದೆಂದರೆ ಸಂತರು ತಮ್ಮ ಅನುಭವವನ್ನು ಇನ್ನೊಬ್ಬನಲ್ಲಿ ಸಂಕ್ರಮಿಸುವಾಗ ಲೌಕಿಕ ದೃಷ್ಟಿಯಲ್ಲಿ ತನಗಿಂತ ಬೇರೆ ಜಾತಿಯ, ಬೇರೆ ಮತದ ವ್ಯಕ್ತಿಯನ್ನೇ ಆರಿಸುವಂತಾಗಿದ್ದರೆ ಎಷ್ಟು ಒಳ್ಳೆಯದಿತ್ತು ಎಂದು. ಗೋವಿಂದಭಟ್ಟ ಮತ್ತು ಶರೀಫರ ಸಂಬಂಧ ಹೀಗಿತ್ತು . ಗಾಂಧೀಜಿ –ಗಡಿನಾಡ ಗಾಂಧೀ ಸಂಬಂಧವೂ ಹೀಗೇ ಇತ್ತು. ನನ್ನ ಗುರುಗಳ ಬಾಳಿನಲ್ಲಿಯೂ ನಾನಿದನ್ನು ನೋಡಿದೆ. ....

ಅದಿರಲಿ. ನಮ್ಮ ಸೆಕ್ಯುಲರಿಸ್ಟರು ಈ ತಥ್ಯವನ್ನು ಗುರುತಿಸುವುದರಲ್ಲಿ ಇನ್ನಿಲ್ಲದಷ್ಟು ಸೋತಿದ್ದಾರೆ. ಇದೇ ಎಲ್ಲ ದುರಂತಗಳ ಮೂಲ.

**–ಲಕ್ಷ್ಮೀಶ ತೋಳ್ಪಾಡಿ**, ಪುತ್ತೂರು

ಡಿಎಸ್‌ಎನ್ ಬರಹ, ಸೆಕ್ಯುಲರಿಸಂ ಕುರಿತು ನಾವೆಲ್ಲ ತೆರೆದ ಮನಸ್ಸಿನಿಂದ ಮಾತನಾಡುವಂತೆ ಪರಿಚಯಿಸುವಷ್ಟು ದಿಟ್ಟತನದಿಂದ ಕೂಡಿದೆ. ನಾವೂ ಕೂಡ ಚರ್ಚಾಪಟುಗಳಂತೆ ಮಾತನಾಡದೆ, ನಮ್ಮ ಅಂತರಂಗದ ಜೊತೆ ಮಾತನಾಡುವ ರೀತಿಯಲ್ಲಿ ಮಾತನಾಡಬೇಕು.

. ಗಾಂಧಿ, ಅರಬಿಂದೋ, ಲೋಹಿಯಾ, ರಮಣರು, ಕುವೆಂಪು, ನಾರಾಯಣ ಗುರು ಇವರೆಲ್ಲ ನಮಗೆ, ಧರ್ಮದ ಸಾಂಸ್ಥಿಕ ಆಯಾಮಗಳನ್ನು ಪ್ರಶ್ನಿಸುತ್ತಲೇ ಅದರ ಉಳಿದ ಆಯಾಮಗಳಿಗೆ ಹೇಗೆ ಸ್ಪಂದಿಸಬೇಕು, ನಮ್ಮ ಕಾಲಕ್ಕೆ ಧರ್ಮವನ್ನು ಹೇಗೆ ಪ್ರಸ್ತುತಗೊಳಿಸಿಕೊಳ್ಳಬೇಕು ಎನ್ನುವ ಸವಾಲಿಗೆ ಹಲವು ಮಾದರಿಗಳನ್ನು ಕೊಟ್ಟಿದ್ದಾರೆ. . ಪ್ರಭುತ್ವವು ಧರ್ಮದಿಂದ, ಚರ್ಚಿನಿಂದ ಬಿಡಿಸಿಕೊಳ್ಳಬೇಕೆಂಬುದು ಪಶ್ಚಿಮದ ಹೆಣಗಾಟ. ಧಾರ್ಮಿಕ ಪರಿಕಲ್ಪನೆಗಳಿಗನುಗುಣವಾಗಿ ಪ್ರಭುತ್ವ ನಡೆಯಬೇಕು ಎನ್ನುವುದು ಇಲ್ಲಿನ ಹೆಣಗಾಟ.

ನಾವು ನಮ್ಮ ಸಂಸ್ಕೃತಿಗೆ critical insider ಆಗಿರಬೇಕೆಂದು ಹೇಳುತ್ತಾ critical ಆಗಿದ್ದೇವೆಯೇ ಹೊರತು insider ಆಗಿಲ್ಲ. ಹಬ್ಬ, ಹರಿದಿನ, ಉತ್ಸವ, ಪೂಜೆ, ಪುನಸ್ಕಾರಗಳಲ್ಲಿ ಪ್ರಾಮಾಣಿಕವಾಗಿ ತೊಡಗಿದವರನ್ನೆಲ್ಲ ನಮಗಿಂತ ಕೀಳಾಗಿ ಕಂಡಿದ್ದರಿಂದಲೇ ಪ್ರಗತಿಪರರಿಗೆ, ಎಡಪಂಥೀಯರಿಗೆ ಈ ದೇಶದ ಬಹುಸಂಖ್ಯಾತ ಧರ್ಮಭೀರು ಸಾಮಾನ್ಯರೊಂದಿಗೆ ಸಂಹವನ ಸಾಧ್ಯವಾಗಲಿಲ್ಲ. ಈ ಮನೋಧರ್ಮದಿಂದ ಲಾಭ ಪಡೆದವರು ಯಾರು, ಇದರಿಂದ ಸಮಾಜಕ್ಕೆ ಆದ ಸಾಂಸ್ಕೃತಿಕ ನಷ್ಟ ಯಾವ ಸ್ವರೂಪದ್ದು ಎಂದು ಬಿಡಿಸಿ ಹೇಳಬೇಕಾಗಿಲ್ಲ.


**–ಕೆ. ಸತ್ಯನಾರಾಯಣ**, ಬೆಂಗಳೂರು

ಸೆಕ್ಯುಲರ್‌ವಾದ, ಐರೋಪ್ಯ ಮೂಲದ ಸೈದ್ಧಾಂತಿಕ ರಾಜಕೀಯ ವಿದ್ಯಮಾನವೆನ್ನುವುದು ಎಷ್ಟು ಸತ್ಯವೋ ಭಾರತೀಯ ಸಂದರ್ಭದಲ್ಲಿ ಅದು ಅನೇಕಾನೇಕ ಸವಾಲುಗಳ ನಡುವೆ ಮರುನಿರೂಪಿತವಾಗುತ್ತಿದೆ ಎನ್ನುವುದೂ ಅಷ್ಟೇ ಸತ್ಯ. ಸೆಕ್ಯುಲರ್‌ವಾದ ನಮ್ಮ ಈ ದೇಶದಲ್ಲಿ ಅನೇಕ ಚಾರಿತ್ರಿಕ ಪ್ರಕ್ರಿಯೆಗಳನ್ನು ಹಾದು ಬಂದಿದೆ. ಸಮಾಜ ಸುಧಾರಣಾ ಮತ್ತು ಸ್ವಾತಂತ್ರ್ಯ ಹೋರಾಟಗಳ ಮೂಲಕ, ಸಂವಿಧಾನದ ಸಭೆಯ ಚರ್ಚೆಗಳ ಮೂಲಕ, ಜೊತೆಗೆ ಸ್ವಾತಂತ್ರ್ಯೋತ್ತರ ರಾಜಕಾರಣದಲ್ಲಿ ನಡೆದ ಅನೇಕ ರಾಜಕೀಯ ಮತ್ತು ಬೌದ್ಧಿಕ ಸೆಣಸಾಟಗಳ ಮೂಲಕ ಸೆಕ್ಯುಲರ್‌ವಾದ ನಮ್ಮೊಳಗೆ ಬಂದಿದೆ.

ಹೀಗೆ ಸೆಕ್ಯುಲರ್‌ವಾದ ಪಶ್ಚಿಮದಿಂದ ನಮ್ಮಲ್ಲಿಗೆ ಬರುವಾಗ ಪಡೆದಿರುವ ರೂಪಾಂತರಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ ನಾವು ಇಂದು ಭಾರತದ ಸಾಂಸ್ಕೃತಿಕ ಚರಿತ್ರೆಯಲ್ಲಿ ಹಾಸು ಹೊಕ್ಕಂತಿರುವ ಸಹನಶೀಲತೆ, ಸಹಬಾಳ್ವೆ ಹಾಗೂ ಸೌಹಾರ್ದಗಳ ನೆಲೆಯಲ್ಲಿ ಭಾರತೀಯ ಸೆಕ್ಯುಲರ್‌ವಾದ ಹೊಸರೂಪವನ್ನು ಕಟ್ಟಬೇಕಾಗಿದೆ. ಅದಕ್ಕೆ ನಾವು ಗಾಂಧಿ–ವಿವೇಕಾನಂದರನ್ನೂ ಒಳಗೊಂಡಂತೆ ನಮ್ಮ ಅಧ್ಯಾತ್ಮ ಪರಂಪರೆಯ ಚಿಂತನಶೀಲ ಸಂತರ ಚಿಂತನೆಗಳಿಂದ ತಾತ್ತ್ವಿಕ ಸಂಪನ್ಮೂಲಗಳನ್ನು ಪಡೆಯಬೇಕಾಗಿದೆ. ಸೆಕ್ಯುಲರ್‌ವಾದದ ಲೋಪದೋಷಗಳ ಜೊತೆಗೆ ನಾವು ನಡೆಸುವ ತಿಕ್ಕಾಟವೇ ಸುತ್ತಲಿನ ಲೋಕದ ಕುರಿತ ನಮ್ಮ ಜೀವನದೃಷ್ಟಿಯನ್ನು ರೂಪಿಸುತ್ತಿದೆ. ನೀವೂ ಕೂಡ ಅಂತಹ ಒಂದು ಲೋಪದ ಬಗ್ಗೆಯೇ ಚರ್ಚೆಯನ್ನು ಆರಂಭಿಸಿದ್ದೀರಿ. ಇದನ್ನು ನೀವು ಹೊಸಮನುಷ್ಯ ಪತ್ರಿಕೆಯಲ್ಲಿ ಸರಣಿ ಬರಹಗಳ ಮೂಲಕ ಮುಂದುವರಿಸುವುದು ಒಳ್ಳೆಯದು.

**–ನಿತ್ಯಾನಂದ ಬಿ.ಶೆಟ್ಟಿ**, ತುಮಕೂರು

# 'ಗಾಂಧಿ ಕಥನ'ದ ನಾಲ್ಕು ಸಾವಿರ ಪ್ರತಿಗಳ ಲೋಕಾರ್ಪಣೆ: ಮತ್ತೆ ನಾಲ್ಕು ಸಾವಿರ ಪ್ರತಿಗಳಿಗೆ ಬೇಡಿಕೆ




ಪ್ರಜಾಪ್ರಭುತ್ವ ಬಿಕ್ಕಟಿನಲ್ಲಿರುವ ಇಂದಿನ ವೈಚಾರಿಕ ಸಂಘರ್ಷದ ಸಂದರ್ಭದಲ್ಲಿ ಡಿ.ಎಸ್, ನಾಗಭೂಷಣ ಅವರ ;ಗಾಂಧಿ ಕಥನ' ಕೃತಿ ಸುಂದರವಾದ ಸಮಾಜವೊಂದನ್ನು ಸೃಷ್ಟಿಸಲು ಪರಿಣಾಮಕಾರಿ ಸಾಧನವಾಗಬಲ್ಲುದು ಎಂದು ಮಾಜಿ ಸಚಿವ ಹಾಗೂ ಗದಗ ಕ್ಷೇತ್ರದ ಶಾಸಕ ಎಚ್. ಕೆ. ಪಾಟೀಲ್ ಹೇಳಿದರು. ಅವರು ಕಳೆದ ಅಕ್ಟೀಬರ್ ೧೩ರಂದು ಗದಗ ತಾಲ್ಲೂಕು ಹುಲುಕೋಟಿಯ ಶ್ರೀ ರಾಜೇಶ್ವರಿ ವಿದ್ಯಾನಿಕೇತನದ ಸಭಾಂಗಣದಲ್ಲಿ ಗದಗದ ಕೆ. ಎಚ್. ಪಾಟೀಲ್ ಪ್ರತಿಷ್ಠಾನ, ಬೆಂಗಳೂರಿನ ಎಂ. ಚಂದ್ರಶೇಖರ್ ಪ್ರತಿಷ್ಠಾನ ಮತ್ತು ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ ;ಗಾಂಧಿ ಕಥನ;ದ ನಾಲ್ಕನೇ ಆವೃತ್ತಿ ಮತ್ತು ನಾಲ್ಕು ಸಾವಿರ ಪ್ರತಿಗಳ ಲೋಕಾರ್ಪಣಾ ಕಾರ್ಯಕ್ರಮದಲ್ಲಿ ಕೃತಿ ಬಿಡುಗಡೆ ಮಾಡಿ ಮಾತನಾಡುತ್ತಿದ್ದರು.

'ಗಾಂಧಿ ಕಥನ' ಕೃತಿಯಲ್ಲಿ ವ್ಯಕ್ತವಾಗಿರುವ ಕೃತಿಕಾರ ನಾಗಭೂಷಣ ಅವರ ಒಡಲಾಳದ ಮಾತುಗಳು ನಮ್ಮೆಲ್ಲರ ಅಂತರಂಗದ ಪಿಸುದನಿಗಳೇ ಆಗಿರಬಹುದು ಎಂದು ಅಭಿಪ್ರಾಯಪಟ್ಟ ಪಾಟೀಲರು ಸರಳವಾಗಿ ಬದುಕುವ ಅತಿ ಕಠಿಣದ ಕೆಲಸದ ರಹಸ್ಯವನ್ನು ಈ ಕೃತಿ ತನ್ನೆಲ್ಲ ಸಣ್ಣ ವಿವರಗಳ ಮೂಲಕ ನಮ್ಮೆಲ್ಲರಿಗೂ ತಿಳಿಸಿಕೊಡಬಲ್ಲುದಾಗಿದೆ ಎಂದರು. ಗಾಂಧಿಯವರ ಚಿಂತನೆಗಳು ಬಡವರು, ಹಿಂದುಳಿದವರು ಮತ್ತು ಶೋಷಿತ ಸಮುದಾಯಗಳಿಗೆ ಟಾನಿಕ್ ಇದ್ದಂತಿದ್ದು, ಈ ಕೃತಿಯಲ್ಲಿನ ವಿಚಾರಗಳನ್ನು ಈ ಸಮುದಾಯಗಳು ತಮ್ಮ ಸರ್ವೋನ್ನತಿಗಾಗಿ ಬಳಸಿಕೊಳ್ಳಬೇಕೆಂದು ಕರೆಕೊಟ್ಟರು.

ಇದೇ ಸಂದರ್ಭದಲ್ಲಿ ಕೃತಿಯ ಬಗ್ಗೆ ಮಾತನಾಡಿದ ತುಮಕೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಡಾ., ನಿತ್ಯಾನಂದ ಬಿ.ಶೆಟ್ಟಿಯವರು, ಕನ್ನಡ ಓದಬಲ್ಲ ಯಾರಾದರೂ ಓದಿ ಆನಂದಿಸಬಹುದಾದ 'ಗಾಂಧಿ ಕಥನ' ಆಧುನಿಕ ಕನ್ನಡ ಗದ್ಯಕಾವ್ಯವಾಗಿದೆ ಎಂದು ವರ್ಣಿಸಿದರು. ಗಾಂಧಿಯನ್ನು ಕೊಂದುದನ್ನು ಆರಾಧಿಸುವವರು ಇಂದು ನಮ್ಮ ಶಾಸನ ಸಭೆ ಮತ್ತು ಸಂಸತ್ತನ್ನು ಪ್ರವೇಶಿಸುತ್ತಿರುವ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಗಾಂಧಿ ಅವಹೇಳನ ವಿಕ್ಷಿಪ್ತ ರೀತಿಗಳಲ್ಲಿ ನಡೆಯುತ್ತಿರುವ ಇಂದಿನ ದುರ್ದಿನಗಳಲ್ಲಿ ಡಿ.ಎಸ್. ನಾಗಭೂಷಣ ಅವರು ೭೦೦ಕ್ಕೂ ಹೆಚ್ಚು ಪುಟಗಳ ಈ ಬೃಹತ್ ಕೃತಿಯ ಮೂಲಕ ಗಾಂಧಿ ಕಾಲಕ್ಕೆ ಒಂದು ಮರುಭೇಟಿ ನೀಡಿ ಗಾಂಧಿಯವರನ್ನು ಮರಳಿ ನಮಗೆ ಸಂಪಾದಿಸಿಕೊಟ್ಟಿದ್ದಾರೆ ಎಂದರು.

ನಂತರ ಮಾತನಾಡಿದ ಕೃತಿಕಾರ ಡಿ.ಎಸ್. ನಾಗಭೂಷಣ ಅವರು ಪ್ರಜಾಸತ್ತೆ ನಿರ್ಣಾಯಕ ಬಿಕ್ಕಟ್ಟಿನಲ್ಲಿರುವ ಈ ದಿನಗಳಲ್ಲಿ ನಾವು ನಮ್ಮನ್ನು ನಾವೇ ಆಳಿಕೊಳ್ಳುವ ಮಾರ್ಗ ನಿರೂಪಿಸಿದ ಗಾಂಧಿಯವರ 'ಹಿಂದ್ ಸ್ವರಾಜ್'ನತ್ತ ನಮ್ಮ ಗಮನ ಕೇಂದ್ರೀಕೃತವಾಗಬೇಕು ಎಂದರು. ಇಂದು ಗ್ರಾಮ ಎಂಬುದು ಕಾಣೆಯಾಗುತ್ತಿರುವುದು ನಾವು ಗ್ರಾಮ ಸ್ವರಾಜ್ಯವನ್ನು ನಿರ್ಲಕ್ಷಿಸಲು ಕಾರಣವಾಗಬಾರದು; ಗ್ರಾಮವೆಂದರೆ ಜನ ಸಮುದಾಯದ ಒಂದು ಸಣ್ಣ ಘಟಕವೆಂದು ಅರ್ಥೈಸಿಕೊಂಡು ಆಡಳಿತವನ್ನು ಕೆಳಗಿನಿಂದ ಮೇಲಕ್ಕೆ ಅಧಿಕಾರ ಹರಿದುಹೋಗುವಂತೆ ವಿಕೇಂದ್ರೀಕರಿಸುವ ಹೊಸ ಪ್ರಭುತ್ವ ಪದ್ಧತಿಗಾಗಿ ಪ್ರಯತ್ನಿಸುವುದೊಂದೇ ಇಂದಿನ ಬಿಕ್ಕಟ್ಟಿಗೆ ಪರಿಹಾರವೆಂದು ಅಭಿಪ್ರಾಯಪಟ್ಟರು.

ಇದಕ್ಕೂ ಮುನ್ನ ಸಮಾರಂಭಧ ಆರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನೂ ಸ್ವಾಗತಿಸಿದ ಕೆ.ಎಚ್. ಪಾಟೀಲ ಪ್ರತಿಷ್ಠಾನದ ಡಿ.ಆರ್ ಪಾಟಿಲ ಅವರು ನಾನೆಂಬುದು ಅಳಿದಾಗ ಮಾತ್ರ ನಾವು ಗಾಂಧಿಗೆ ಹತ್ತಿರವಾಗಬಲ್ಲೆವು ಎಂಬ ಸಂದೇಶವನ್ನು ನೀಡುವ 'ಗಾಂಧಿ ಕಥನ' ಗಾಂಧಿಯವರನ್ನು ದೈವ ಸ್ವರೂಪಿಯನ್ನಾಗಿ ಮಾಡದೆ ವಿವಿಧ ಮೂಲಗಳಿಂದ ಸಂಗ್ರಹಿಸಿ ಜೋಡಿಸಿದ ಮಾಹಿತಿ ಮತ್ತು ತನ್ನದೇ ಒಳನೋಟಗಳ ಮೂಲಕ ಜನಸಾಮಾನ್ಯರ ಹತ್ತಿರಕ್ಕೆ ತರುವಲ್ಲಿ ಯಶಸ್ವಿಯಾಗಿದ್ದು, ಗದಗ ಜಿಲ್ಲೆಯ ಪ್ರತಿಯೋರ್ವ ವಿದ್ಯಾವಂತರೂ ಈ ಕೃತಿಯನ್ನು ಓದಬೇಕಾಗಿದೆ ಎಂದು ಅಭಿಪ್ರಾಯಪಟ್ಟರು. ಜಿಲ್ಲೆಯಲ್ಲಿ ಈವರೆಗೆ 'ಗಾಂಧಿ ಕಥನ' ಕೃತಿಯ ೭೮೨೦ ಪ್ರತಿಗಳ ಖರೀದಿಗೆ ಜನ ಹಣಕೊಟ್ಟು ಹೆಸರು ನೊಂದಾಯಿಸಿಕೊಂಡಿದ್ದಾರೆಂಬ ಸಂತೋಷದ ಸುದ್ದಿಯನ್ನೂ ಅವರು ಪ್ರಕಟಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಲೇಖಕ ಮತ್ತು ವಿಶ್ರಾಂತ ಪ್ರಾಚಾರ್ಯ ಪ್ರೊ. ಚಂದ್ರಶೇಖರ ವಸ್ತ್ರದ ಅವರು 'ಗಾಂಧಿ ಕಥನ' ಕೃತಿಯಿಂದ ಹಲವು ಭಾಗಗಳನ್ನು ಉಲ್ಲೇಖಿಸುತ್ತಾ ಹೇಗೆ ಈ ಕೃತಿ ಒಂದು ಸಾಹಿತ್ಯ ಕೃತಿಯೂ ಆಗಿ ಸಾರ್ಥಕವಾಗಿದೆ ಎಂದು ವಿವರಿಸಿದರು,


ವೇದಿಕೆಯಲ್ಲಿ ಕೃತಿಯ ಪ್ರಕಾಶಕರಾದ ಎಂ.ಸಿ. ನರೇಂದ್ರ, ಗಾಂಧಿ ಕಾರ್ಯಕರ್ತ ಪ್ರೊ. ಜಿ.ಬಿ. ಶಿವರಾಜು, ಜಿಲ್ಲಶ ಪಂಚಾಯ್ತ್ ಅಧ್ಯಕ್ಷ ರಾಜೂಗೌಡ ಕೆಂಚನಗೌಡ್ರ, ಉಪಾಧ್ಯಕ್ಷೆ ಶೋಭಾ ಮೇಟಿ ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾನಿಲಯದ ಕುಲಪತಿ ಡಾ, ವಿಷ್ಣುಕಾಂತ ಚಟಪಲ್ಲಿ ಉಪಸ್ಥಿತರಿದ್ದರು. ಮಾಜಿ ಸಚಿವ ಬಿ.ಆರ್. ಯಾವಗಲ್, ಮಾಜಿ ಎಂಪಿ ಐ.ಜಿ. ಸನದಿ ಸೇರಿದಂತೆ ಸಾರ್ವಜನಿಕ ಜೀವನದ ಹಲವು ಗಣ್ಯರು ಸಮಾರಂಭದಲ್ಲಿ ಭಾಗವಹಿಸಿದ್ದರು.

(ವರದಿ: ಸವಿತಾ ನಾಗಭೂಷಣ)

## ಧಾರವಾಡದಲ್ಲಿ 'ಗಾಂಧಿ ಕಥನ' ಬಿಡುಗಡೆ

ನಾವು ಒಂದು ರಾಷ್ಟ್ರವಾಗಿ, ಇವತ್ತಿನ ಜಾಗತಿಕ ಸಂದರ್ಭದಲ್ಲಿ ಯಾವ ರೀತಿ ಗಾಂಧೀಜಿ ಅವರ ಸ್ವಾತಂತ್ರ್ಯ ಆಂದೋಲನ, ಅವರ ತತ್ವಗಳು ಇಡೀ ಜಗತ್ತಿಗೆ'ಪ್ರೇರಣಾದಾಯಕವಾಗಿವೆ ಎಂಬುದನ್ನು ಮಾರ್ಟಿನ್ ಲೂಥರ್ ಕಿಂಗ್ ಮತ್ತು ನೆಲ್ಸನ್ ಮಂಡೇಲ ಅವರ ಸಮಾನಾತಾ ಹೋರಾಟಗಳ ಸ್ವರೂಪದ ಮೂಲಕ ತಿಳಿಯಬಹುದು ಎಂದು ಸಮಾಜ ಪರಿವರ್ತನಾ ಸಮುದಾಯದ ಪ್ರಮುಖ ಎಸ್.ಆರ್. ಹಿರೇಮಠ ಹೇಳಿದರು. ಇದೇ ಸಂದರ್ಭದಲ್ಲಿ ನಾವು ಅಂಬೇಡ್ಕರ್ ಅವರು ಅಂದು ಎಚ್ಚರಿಸಿದಂತೆ, ಸಾಮಾಜಿಕ ಅಸಮಾನತೆ ಹೋಗಲಾಡಿಸಬೇಕಾದರೆ ಎಲ್ಲರೂ ಕೂಡಿ ಹೋರಾಡಬೇಕಾಗಿದೆ ಎಂದು ಅವರು ಸೂಚಿಸಿದರು. ಹಿರೇಮಠ ಅವರು ದಿನಾಂಕ ೧೨.೧೦.೨೦೨೦ರಂದು ಧಾರವಾಡದಲ್ಲಿ ಅಲ್ಲಿನ ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯದ ಗಾಂಧಿ ಅಧ್ಯಯನ ವಿಭಾಗವು ಗಾಂಧಿ ಶಾಂತಿ ಪ್ರತಿಷ್ಠಾನದ ಆವರಣದಲ್ಲಿ ಕೂಡಿ ಏರ್ಪಡಿಸಿದ್ದ ಡಿ.ಎಸ್. ನಾಗಭೂಷಣ ಅವರ 'ಗಾಂಧಿ ಕಥನ' ಕೃತಿಯ ನಾಲ್ಕನೇ ಆವೃತ್ತಿಯನ್ನು ಬಿಡುಗಡೆ ಮಾಡಿ ಮಾತನಾಡುತ್ತಿದ್ದರು.

ಇಂದು ನಾವು ಗಾಂಧೀಜಿಯಿಂದ ಪಡೆಯಬಹುದಾದ ನಿಜವಾದ ಪ್ರೇರಣೆ ಎಂದರೆ ಪ್ರಧಾನಿ, ಮುಖ್ಯಮಂತ್ರಿಯಾದಿಯಾಗಿ ಎಲ್ಲರೂ ಸಾರ್ವಜನಿಕ ಬದುಕಿನ ಸೇವಕರೆಂದು ಪರಿಗಣಿಸಿ ನಮ್ಮ ಸಂವಿಧಾನ ಶಿಲ್ಪಿಗಳು ಸಂವಿಧಾನದ ಮೂಲಕ ನೀಡಿರುವ ವಿವಿಧ ಅಧಿಕಾರಗಳನ್ನು ಬಳಸಿ ಅವರ ನಡೆನುಡಿಗಳನ್ನು ನಿರ್ಭಿಡೆಯಿಂದ ಪ್ರಶ್ನಿಸುವುದೇ ಆಗಿದೆ ಎಂದು ಅವರು ಹೇಳಿದರು. .



ನಂತರ ಕೃತಿಯ ಬಗ್ಗೆ ಮಾತನಾಡಿದ ಗಾಂಧಿ ಶಾಂತಿ ಪ್ರತಿಷ್ಠಾನದ ಆಧ್ಯಕ್ಷ ಡಾ. ಸಂಜೀವ ಕುಲಕರ್ಣಿಯವರು 'ಗಾಂಧಿ ಕಥನ' ಕೃತಿಯು ಅಂಜುಬುರುಕ ಮೋಹನದಾಸ ಎಂಬ ಬಾಲಕ ಜಗತ್ತೇ ಬೆರಗುಗೊಳ್ಳುವಂತಹ ಮಹಾತ್ಮನಾಗಿ ಮೂಡಿದ ವ್ಯಕ್ತಿ ವಿಕಾಸದ ಕಥೆಯನ್ನು ಸಣ್ಣ ಸಣ್ಣ ವಿವರಗಳ ಮೂಲಕವೇ ಸಮಗ್ರವಾಗಿ, ಆದರೆ ಅತ್ಯಂತ ಸರಳ ಶೈಲಿಯಲ್ಲಿ ಕಟ್ಟಿಕೊಡುವ ಕನ್ನಡದ ಮೊದಲ ಕೃತಿಯಾಗಿದೆ ಎಂದರು.

ನಂತರ ಮಾತನಾಡಿದ ಕೃತಿಕಾಶರ ಡಿ.ಎಸ್, ನಾಗಭೂಷಣ ಅವರು ನಾವು ಗಾಂಧಿಯನ್ನು ಸ್ವಾತಂತ್ರ್ಯ ಹೋರಾಟಗಾರ, ರಾಷ್ಟ್ರಪಿತ ಎನ್ನುವುದಕ್ಕಿಂತ ಹೆಚ್ಚಾಗಿ ಪಶ್ಚಿಮದ ಆಧುನಿಕ ನಾಗರೀಕತೆ ಮನುಷ್ಯನನ್ನು ಮನುಷ್ಯತ್ವದಿಂದಲೇ ದೂರ ಮಾಡುವ ಅಪಾಯದ ವಿರುದ್ಧ ಎಚ್ಚರಿಸಿದ ಜಾಗತಿಕ ದಾರ್ಶನಿಕ ಎಂದು ಇಂದು ಪರಿಗಣಿಸಿ ಅಧ್ಯಯನ


ಮಾಡುವುದೇ ಅವರನ್ನು ಇಂದಿಗೆ ಪ್ರಸ್ತುತಗೊಳಿಸಿಕೊಳ್ಳುವ ಅತ್ಯುತ್ತಮ ವಿಧಾನವಾಗಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕರ್ನಾಟಕ ವಿಶ್ವವಿದ್ಯಾನಿಲಯದ ಗಾಂಧಿ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ. ಶಿವಾನಂದ ಶೆಟ್ಟರ್ ಅವರು ಗಾಂಧಿ ಮತ್ತು ಅವರ ಮಕ್ಕಳು, ಅವರ ಪತ್ನಿ ಹಾಗೂ ಡಾ. ಅಂಬೇಡ್ಕರ್ ಅವರೊಡನೆಯ ಸಂಬಂಧ-ಸಂವಾದ, ಹಿಂದೂ-ಮುಸ್ಲಿಂ ಐಕ್ಯತೆ, ರಾಷ್ಟ್ರ ವಿಭಜನೆ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಇಂದು ನಡೆದಿರುವ ಗಾಂಧಿ ಅವಹೇಳನದ ಕಾರ್ಯಕ್ರಮಗಳಿಂದ ಗೊಂದಲಕ್ಕೊಳಗಾದವರು 'ಗಾಂಧಿ ಕಥನ' ಓದಿ ಆ ಗೊಂದಲಗಳನ್ನು ಪರಿಹರಿಸಿಕೊಳ್ಳಬಹುದು ಎಂದು ಹೇಳಿದರು.

ಕೃತಿಯ ಪ್ರಕಾಶಕ ಎಂ.ಸಿ. ನರೇಂದ್ರ ವೇದಿಕೆಯಲ್ಲಿದ್ದರು. ಸಮಾರಂಭದಲ್ಲಿ ಶಂಕರ ಹಲಗತ್ತಿ, ಬಸವಪ್ರಭು ಹೊಸಕೇರಿ, ಡಾ. ಪ್ರಕಾಶ್ ಭಟ್, ಮಾಲತಿ ಪಟ್ಟಣಶೆಟ್ಟಿ, ಶಶಿಧರ ತೋಡ್ಕರ, ಅರುಣಾ ಹಳ್ಳಿಕೇರಿ ಮುಂತಾದ ಗಣ್ಯರು ಪಾಲ್ಗೊಂಡಿದ್ದರಲ್ಲದೆ ದೂರದ ಹಳಿಯಾಳ-ಕೈಗಾಗಳಿಂದ ಕೂಡ ಆಸಕ್ತರನ್ನು ಆಕರ್ಷಿಸಿತ್ತು.

**(ವರದಿ: ಹೊನ್ನಾಳಿ ಚಂದ್ರಶೇಖರ್)**

## ಡಿ.ಆರ್. ಪಾಟೀಲ್ ಎಂಬ ಸರಳ ಸಜ್ಜನ ಗಾಂಧಿ ಶ್ರದ್ಧಾಳು



ಕರ್ನಾಟಕದಲ್ಲಿ ಬಹಳ ಜನ ಕೆ.ಎಚ್. ಪಾಟೀಲರ ಹೆಸರು ಕೇಳಿರುತ್ತಾರೆ, ಹುಲುಕೋಟೆಯ ಹುಲಿ ಎಂದೇ ಪ್ರಸಿದ್ಧರಾಗಿದ್ದ ಅವರು ಒಂದು ಕಾಲದಲ್ಲಿ ಗದಗ ಜಿಲ್ಲೆ ರಾಜಕಾರಣದ ಅಜೇಯ ರಾಜಕಾರಣಿ ಎನಿಸಿದ್ದು, ಸಹಕಾರಿ ಚಳುವಳಿಯನ್ನು ಆ ಪ್ರದೇಶದಲ್ಲಿ ಯಶಸ್ವಿಯಾಗಿ ಕಟ್ಟಿದವರು. ಹಾಗೇಯೇ ಸಹಕಾರಿ ಆಂದೋಲನವನ್ನು ನಿರ್ವಹಿಸಿದ ರೀತಿಯೂ ಸೇರಿದಂತೆ ಸಾರ್ವಜನಿಕ ಜೀವನದಲ್ಲಿ ಸಾಕಷ್ಟು ವಿವಾದಾಸ್ಪದ ವ್ಯಕ್ತಿಯೇ ಆಗಿದ್ದವರು. ಇನ್ನು ಅವರ ಮಗ ಎಚ್.ಕೆ. ಪಾಟೀಲರು ಸಮಕಾಲೀನ ರಾಜಕಾರಣದಲ್ಲಿ ಸರಳ ಸಜ್ಜನ ರಾಜಕಾರಣಿಯೆಂದೇ ಹೆಸರಾಗಿ ಈ ತಲೆಮಾರಿನ ಜನಕ್ಕೆ ಸಾಕಷ್ಟು ಪರಿಚಿತರಾದವರು. ಸಚಿವರಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯ್ತ್ ರಾಜ್ ಕ್ಷೇತ್ರಗಳಲ್ಲಿ ಹಲವು ಜನಪರ ಕೆಲಸಗಳನ್ನು ಮಾಡಿ ಜನಮನದಲ್ಲಿ ಉಳಿದಿರುವವರು.ಆದರೆ ಇವರ ಸೋದರ ಸಂಬಂಧಿ ಡಿ.ಆರ್. ಪಾಟೀಲರು ಬಹಳ ಜನಕ್ಕೆ ಪರಿಚಿತರಲ್ಲದವರು. ಇವರೂ ಮಾಜಿ ಶಾಸಕರಾದರೂ, ಚುನಾವಣಾ ರಾಜಕಾರಣದಲ್ಲಿ ಹೆಚ್ಚು ಪಳಗಿದವರಲ್ಲದಾಗಿರುವುದೇ ಇದಕ್ಕೆ ಕಾರಣವಿರಬಹುದು. ಹಾಗಾಗಿಯೇ ಕೆಲವರಿಂದ 'ಸಂತ ರಾಜಕಾರಣಿ' ಎಂದು ಕರೆಯಲ್ಪಡುವ ಇವರು ಕಳೆದ ಲೋಕಸಭಾ ಚುನಾವಣೆಯಲ್ಲಿ ಸೋತಾಗ ಅವರ ವಿರೋಧಿ ಪಾಳೆಯದಲ್ಲೂ ಸಹಾನುಭೂತಿ ವ್ಯಕ್ತವಾದದ್ದು, ಅವರು ಸಂತ ರಾಜಕಾರಣಿಯೆಂದು ಗುರುತಿಸಲ್ಪಟ್ಟಿದ್ದೇ ಅವರ ಸೋಲಿಗೆ ಕಾರಣವಾಗಿರಲೂಬಹುದು.

'ಗಾಂಧಿ ಕಥನ'ದ ನಾಲ್ಕನೇ ಆವೃತ್ತಿಯ ಬಿಡುಗಡೆಗೆಂದು ಗೆಳೆಯ ಶಿವರಾಜ್ ಅವರ ಒತ್ತಾಯದ ಮೇರೆಗೆ ನಾನು ಮತ್ತು ನನ್ನ ಪತ್ನಿ ಮೊನ್ನೆ ಗದಗಕ್ಕೆ ಹೋದಾಗ ನಮ್ಮ ಬಳಗವನ್ನು ವೈಯುಕ್ತಿಕ ಪ್ರೀತಿ ವಿಶ್ವಾಸ ತೋರಿ ನೋಡಿಕೊಂಡುವರು ಈ ಡಿ. ಆರ್. ಪಾಟೀಲರೇ. ಮೆಲುದನಿಯ ಈ ಹಿರಿಯರು ರಾಮಕೃಷ್ಣ ಪರಮಹಂಸ-ವಿವೇಕಾನಂದರ ಪರಮ ಶಿಷ್ಯರು. ಅದು ಅವರ ನಡೆ ನುಡಿಗಳಲ್ಲೂ ಎದ್ದು ಕಾಣುತ್ತಿತ್ತು. ಎಚ್.ಕೆ. ಪಾಟೀಲರೊಂದಿಗೆ ಹುಲುಕೋಟೆಯ ಹತ್ತಾರು ಸಹಕಾರಿ ಸಂಸ್ಥೆಗಳು ಮತ್ತು ಅದರೊಂದಿಗೆ ಹಲವು ಹತ್ತು ಜನಸೇವಾ ಸಂಸ್ಥೆಗಳ ಜವಾಬ್ದಾರಿಯ ಭಾರ ಹೊತ್ತಿದ್ದರೂ, ಅದರ ಯಾವ ಗತ್ತೂ ಇಲ್ಲದೆ ನಮಗೆ ತಮ್ಮ ಊರಿನಲ್ಲಿ ತಾವು ನಡೆಸಿರುವ ಶುದ್ಧ ಕುಡಿಯುವ ನೀರಿನ ವಿನೂತನ ವ್ಯವಸ್ಥೆ, ಸತ್ತರೆ ಇಲ್ಲೇ ಮಣ್ಣಾಗಬೇಕೆಂದು ಯಾರಿಗಾದರೂ ಅನ್ನಿಸುವಷ್ಟು ಸುಂದರ ವಿಶಾಲ ಉದ್ಯಾನವನದಂತಿರುವ 'ಮುಕ್ತಿವನ' ಎಂಬ ಸರ್ವಧರ್ಮ ಸ್ಮಶಾನ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರಗಳ ಬಳಿ ಕರೆದೊಯ್ದು ಪರಿಚಯ ಮಾಡಿಕೊಟ್ಟರು. ಇವುಗಳೆಲ್ಲವನ್ನೂ ನೋಡಿದಾಗ ಗಾಂಧಿಯವರ ಆದರ್ಶಗ್ರಾಮ ಇದೇ ಇರಬಹುದೇ ಎನಿಸಿತಾದರೂ, ಅಲ್ಲಿ ಸ್ವರಾಜ್ಯ ಇದೆಯೇ ಎಂಬ ಪ್ರಶ್ನೆ ಎದ್ದು, ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಅದು ಅಸಾಧ್ಯ ಎಂದೂ ಎನಿಸಿ ಸದ್ಯಕ್ಕೆ ಇದಕ್ಕೇ ತೃಪ್ತಿಪಟ್ಟುಕೊಳ್ಳಬೇಕೋನೋ ಎನಿಸಿ ಸುಮ್ಮನಾದೆ.

ಆದರೆ ಗದಗ ಜಿಲ್ಲೆಯಲ್ಲಿ 'ಗಾಂಧಿ ಕಥನ; ಕೃತಿಯನ್ನು ಸಾವಿರಾರು ಜನರ ಬಳಿ ಒಯ್ಯುತ್ತಿರುವ ಪಾಟೀಲರ ಗಾಂಧಿ ನಿಷ್ಠೆ ಮತ್ತು ಶ್ರದ್ಧೆ ಈ ಕಾಲದ ರಾಜಕಾರಣಿಗಳ ಮಧ್ಯೆ ಅನನ್ಯವಾದದ್ದು ಮತ್ತು ಅಪರೂಪವಾದದ್ದು. ಹಲವು ಬಿಕ್ಕಟ್ಟುಗಳ ಈ ಕಾಲಕ್ಕೆ ಗಾಂಧಿ ಬೇಕಾಗಿದೆ ಎಂದು ಭಾವಿಸುವವರೆಲ್ಲರೂ ಡಿ. ಆರ್ ಪಾಟೀಲರ ಈ ಸಾಹಸಕ್ಕಾಗಿ ಅವರನ್ನು ಅಭಿನಂದಿಸಬೇಕಿದೆ.

**-ಡಿಎಸ್ಸೆನ್**

## ಎಸ್.ಪಿ. ಬಾಲಸುಬ್ರಮಣ್ಯಂ: ಒಂದು ನೆನಪು



**ಸಾ**ಮಾನ್ಯ ಜನರ ನಡುವೆ 'ಎಸ್ಪಿ' ಎಂದು ಗೆಳೆಯರ ಬಳಗದಲ್ಲಿ ಬಾಲು ಎಂದೇ ಪರಿಚಿತರಾದ ಶ್ರೀಪತಿ ಪಂಡಿತಾರಾಧ್ಯುಲ ಬಾಲಸುಬ್ರಮಣ್ಯಂ ಚಿತ್ರಗೀತೆಗಳ ಗಾಯನ ಧಾಟಿಗೆ ಹೊಸ ತಿರುವು ನೀಡಿ ಜನ ಅವನ್ನೆಲ್ಲ ಸದಾ ಗುನುಗುನಿಸುವಂತೆ ಮಾಡಿದ ಅಪೂರ್ವ ಗಾಯಕ. ಹಾಗೆ ನೋಡಿದರೆ ಗಾಯನಪ್ರೀತಿ ಮತ್ತು ಧ್ವನಿಸಂಪತ್ತನ್ನು ಹೊರತುಪಡಿಸಿದರೆ, ಅವರಲ್ಲಿ ಚಿತ್ರರಂಗದಲ್ಲಿ ಪ್ರಸಿದ್ಧರಾಗಿದ್ದ ಗಾಯಕರ ಅರ್ಹತೆಗಳಾವುವೂ ಇರಲಿಲ್ಲ. ಹರಿಕಥಾ ವಿದ್ವಾನ್ ಒಬ್ಬರ ಮಗನಾದ ಎಸ್ಪಿ ಅವರಿಗೆ ಶಾಸ್ತ್ರೀಯ ಸಂಗೀತದ ಪರಿಚಯವಿರಲಿಲ್ಲ. ಆದರೆ ಸ್ವರ ಸಂಪತ್ತಿನ ಈ ಪ್ರತಿಭೆಗೆ ಅದು ಕೊರತೆಯಾಗಲಿಲ್ಲ. ಅವರ ಸ್ವರಕ್ಕೆ ಭೋರ್ಗರೆದು ಧುಮ್ಮಿಕ್ಕುವ ಜಲಪಾತದ ಶಕ್ತಿ, ತಂಗಾಳಿಯ ಮಧುರ ಸ್ಪರ್ಶವಿತ್ತು. ಪದಗಳಿಗೆ ನೋವಿನಭಾವ ಲೇಪಿಸುವ, ಶೃಂಗಾರಭಾವವನ್ನು ಆವಾಹಿಸುವ, ತುಂಟಾಟದ ಲಾಲಿತ್ಯ ಅವರ ದನಿಯಲ್ಲಿ ಹಲವು ವೇಷತೊಟ್ಟು ಅಡಗಿತ್ತು.

ಹಿಂದಿ ಚಿತ್ರರಂಗದ ಮಹಾನ್ ಗಾಯಕ ಮಹಮ್ಮದ್ ರಫಿ ಅವರ ಹಾಡುಗಳನ್ನು ಅನುಕರಿಸಿ ಹಾಡುತ್ತಾ ಮುಂದೊಂದು ದಿನ ಚಿತ್ರಗೀತೆ ಹಾಡುವ ಹಂಬಲವಿದ್ದ ಎಸ್ಪಿಗೆ ಚಿತ್ರರಂಗದ ಯಾರೊಬ್ಬರ ಪರಿಚಯವೂ ಇರಲಿಲ್ಲ. ಆದರೆ ಅದೃಷ್ಟವಶಾತ್ ಚೆನ್ನೈನಲ್ಲಿದ್ದ ಚಿತ್ರಗೀತೆ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಅವರನ್ನು ಸಂಗೀತ ನಿರ್ದೇಶಕ ಎಸ್. ಕೋದಂಡಪಾಣಿ ಅವರು ಎಸ್ಪಿ ಅವರ ಪ್ರತಿಭೆಯನ್ನು ಗುರುತಿಸಿ ೧೯೬೬ರಲ್ಲಿ ತೆಲುಗುಚಿತ್ರ ಶ್ರೀ ಶ್ರೀ ಮರ್ಯಾದಾ ರಾಮಣ್ಣ ಚಿತ್ರದಲ್ಲಿ ಎಸ್ಪಿ ಅವರಿಗೆ ಹಾಡಲು ಅವಕಾಶ ನೀಡಿದರು. ಎವಿಎಂ ಸ್ಟುಡಿಯೋದಲ್ಲಿ ಹಾಡುತ್ತಿದ್ದ ಅವರನ್ನು ಗುರುತಿಸಿ ಎಂಜಿಆರ್ ಅವರು ತಮ್ಮ ಅಡಿಮೈಪೆಣ್ ಚಿತ್ರದಲ್ಲಿ ತಮಗಾಗಿ ಹಾಡಲು ಅವಕಾಶ ನೀಡಿದರು (೧೯೬೬ರಲ್ಲಿ 'ನಕ್ಕರೆ ಅದೇ ಸ್ವರ್ಗ' ಚಿತ್ರದ 'ಕನಸಿದೋ, ನನಸಿದೋ..' ಹಾಡಿನ ಮೂಲಕ ಅವರು ಕನ್ನಡಕ್ಕೂ ಬಂದರು, ಆದರೂ ಅವರ ಅದೃಷ್ಟದ ಬಾಗಿಲು ದೊಡ್ಡದಾಗಿ ತೆರೆಯಲಿಲ್ಲ.

ಎಸ್ಪಿ ಅವರು ಹಾಡಲು ಬಂದ ಸಮಯದಲ್ಲಿ ದಕ್ಷಿಣಭಾರತದ ಸಿನಿಮಾರಂಗದಲ್ಲಿ ಅಲುಗಾಡದ ಸಿಂಹಾಸನದ ಮೇಲೆ ಗಾಯಕ ಸಾಮ್ರಾಟರಿದ್ದರು. ತಮಿಳಿನಲ್ಲಿ ಟಿ.ಎಂ.ಎಸ್., ತೆಲುಗಿನಲ್ಲಿ ಘಂಟಸಾಲ, ಮಲಯಾಳಂನಲ್ಲಿ ಜೇಸುದಾಸ್ ಮತ್ತು ಕನ್ನಡದಲ್ಲಿ ಪಿ.ಬಿ.ಎಸ್. ಅವರದೇ ಪ್ರಾಬಲ್ಯವಿತ್ತು. ಆಯಾ ಭಾಷೆಯ ಪ್ರೇಕ್ಷಕರು ಈ ಗಾಯಕರ ಮೋಡಿಗೆ ಮಾರುಹೋಗಿದ್ದರು. ಎಸ್ಪಿ ಅವರು ಪೀಠಾಪುರಂ ನಾಗೇಶ್ವರರಾವ್ ಅವರಂತೆ ಅಂಚಿನ ಪಾತ್ರಗಳಿಗೆ ಅಥವಾ ನೇಪಥ್ಯ ಹಾಡುಗಳಿಗೆ ('*ಕಾಣದ ಊರಲಿ ನೀ ಕುಳಿತಿರುವೆ*': ಗಾಂಧಿನಗರ) ಸೀಮಿತವಾದರು.

ಆದರೆ ಎಪ್ಪತ್ತರ ದಶಕದಲ್ಲಿ ದಕ್ಷಿನ ಭಾರತದ ಚಿತ್ರರಂಗದಲ್ಲಿ ಸಂಭವಿಸಿದ ಪಲ್ಲಟಗಳಿಂದ ಎಸ್ಪಿ ಅವರು ಗಾಯನ ಕ್ಷೇತ್ರದ ಅಂಚಿನಿಂದ ಮಧ್ಯರಂಗಕ್ಕೆ ಜಿಗಿದರು. ಘಂಟಸಾಲರ ನಿಧನ, ಎಂಜಿಆರ್ ನಿವೃತ್ತಿ, ಶಿವಾಜಿ ಗಣೇಶನ್ ಪ್ರಾಬಲ್ಯ ಕುಗ್ಗಿ ಕಮಲಹಾಸನ್, ರಜನೀಕಾಂತ್‌ರವರಂಥ ಹೊಸ ನಟರು, ಇಳಯರಾಜರವರಂಥ ಕ್ರಿಯಾಶೀಲ ಸಂಗೀತ ನಿರ್ದೇಶಕರ ಆಗಮನವಾಯಿತು. ಬಾಲಚಂದರ್, ಮಹೇಂದರ್, ಬಾಲು ಮಹೇಂದ್ರ ಭಾರತೀರಾಜರವರಂಥ ಹೊಸಕಾಲದ ನಿರ್ದೇಶಕರ ಪ್ರಯೋಗಗಳು ಆರಂಭವಾದವು. ಕನ್ನಡ ಮತ್ತು ತೆಲುಗು ಚಿತ್ರರಂಗಗಳೂ ಇದೇ ಬದಲಾವಣೆಗಳನ್ನು ಹಾದು ಹೋದವು. ಇವು ಎಸ್ಪಿ ಅವರ ವೃತ್ತಿಬದುಕನ್ನು ಸಂಪೂರ್ಣ ಬದಲಿಸಿದವುಅವರದ್ದು ಚಾಲ್ತಿಯಲ್ಲಿದ್ದ ಎಲ್ಲ ಸಂಪ್ರದಾಯ ಮತ್ತು ಸಿದ್ಧಮಾದರಿಗಳನ್ನು ಉಲ್ಲಂಘಿಸಿದ ಜನರ ದನಿಯಾಯಿತು. 'ಶಂಕರಾಭರಣಂ' ಚಿತ್ರದ ಗಾಯನಕ್ಕಾಗಿ ಮಧ್ಯವಯಸ್ಸಿನಲ್ಲಿ ಶಾಸ್ತ್ರೀಯ ಸಂಗೀತ ಕಲಿತು ತಮ್ಮ ವಿರಾಟ್ ಪ್ರತಿಭೆಯಿಂದ ಅಚ್ಚರಿ ಮೂಡಿಸಿದರು. ಎಸ್ಪಿ, ಎಸ್ ಜಾನಕಿ ಮತ್ತು ಇಳಯರಾಜ ಅವರ ಸಂಗಮವು ಒಂದು ಸಾಂಸ್ಕೃತಿಕ ವಿದ್ಯಮಾನವಾಗಿ ಸಂಭವಿಸಿತು.

ಯಶಸ್ಸಿನ ಉತ್ತುಂಗ ತಲುಪಿದರೂ ಎಸ್ಪಿ ನಮ್ಮ ರಾಜ್ ಅವರಂತೆ ಸಜ್ಜನಿಕೆಯ ವ್ಯಕ್ತಿಯಾಗಿಯೇ ಉಳಿದರು. ತಮ್ಮ ವೃತ್ತಿಯ ಆರಂಭದ ದಿನಗಳಲ್ಲಿ ಕನ್ನಡ ಪ್ರೇಕ್ಷಕರು ತೋರಿದ ಪ್ರೀತಿಗೆ ಅನೇಕ ವೇದಿಕೆಗಳಲ್ಲಿ ಕೃತಜ್ಞತೆ ವ್ಯಕ್ತಪಡಿಸಿದ್ದಾರೆ. ತಮಗೆ ಹಾಡಲು ಅವಕಾಶ ನೀಡಿದ ಕೋದಂಡಪಾಣಿಯವರ ಹೆಸರನ್ನೇ ತಮ್ಮ ಸ್ಟುಡಿಯೋಗೆ ಇರಿಸಿದ, ತನ್ನ ನೆಚ್ಚಿನ ಗಾಯಕ ಜೇಸುದಾಸ್ ಅವರ ಪಾದಪೂಜೆ ಮಾಡಿ ಧನ್ಯತೆ ಮೆರೆದ, ಸಾರ್ವಜನಿಕ ಸಜ್ಜನಿಕೆಗೆ ಹೆಸರಾದ, ಆರು ಬಾರಿ ರಾಷ್ಟ್ರ ಪ್ರಶಸ್ತಿ ಮತ್ತು ಭಾರತ ಸರ್ಕಾರದಿಂದ ಜೀವಮಾನ ಸಾಧನೆಯ ಪ್ರಶಸ್ತಿ ಪಡೆದ ಎಸ್ಪಿ ಭಾರತೀಯ ಚಿತ್ರರಂಗ ಕಂಡ ಅಪೂರ್ವ ಕಲಾವಿದ.


ನಮ್ಮ ಎಸ್ಪಿ ಕಳೆದ ಸೆಪ್ಟೆಂಬರ್ ೨೫ರಂದು ಕೋವಿಡ್‌ಗೆ ಬಲಿಯಾದರು..(೭೪ ವರ್ಷ) ಗಾಯನ ಮಲ್ಲಿಗೆ ಉದುರಿದರೂ ಅದರ ಪರಿಮಳ ಅಮರ.

**-ಕೆ. ಪುಟ್ಟಸ್ವಾಮಿ**

## ಪುಸ್ತಕಾವಲೋಕನ

ಪು: ನಮ್ಮ ಅರಸು(ಒಡನಾಡಿಗಳು ಕಂಡಂತೆ) ಸಂ: **ಬಸವರಾಜು ಮೇಗಲಕೇರಿ** ಪ್ರ: ಪಲ್ಲವ **ಪ್ರಕಾಶನ**, ಚನ್ನಪಟ್ಟಣ (೮೮೮೦೦೮೭೨೩೫) ಪು: **೫೮೪ ಬೆ: ರೂ. ೬೦೦/**

### ಅರಸು ರಾಜಕಾರಣದ ಅಂತರಂಗ-ಬಹಿರಂಗ




ದೇವರಾಜ ಅರಸು ಆಧುನಿಕ ಕರ್ನಾಟಕ ಕಂಡ ಅನನ್ಯ ರಾಜಕಾರಣಿ ಮತ್ತು ಮುಖ್ಯಮಂತ್ರಿ. ಎಂಟು ವರ್ಷಗಳು ಅವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅವರು ರಾಜ್ಯ ರಾಜಕಾರಣದಲ್ಲಿ ತಂದ ಬದಲಾವಣೆಗಳು ಮತ್ತು ಆಡಳಿದಲ್ಲಿ ತಂದ ಕ್ರಾಂತಿಕಾರಿ ಸುಧಾರಣೆಗಳು ಐತಿಹಾಸಿಕವಾದವುಗಳು. ಇದು ರಾಜ್ಯದ ಸಾರ್ವಜನಿಕ ಜೀವನದಲ್ಲಿನ ಒಂದು ನಿರ್ಣಾಯಕ ಘಟ್ಟ. ಇಲ್ಲಿ ಆವರೆಗೆ ಸಹಜವೆಂಬಂತೆ ನಡೆದಿದ್ದ ಬಲಾಢ್ಯ ಜಾತಿ ಮತ್ತು ವರ್ಗಗಳ ಮೇಲಾಟ ಅಂತ್ಯಗೊಂಡು ಪ್ರಜಾಪ್ರಭುತ್ವದ ನಿಜಾರ್ಥದಲ್ಲಿ ಕಾಣತೊಡಗಿತು. ಇದನ್ನು ಅರಸರು ಮಾಡಿದ್ದು ೧೯೬೯ರಲ್ಲಿ ಆದ ಕಾಂಗ್ರೆಸ್ ವಿಭಜನೆಯ ಚಲನಶೀಲನತೆಯನ್ನು ಬಳಸಿಕೊಂಡು ರಾಜ್ಯದ ಪಕ್ಷ ರಾಜಕಾರಣದಲ್ಲಿ ಮನೆಮಾಡಿದ್ದ ಮೇಲ್ಜಾತಿಗಳ ಪ್ರಾಬಲ್ಯವನ್ನು ಕುಗ್ಗಿಸಿ ಅಧಿಕಾರಕ್ಕೆ ಬರುವ ಮೂಲಕ. ಸ್ವತಃ ಬಹು ಅಲ್ಪಸಂಖ್ಯಾತವಾದ ಜಾತಿಗೆ ಸೇರಿದ ಅರಸರು ನಿಜವಾದ ಮಣ್ಣಿನಮಗ; ಹೊಲ-ತೋಟಗಳಲ್ಲಿ ಮೈಬಗ್ಗಿಸಿ ದುಡಿಯುತ್ತಿದ್ದವರು; ವಿದ್ಯಾವಂತರಾದರೂ ಹಳ್ಳಿಯ ಹೈದನ ಖದರು ಉಳಿಸಿಕೊಂಡಿದ್ದವರು. ಹಾಗಾಗಿ ಅವರು ನಿಜ ಜನನಾಯಕನಾಗಿ ಮೂಡಲು ಸಾಧ್ಯವಾಗಿ ರಾಜ್ಯದ ದುಡಿಯುವ ಜನರ ನಾಡಿಮಿಡಿತವನ್ನು ಅರಿತು ಅವರ ಸಂಕಷ್ಟ-ನೋವುಗಳಿಗೆ ಪರಿಹಾರವಾಗಬಲ್ಲ ಆಡಳಿತ ಶೈಲಿಯನ್ನು ಮತ್ತು ಶಾಸನಗಳನ್ನು ಜಾರಿಗೆ ತಂದರು. 'ಉಳುವವನೇ ನೆಲದೊಡೆಯ' ಎಂಬ ಸಮಾಜವಾದಿಗಳ ಆಶಯವನ್ನು ಭೂಸುಧಾರಣೆಯ ರೂಪದಲ್ಲಿ ಜಾರಿಗೆ ತಂದು ನಿಜ ಸಮಾಜವಾದಿ ಎನಿಸಿಕೊಂಡರು. ಇದರ ಜೊತೆಗೇ, ಜೀತ ಪದ್ಧತಿ ನಿರ್ಮೂಲನ, ಋಣ ಪರಿಹಾರ ಕಾಯಿದೆ, ಮಲ ಹೊರುವ ಪದ್ಧತಿಯ ನಿಷೇಧ ಕಾಯಿದೆ ಮತ್ತು ಹಿಂದುಳಿದ ಜಾತಿಗಳಿಗೆ ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿ ಕಾಯಿದೆಗಳನ್ನು ಜಾರಿಗೆ ತಂದರು. ರಾಜ್ಯದ ಜನತೆಯ ಬಹುಪಾಲು ಭಾಗದಲ್ಲಿ ಹೊಸ ಸಂಚಲನ-ಚೈತನ್ಯ ಸೃಷ್ಟಿಯಾಯಿತು.

ಅರಸರು ಬರೀ ಇಂತಹ ತಕ್ಷಣದ ಮತ್ತು ನೇರ ಪರಿಣಾಗಳನ್ನು ಉಂಟು ಮಾಡುವ ಕಾರ್ಯಕ್ರಮಗಳನ್ನಷ್ಟೇ ಅಲ್ಲ, ಹೊಸ ನೀರಾವರಿ ಯೋಜನೆಗಳನ್ನೂ ನಾಡಿನ ಕೆರೆ-ಕಟ್ಟೆ-ನದಿ-ಕಾಡು ಮುಂತಾದ ಪ್ರಾಕೃತಿಕ ಸಂಪನ್ಮೂಲಗಳನ್ನು ರಕ್ಷಿಸುವ ಯೋಜನೆಗಳನ್ನೂ, ನಾಡಿನ ಭಾಷೆ-ಸಂಸ್ಕೃತಿಗಳ ಪೋಷಣೆಯ ನಿರ್ಧಾರಗಳನ್ನೂ ಕೈಗೊಂಡರು. ಈ ಸಂಬಂಧ ಅವರು ಕೈಗೊಂಡ ಉಲ್ಲೇಖಾರ್ಹ ನಿರ್ಧಾರವೆಂದರೆ ರಾಜ್ಯಕ್ಕೆ ಕರ್ನಾಟಕವೆಂದು ಪುರ್ನನಾಮಕರಣ ಮಾಡಬೇಕೆಂಬ ಕನ್ನಡಿಗರ ಬಹುದಿನಗಳ ಬೇಡಿಕೆಯನ್ನು ಈಡೇರಿಸಿ ಕನ್ನಡವನ್ನು ರಾಜ್ಯಮಟ್ಟದಲ್ಲಿ ಆಡಳಿತ ಭಾಷೆಯೆಂದು ಘೋಷಿಸಿದ್ದು.

ಅರಸರು ಈ ಎಲ್ಲ ಜನಪರ ಕಾರ್ಯಕ್ರಮಗಳನ್ನು ಮಾಡಲು ಸಾಧ್ಯವಾದದ್ದು, ಇವನ್ನು ಸುಯೋಜಿತವಾಗಿ ರೂಪಿಸಿ ಜಾರಿಗೆ ತರಬಲ್ಲ ಅಧಿಕಾರಿಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಮೂಲಕ ತೋರಿದ ಆಡಳಿತ ವ್ಯವಸ್ಥೆಯ ಒಳಹೊರಗನ್ನು ಸೂಕ್ಷ್ಮ ಮತ್ತು ನಿಕಟವಾಗಿ ಅವಲೋಕಿಸುವ ನಿಜವಾದ ನಾಯಕತ್ವ ಗುಣದಿಂದಾಗಿ. ಇದೆಲ್ಲದಕ್ಕೆ ಆಧಾರವಾದ ರಾಜಕೀಯ ಬಲ ಗಳಿಸಲು ಅವರು ಭೂಮಿಕೆ ಸಿದ್ಧಪಡಿಸುವಲ್ಲಿ ಅವರು ತೋರಿದ ಆತ್ಮವಿಶ್ವಾಸ, ಧೈರ್ಯ ಮತ್ತು ಮಾಡಿದ ದುಸ್ಸಾಹಸ ಮಹಾನಾಯಕನೊಬ್ಬನಿಗೆ ಮಾತ್ರ ಸಾಧ್ಯವಿರುವ ಸಂಕಲ್ಪಶಕ್ತಿಗೆ ಸಾಕ್ಷಿಯಂತಿವೆ. ತಮ್ಮನ್ನು ಅಧಿಕಾರಕ್ಕೆ ತಂದ ೧೯೭೨ರ ರಾಜ್ಯ ವಿಧಾನಸಭಾ ಚುನಾವಣೆಗಳ ಮುನ್ನ ಅವರು ಮಾಡಿದ ರಾಜ್ಯ ಪ್ರವಾಸದ ಸಮಯದಲ್ಲಿ ಚುನಾವಣೆಗೆ ಅಭ್ಯರ್ಥಿಗಳನ್ನು ಗುರುತಿಸಿದ ರೀತಿ ಇದಕ್ಕೆ ಸಾಕ್ಷಿ: ಬಹುಪಾಲು ಅಜ್ಞಾತರೂ, ಅನಾಮಿಕರೂ ಆಗಿದ್ದ ಜನರಲ್ಲಿ ಇವರು ಭವಿಷ್ಯದ ನಾಯಕರನ್ನು ಗುರುತಿಸಿದರು. ಅವರು ವೀರಪ್ಪ ಮೊಯ್ಲಿ ಆಗಿರಬಹುದು, ಮಲ್ಲಿಕಾರ್ಜುನ ಖರ್ಗೆ, ಧರ್ಮಸಿಂಗ್ ಆಗಿರಬಹುದು, ಮೊಹಿಯುದ್ದೀನ್, ಜಾಫರ್ ಶರೀಫ್, ಸುಬ್ಬಯ್ಯ ಶೆಟ್ಟಿ, ಡಿ.ಬಿ. ಚಂದ್ರೇಗೌಡ, ವಿ.ಎ. ವಾಝ್ ಆಗಿರಬಹುದು. ಇದನ್ನು ಮುಂದೆ ರಾಜಕೀಯ ವಿಶ್ಲೇಷಕರು ಸಾಮಾಜಿಕ ನ್ಯಾಯ ರಾಜಕಾರಣ ಎಂದರು. ಇದರ ಪರಿಣಾಮವೆಂದರೆ, ಈ ಚುನಾವಣೆಯಲ್ಲಿ ಅರಸರ ಇಂದಿರಾ ಕಾಂಗ್ರೆಸ್ ಪರವಾಗಿ ವಿಧಾನಸಭೆಗೆ ಆಯ್ಕೆಯಾದ ೧೬೫ ಜನ ಶಾಸಕರಲ್ಲಿ ೯೫ ಜನ ಹೀಗೆ ಅರಸರಿಂದ ಗುರುತಿಸಲ್ಪಟ್ಟ 'ಹಿಂದುಳಿದ' ಜಾತಿಗಳಿಗೆ ಸೇರಿದವರು. ರಾಜ್ಯ ಶಾಸನ ಸಭೆಯ ಇತಿಹಾಸದಲ್ಲಿ ಇದೊಂದು ಕ್ರಾಂತಿಯೇ ಆಗಿತ್ತು.

ಅರಸುಯುಗ ಎಂದು ಕರೆಯಬಹುದಾದ ಅವಧಿಯ ಈ ಎಲ್ಲ ವಿದ್ಯಮಾನಗಳನ್ನೂ ಬಸವರಾಜ ಮೇಗಲಕೇರಿಯವರು ತಮ್ಮ ಈ ಪುಸ್ತಕದಲ್ಲಿ ಇದಕ್ಕೆ ಸಂಬಂಧಪಟ್ಟ ಪ್ರಮುಖ ರಾಜಕೀಯ ನಾಯಕರು, ಅಧಿಕಾರಿಗಳು, ರಾಜಕೀಯ ವೀಕ್ಷಕರು, ಪತ್ರಕರ್ತರು, ಲೇಖಕ-ಬುದ್ಧಿಜೀವಿಗಳನ್ನು ಸ್ವತಃ ತಾವೇ ಮಾತಾಡಿಸಿ ಅವರದ್ದೇ ಭಾಷೆಯಲ್ಲಿ ದಾಖಲಿಸುವ ಮೂಲಕ ಸವಿವರವಾಗಿ ಚಿತ್ರಿಸಿ ನಮ್ಮ ಮುಂದೆ ಇಟ್ಟಿದ್ದಾರೆ.. ಹಾಗೇ ಅರಸರು ಎರಡನೇ ಬಾರಿ ಚುನಾವಣೆಗಳಲ್ಲಿ ಗೆದ್ದು, ಜೆಪಿ ಆಂದೋಲನ ಮತ್ತು ತುರ್ತು ಪರಿಸ್ಥಿತಿ ಘೋಷಣೆಯ ಪರಿಣಾಮವಾಗಿ ಸೋತು ಮೂಲೆ ಸೇರಿದ್ದ ಇಂದಿರಾ ಗಾಂಧಿಯವರನ್ನು ಚಿಕ್ಕಮಗಳೂರು ಉಪಚುನಾವಣೆಯಲ್ಲಿ ಗೆಲ್ಲಿಸಿ ಅವರಿಗೆ ರಾಜಕೀಯ ಪುರ್ನಜನ್ಮ ನೀಡಿದ ನಂತರ ಆರಂಭವಾದ ಅರಸರ ರಾಜಕೀಯ ಬದುಕಿನ ದುರಂತವನ್ನೂ ಬಸವರಾಜು ಇದೇ ದಾಖಲೆಗಳ ಮೂಲಕ ನಿರೂಪಿಸುವ ಪ್ರಯತ್ನ ಮಾಡಿದ್ದಾರೆ. ಈ ದಾಖಲೆಗಳ ಪ್ರಕಾರ ಅರಸು ಅವರ ದುರಂತಕ್ಕೆ ಮೂರು ಮುಖ್ಯ ಕಾರಣಗಳೆಂದರೆ, ಅವರು ತಾವು ಎಲ್ಲ ಜನಕಲ್ಯಾಣ ಕಾರ್ಯಕ್ರಮಗಳನ್ನೂ ಮಾಡಿದ್ದು ಇಂದಿರಾ ಗಾಂಧಿಯವರ ಹೆಸರಲ್ಲಿ ಎಂಬುದನ್ನು ಮರೆತು ಕೆಲವು ರಾಷ್ಟ್ರೀಯ ಮಾಧ್ಯಮಗಳ ಮೂಲಕ ತಾವು ಇಂದಿರಾಗಾಂಧಿಯವರನ್ನು ಮೀರಿಸಿ ರಾಷ್ಟ್ರ ನಾಯಕ(ಪ್ರಧಾನಿ) ಆಗಬಹುದೆಂಬ ಧಿಮಾಕು ಬೆಳೆಸಿಕೊಂಡದ್ದು, ತಮ್ಮ ಸಾಮಾಜಿಕ ನ್ಯಾಯ ರಾಜಕಾರಣಕ್ಕಾಗಿ ತಾವು ಗುರುತಿಸಿ ಬೆಳೆಸಿದ ನಾಯಕರ ಮನುಷ್ಯ ದೌರ್ಬಲ್ಯಗಳನ್ನು ಮರೆತದ್ದು ಮತ್ತು ಈ ರಾಜಕಾರಣಕ್ಕಾಗಿ ತಾವು ಅನಿವಾರ್ಯವೆಂಬಂತೆ ಪೋಷಿಸಿದ ಸಾಂಸ್ಥಿಕ ಭ್ರಷ್ಟಾಚಾರ ಮತ್ತು ರಾಜಕೀಯ ಗೂಂಡಾಗಿರಿ. ಇವು ಮೇಲ್ನೋಟಕ್ಕೆ ನಿಜ ಸಂಗತಿಗಳಾದರೂ, ಇವುಗಳ ಇನ್ನಷ್ಟು ಆಳದ ಪರಿಶೀಲನೆ ಅಗತ್ಯವಿದೆ.

ಮುಖ್ಯವಾಗಿ ಅರಸರ ದುರಂತದ ಕೇಂದ್ರದಲ್ಲಿರುವ, ಸಾಮಾಜಿಕ ನ್ಯಾಯ ರಾಜಕಾರಣವೆಂದರೆ ಕೇವಲ ಹಿಂದುಳಿದ ಜಾತಿಗಳ ಪ್ರತಿನಿಧಿಗಳ ಆಧಾರದ ಮೇಲೆ ನಡೆಸುವ ದಿನನಿತ್ಯದ ವ್ಯಾವಹಾರಿಕ ರಾಜಕಾರಣವೆ? ಅಥವಾ ಅದಕ್ಕಿಂತ ಹೆಚ್ಚಿನ ಮೌಲ್ಯಗಳ, ಹೊಸ ರಾಜಕೀಯ ಸಂಸ್ಕೃತಿಯನ್ನು ಬೆಳೆಸುವ ವ್ಯಾಪಕ ಉದ್ದೇಶಗಳ ತಾತ್ವಿಕ ರಾಜಕಾರಣವೆ? ಭಾರತದಲ್ಲಿನ ಅರಸೋತ್ತರ ಸಾಮಾಜಿಕ ನ್ಯಾಯ ರಾಜಕಾರಣದ ಅವಸ್ಥಾಂತರಗಳನ್ನು ಅಧ್ಯಯನ ಮಾಡಲೂ ಈ ಪ್ರಶ್ನೆಯ ವಿವರವಾದ ಚರ್ಚೆ ಅಗತ್ಯವಿದೆ. ಸದರಿ ಪುಸ್ತಕ ಅರಸು ಅವರ ಬಗ್ಗೆ ಈವರೆಗೆ ಬಂದಿರುವ ಹಲವಾರು ಪುಸ್ತಕಗಳಿಗಿಂತ ಅರಸು ಎಂಬ ವಿದ್ಯಮಾನವನ್ನು ನಿರೂಪಿಸುವಲ್ಲಿ ಹೆಚ್ಚು ಸಮಗ್ರವಾಗಿದ್ದರೂ ಈ ಮುಖ್ಯ ಕೊರತೆಯನ್ನು ನೀಗಿಸುವ ಪ್ರಯತ್ನವಿಲ್ಲದೆ-ಪತ್ರಕರ್ತ ಡಿ.ವಿ.ರಾಜಶೇಖರ್‌ರೊಡನೆಯ ಮಾತುಕತೆಯ ದಾಖಲೆಯಲ್ಲಿ ಅರಸು ಈ ಬಗ್ಗೆ ತಮ್ಮ ತಪ್ಪಿನ ಒಂದು ಸಣ್ಣ ಸೂಚನೆ ನೀಡುವರಾದರೂ-ಕೊಂಚ ನಿರಾಸೆಯನ್ನು ಹುಟ್ಟಿಸುತ್ತದೆ ಎಂದೇ ಹೇಳಬೇಕು. ಆದರೆ ಈ ಪುಸ್ತಕದ ನಿಜವಾದ ವೈಶಿಷ್ಟ್ಯವೆಂದರೆ, ರಾಜಕಾರಣಿ ಅರಸು ಜತೆಯಲ್ಲೇ ಕುಟುಂಬದ, ಹಳ್ಳಿಯ ಪರಿವಾರದ ವ್ಯಕ್ತಿಯಾಗಿ ಅರಸು ಅವರ ಆತ್ಮೀಯ ವ್ಯಕ್ತಿತ್ವವನ್ನು ನಿರೂಪಿಸುತ್ತಾ-ವಿಶೇಷವಾಗಿ ಮಗಳು ಭಾರತಿ ಅರಸು ಅವರ ನಿರೂಪಣೆ-ಅರಸು ಅವರ ದುರಂತವನ್ನು ಹೆಚ್ಚು ವೈಯಕ್ತಿಕಗೊಳಿಸಿ ಬಹುಕಾಲ ನಮ್ಮನ್ನು ಕಾಡುವಂತೆ ಮಾಡುತ್ತದೆ.

**-ಡಿ.ಎಸ್. ನಾಗಭೂಷಣ**

ಪು: **ಕೆಂಪು ಮುಡಿಯ ಹೆಣ್ಣು**(ಕಾದಂಬರಿ) ಮೂಲ: **ಒರ್ಹಾನ್ ಪಮುಕ್**
ಕನ್ನಡಕ್ಕೆ: **ಓ.ಎಲ್ ನಾಗಭೂಷಣ ಸ್ವಾಮಿ** ಪ್ರ: **ಅಭಿನವ,**
ಬೆಂಗಳೂರು(೯೪೪೮೮೦೪೯೦೫) ಪು: ೨೬೪ ಬೆಲೆ: **ರೂ. ೨೫೦/-**

### ಸಂಬಂಧಗಳ ಸಂಕೀರ್ಣ ಸ್ವರೂಪ ಕಟ್ಟಿಕೊಡುವ ಕತೆ




ಇದು ನೊಬೆಲ್ ಪುರಸ್ಕೃತ ಲೇಖಕ ಟರ್ಕಿಯ ಕಾದಂಬರಿಕಾರ ಒರ್ಹಾನ್ ಪಮುಕ್‌ನ The Redhaired women ಎಂಬ ಕಾದಂಬರಿಯ (೨೦೧೬) ಕನ್ನಾಡುನುವಾದ.

Life is stranger than fiction (ಬದುಕು ಕಥನಕ್ಕಿಂತ ಹೆಚ್ಚು ಆಗುಂತಕಮಯವಾದದ್ದು) ಅನ್ನುವ ಮಾತಿದೆ. ಈ ಕಾದಂಬರಿಯ ಘಟನೆಗಳು ಕೂಡ 'ಬದುಕು' ಎಂದು ನೋಡಿದಾಗ ಕತೆಗಿಂತ ರೋಚಕ ಅನ್ನಿಸದೇ ಇರದು. ಮೇಲ್ನೋಟಕ್ಕೆ ನಂಬಲು ಸಾಧ್ಯವಿಲ್ಲ ಅಥವಾ ಅಸಾಧ್ಯ ಎನ್ನುವ ಸಂಗತಿಗಳನ್ನು ಕತೆಯ ಹಂದರದೊಳಕ್ಕೆ ತಂದು ಅದನ್ನು ಒಪ್ಪಿಸಿ, ಓದುಗನನ್ನ ಒಪ್ಪಿಸುವ ತಂತ್ರ

ಹೊಸದೇನಲ್ಲ. ಆದರೆ, ಅದನ್ನು ಲೇಖಕ ಯಶಸ್ವಿಯಾಗಿ ಮಾಡಿದ್ದಾನೆ. ನಿಭಾಯಿಸುವುದು ಸಾಧ್ಯವಾಗಿದೆ. ಅನುವಾದ ಮಾಡಿರುವ ಓ.ಎಲ್. ನಾಗಭೂಷಣಸ್ವಾಮಿ ಅವರು ಕೂಡ ಕಾದಂಬರಿಯ ನಾಡಿ ಹಿಡಿಯುವಲ್ಲಿ ಯಶಸ್ವಿಯಾಗಿರುವುದರಿಂದ ಗೊಂದಲಕ್ಕೆ ಎಡೆಯಿಲ್ಲದಂತೆ ಓದಿಸಿಕೊಂಡು ಹೋಗುತ್ತದೆ. ಅಸಂಗತ ಸಂಗತಿಗಳು ಸೂತ್ರದ ಭಾಗ ಎನ್ನುವಂತೆ ಕಾಣಿಸಲಾಗಿದೆ. ಅಸಹಜ ಅನ್ನಿಸಿದರೂ ತರ್ಕದ ಬೆನ್ನೆಲುಬು ನೀಡಿರುವುದು ಸಹಜ ಅಂದುಕೊಳ್ಳಲು ಅನುವು ಮಾಡಿದೆ.

ಕಾದಂಬರಿಯ ಕ್ಯಾನ್ವಾಸ್‌ನ ಭಿತ್ತಿಯ ಹಿನ್ನೆಲೆಯಲ್ಲಿ ಪಶ್ಚಿಮದ ಗ್ರೀಕ್ನ ಈಡಿಪಸ್ ಹಾಗೂ ಪರ್ಷಿಯಾದ ಸೋಹ್ರಾಬ್ ರುಸ್ತುಂ ಕತೆಗಳಿವೆ. ಒಂದು ಪಿತೃಹತ್ಯೆಯ ಕತೆಯಾದರೆ, ಮತ್ತೊಂದು ಪುತ್ರಹತ್ಯೆಯ ಕತೆ. ಈ ಎರಡೂ ಕತೆಗಳು ಕಾದಂಬರಿಯುದ್ದಕ್ಕೂ ಮತ್ತೆ ಮತ್ತೆ ಬರುತ್ತವೆ. 'ಮುಗಿಸಿ'ಯೇ ಆರಂಭ ಆಗುವ ಹಂಬಲ-ಒತ್ತಡ ಎದುರಿಸುವ ಪಾತ್ರಗಳು. ಅದಕ್ಕೆ ಅನುಗುಣವಾದ ಕತೆ.

ಮೂರು ಭಾಗಗಳಲ್ಲಿ ಇರುವ ಕಾದಂಬರಿಯು ಕಟ್ಟಿಕೊಡುವ ಲೋಕ ಇತ್ತೀಚಿನದು-ಸಮಕಾಲೀನವಾದದ್ದು. ಕಳೆದ ಶತಮಾನದ ೮೦ ರ ದಶಕದ್ದು. ಇಸ್ತಾಂಬುಲ್ ನಗರ ಹಾಗೂ ಸುತ್ತಲಿನ ಪ್ರದೇಶದಲ್ಲಿ ನಡೆಯುವಂತಹದ್ದು. ವಸ್ತುವಿನ ಬೆಳವಣಿಗೆಯ ದೃಷ್ಟಿಯಿಂದ ಸ್ವಲ್ಪ ಹಿಂದೆ-ಮುಂದೆ ಸೇರಿಕೊಳ್ಳುತ್ತದೆ. ಆಧುನಿಕತೆ ಹಾಗೂ ಪರಂಪರೆಗಳನ್ನು ಮುಖಾಮುಖಿಯಾಗಿಸುವ ಈ ಕಾದಂಬರಿಯು ತೆರೆದಿಡುವ ವಿಸ್ತಾರ ಬೆರಗುಗೊಳಿಸುತ್ತದೆ. ಮೊದಲ ಎರಡು ಭಾಗಗಳು ಕತೆಯ ನಾಯಕನ ನಿರೂಪಣೆಯಲ್ಲಿದೆ. 'ಬಾವಿ' ತೋಡುವ ಪ್ರಕ್ರಿಯೆಯಿಂದ ಆರಂಭವಾಗುವ ಕಾದಂಬರಿಯು ಬೆಳೆಯುತ್ತ ಪತ್ತೇದಾರಿ ಗುಣ ಪಡೆದುಕೊಳ್ಳುತ್ತದೆ. ಕುತೂಹಲದ ಮೊಟ್ಟೆ ಒಡೆಯದ ಹಾಗೆ ನೋಡಿಕೊಳ್ಳುತ್ತದೆ. ಪ್ರತಿ ವಿವರವೂ ಕತೆಯ ಬೆಳವಣಿಗೆಗೆ ಪೂರಕವಾಗಿ ಸಹಕರಿಸುವಂತೆ ಕತೆಯನ್ನು ಹೆಣೆಯಲಾಗಿದೆ. ಗತವನ್ನು ಹುಡುಕುವ ನಾಯಕನ ಆಸೆ-ಕನಸುಗಳು 'ಮಗ'ನಲ್ಲಿ ಬೆಳೆಯುವುದು-ಉಳಿಯುವುದು ನಿನ್ನೆ-ನಾಳೆಗಳ ನಡುವಿನ ಇಂದನ್ನು ಚಿತ್ರಿಸುತ್ತದೆ.


ಮೂರನೆಯ ಭಾಗವನ್ನು 'ಕೆಂಪುಮುಡಿಯ ಹೆಣ್ಣು' ನಿರೂಪಿಸುತ್ತಾಳೆ. ಮೊದಲೆರಡು ಭಾಗದ ಕತೆಯನ್ನು ಮುಂದುವರೆಸುವುದರ ಜೊತೆಗೆ ವಿಭಿನ್ನ ಆಯಾಮ ಒದಗಿಸುತ್ತಾಳೆ. ಆಯ್ಕೆಯಿಂದ ಕೆಂಪು ಮುಡಿಯವಳಾದ ನಾಯಕಿ ಬದುಕು ಪುರಾಣಗಳು ಒಂದಾಗುವದನ್ನು ಕಂಡವಳು. ಅದನ್ನು ಒಂದಾಗಿಸಿದವಳು.

ಈ ಕಾದಂಬರಿಯ ಕೇಂದ್ರ ಪಾತ್ರಗಳೆಂದರೆ ಬಾವಿ ಹಾಗೂ ಕೆಂಪು ಮುಡಿಯ ಹೆಣ್ಣು. ಇಡೀ ಕಾದಂಬರಿಯು ಈ ಎರಡರ ಸುತ್ತಲೇ ಗಿರಕಿ ಹೊಡೆಯುತ್ತದೆ. ಹಲವು ಓದುಗಳ ಸಾಧ್ಯತೆಯನ್ನು ತೆರೆದಿಡುತ್ತದೆ. ನಾಟಕೀಯ ಘಟನೆಗಳು ಅದನ್ನು ಒಂದಕ್ಕೊಂದು ತಳುಕು ಹಾಕುತ್ತ ಹೆಣೆಯುವ ಕ್ರಮ ಚೆನ್ನಾಗಿದೆ. ತಲೆಮಾರುಗಳ ನಡುವಿನ ಮುಖಾಮುಖಿ-ಸಂಘರ್ಷಗಳು ಅರಿಯದೇ ನಡೆಯುವಂತಹವು ಮಾತ್ರವಲ್ಲ. ಅರಿವಿದ್ದರೂ ತಪ್ಪಿಸಲಾಗದಂತಹವು. ಪುರಾಣ-ಕಾವ್ಯ-ಚರಿತ್ರೆಗಳು ಒಂದರೊಳಗೊಂದು ಬೆರೆತು ತಮ್ಮ ಹದವಾದ ಮಿಶ್ರಣದಿಂದ ಕಾದಂಬರಿಯ ಓದನ್ನು ಸಹ್ಯವಾಗಿಸಿವೆ. ಪಾತ್ರಗಳ ಹೆಸರು ಮತ್ತು ಸ್ಥಳಗಳ ವಿವರಗಳನ್ನು ಹೊರತು ಪಡಿಸಿದರೆ ಇಡೀ ಕಾದಂಬರಿಯು ಕನ್ನಡದ್ದೇ ಅನ್ನಿಸುವ ಹಾಗಿದೆ. ಬಾವಿ ತೋಡುವ ವಿವರಗಳು ಹಾಗೂ ಅದರ ಪಾರಂಪರಿಕ ಜ್ಞಾನದ ವಿವರಗಳು 'ದೇಸಿ' ವಿಧಾನದ ಹಾಗಿವೆ. ಕಾದಂಬರಿಯ ಕೊನೆಯಲ್ಲಿ ಅನುಬಂಧದಲ್ಲಿ ನೀಡಲಾಗಿರುವ ವಿವರಗಳು ಕತೆಯಲ್ಲಿ ಬರುವ ಸಂಗತಿ-ವಿಷಯ-ಪುಸ್ತಕಗಳ ಬಗ್ಗೆ ಅರಿಯಲು ಅನುವು ಮಾಡುತ್ತದೆ.

**-ದೇವು ಪತ್ತಾರ**

ಪು: **ಹಾರುವ ಹಕ್ಕಿ ಮತ್ತು ಇರುವೆ** (ಕತೆಗಳು) ಲೇ: **ಮಿರ್ಜಾ ಬಷೀರ್** ಪ್ರ: **ಲಡಾಯಿ ಪ್ರಕಾಶನ**, ಗದಗ(೯೪೮೦೨೮೬೮೪೪) ಪು: ೧೨೮ ಬೆ: ರೂ. ೧೦೦/-

## ಕಾಲದ ತಲ್ಲಣಗಳಿಗೆ ಕನ್ನಡಿ ಹಿಡಿಯುವ ಕಥೆಗಳು




**ಈ** ಸಂಕಲನದಲ್ಲಿ ಒಟ್ಟು ಹನ್ನೊಂದು ಕಥೆಗಳಿದ್ದು, ಗ್ರಾಮೀಣ ಪ್ರದೇಶದ ಹಿಂದೂ ಮುಸ್ಲಿಂ ಸಹಬಾಳ್ವೆ ಮತ್ತು ಅವರ ಬದುಕಿನ ರೀತಿನೀತಿಗಳು ಈ ಕಥೆಗಳಲ್ಲಿ ಅನಾವರಣಗೊಂಡಿವೆ. ಮೊದಲ ಕಥೆ 'ಶರ್ಪಜ್ಜಿಯ ವಿಲ್ಲು', ಅತ್ತೆಯನ್ನು ವಿನಾಕಾರಣ ದ್ವೇಷಿಸುವ ಸೊಸೆ, ಅದೇ ಕಾರಣಕ್ಕಾಗಿ ಅತ್ತೆ ಸಾಯುವಂತಾಗಿ, ಅವಳು ಬರೆದಿಟ್ಟ ಪತ್ರ ಓದಿ ಪಶ್ಚಾತ್ತಾಪ ಪಡುವುದನ್ನು ಹೇಳುತ್ತದೆ. ಅತ್ತೆಯನ್ನು ದ್ವೇಷಿಸುವುದಕ್ಕೆ, ಆಮೇಲೆ ಪಶ್ಚಾತ್ತಾಪ ಪಡುವುದಕ್ಕೆ ಸಮರ್ಥನೆ ಕಥೆಯಲ್ಲಿ ಸಿಗುವುದಿಲ್ಲ. ಹಳ್ಳಿಯ ಜನ ಜಾತಿಭೇದವಿಲ್ಲದೆ ಪರಸ್ಪರರ ನೋವು ನಲಿವುಗಳಿಗೆ ಸ್ಪಂದಿಸುವುದು ಮುಖ್ಯವೆನಿಸುತ್ತದೆ. ಮುಸ್ಲಿಮರಲ್ಲೇ ಅಲ್ಪಸಂಖ್ಯಾತರಾದ ಪಿಂಜಾರ್ ಪಂಗಡದವರು ಮುಸ್ಲಿಂ ಮುಖ್ಯವಾಹಿನಿಯೊಂದಿಗೆ ಒಂದಾಗಲು, ಪರಕೀಯ ಪ್ರಜ್ಞೆಯಿಂದ ಹೊರಬರಲು ಹಾತೊರೆಯುವ ಚಿತ್ರಣ 'ಶರ್ಪಜ್ಜಿಯ ವಿಲ್ಲು', 'ಮುಂಜಿ', 'ಜುಗುಣಮ್ಮನ ಜಗಿತ' ಕಥೆಗಳಲ್ಲಿವೆ.

'ಬಟ್ಟೆಮೆತ್ತಿಕೊಂಡ ಊರಿನಲ್ಲಿ' ಒಂದು ಫ್ಯಾಂಟಸಿ ನಿರೂಪಣೆ. ಹಲವಾರು ಹಳ್ಳಿಗಳನ್ನು ನುಂಗಿ 'ಅಭಿವೃದ್ಧಿ' ಹೊಂದಿದ ಆ ನಗರದಲ್ಲಿ ಇದ್ದಕ್ಕಿದ್ದಂತೆ ಒಂದೇ ಸಮನೆ ಜನರ ಮೇಲೆ ಬಟ್ಟೆಗಳು ಮೆತ್ತಿಕೊಂಡು ಬಟ್ಟೆ ತೆಗೆಯಲಾರದೇ ಮಲಮೂತ್ರ ಎಲ್ಲಾ ಅಲ್ಲೇ ಮಾಡಿಕೊಂಡು ಒದ್ದಾಡುವ ಪರಿಸ್ಥಿತಿ ಬರುತ್ತದೆ. ಇದಕ್ಕೆ ಪರಿಹಾರವನ್ನೂ ಇನ್ನೊಂದು ವಿನಾಶದ ಮೂಲಕವೇ ಅಂದರೆ ಎಲ್ಲದಕ್ಕೂ ಬೆಂಕಿ ಹಚ್ಚುವುದರ ಮೂಲಕ ಕೊಡುತ್ತಾರೆ. ನಂತರ ಮಳೆ ಬಂದು ಮಳೆಯಲ್ಲಿ ನಗರವಾಸಿಗಳು ಕುಣಿಯತೊಡಗಿದರೆಂದು ಕಥೆ ಮುಕ್ತಾಯವಾಗುತ್ತದೆ. ಹಿಂದಿರುಗಿ ಹೋಗಲಾರದ ಈ 'ಅಭಿವೃದ್ಧಿ' ಹೊಂದಿದ ಜಗತ್ತನ್ನು ಈ ಅತಿಕಾಲ್ಪನಿಕ ಕಥೆ ಮಾರ್ಮಿಕವಾಗಿ ಚಿತ್ರಿಸುತ್ತದೆ.

ಸುಶಿಕ್ಷಿತ ಸರ್ಕಾರಿ ಅಧಿಕಾರಿಗೂ ತನ್ನ ಮುಸ್ಲಿಂ ಅಸ್ಮಿತೆಯನ್ನು ಕಂಡುಕೊಳ್ಳುವುದು ಎಷ್ಟು ಮುಖ್ಯವಾಗುತ್ತದೆ ಎಂಬುದರ ನಿರೂಪಣೆ 'ಸಲಾಮಲೈಕುಂ' ಕಥೆಯಲ್ಲಿದೆ. ಇದು ಇನ್ನೂ ಒಳ್ಳೆಯ ಕಥೆಯಾಗಬಹುದಾಗಿದ್ದು ನಿರೂಪಕರ ಪ್ರವೇಶದಿಂದಾಗಿ ಕಥೆ ಮೊಟಕುಗೊಂಡಿದೆ. 'ಜುಗುಣಮ್ಮನ ಜಗಿತ' ಕಥೆಯ ಜುಗುಣಮ್ಮನ ಬಡತನದ, ಅವಮಾನಿತ ಬದುಕಿನಿಂದ ಯಶಸ್ಸಿನ ಜಗಿತ ಸಾಧಿಸುವ ದಾರಿ ಮಾತ್ರ ಮನಕಲಕುವಂತಹದು. 'ಕಡಲಿನ ನೀರು ಸಿಹಿಯಿತ್ತು ಮೊದಲು..' ಮತ್ತು 'ಸ್ವರೂಪ' ಕಥೆಯನ್ನು ಹೊರತುಪಡಿಸಿ ಈ ಸಂಕಲನದ ಎಲ್ಲಾ ಕಥೆಗಳೂ ಕಥೆಗಾರರ ಸದಾಶಯವನ್ನು ಬಿಂಬಿಸುವ ಸುಖಾಂತ್ಯದ ಕಥೆಗಳೇ.

ಪಶುವೈದ್ಯರಾದ ಲೇಖಕರು 'ಹಾರುವ ಹಕ್ಕಿ ಮತ್ತು ಇರುವೆ ಸಾಲು' ಕಥೆಯಲ್ಲಿ ಹಸು ಈಯುವಾಗ ಹಸು ಮತ್ತು ಹಸುವನ್ನು ಸಾಕಿದವರು ಅನುಭವಿಸುವ ನೋವು-ತಳಮಳವನ್ನು ನಿರೂಪಿಸಿದ್ದಾರೆ. ಆಗ ಹಾರುತ್ತಿರುವ ಹಕ್ಕಿ, ಸಾಲಿನಲ್ಲಿ ಸಾಗುತ್ತಿದ್ದ ಇರುವೆ. ತೆಂಗಿನಮರ, ಓತಿಕ್ಯಾತ ಇವೆಲ್ಲಾ ಹಸುಕರುಗಳ ಕ್ಷೇಮಕ್ಕೆ ಹಾರೈಸುವುದು, ಪಶುಪಕ್ಷಿಗಳೊಂದಿಗಿನ ಹಳ್ಳಿಗರ ಬದುಕನ್ನು ತೆರೆದಿಡುತ್ತದೆ.


'ಒಂದು ನಾಟಿ ಸವಾಲು' ಕಥೆ ಇಂಗ್ಲಿಷ್ ಭಾಷೆಯ ವ್ಯಾಮೋಹವನ್ನು ಬಂಡವಾಳಮಾಡಿಕೊಂಡು ಭ್ರಷ್ಟ ಅಧಿಕಾರಿಗಳನ್ನು ಓಲೈಸಿ ಖಾಸಗಿ ವಿದ್ಯಾಸಂಸ್ಥೆಯ ವಿದ್ಯಾರ್ಥಿಯೊಬ್ಬ ಇಡೀ ವ್ಯವಸ್ಥೆಗೇ ಸವಾಲು ಹಾಕುವಂತಹ "ಹೂಸು ಎಂಬುದಕ್ಕೆ ಇಂಗ್ಲಿಷಿನಲ್ಲಿ ಏನು" ಎಂದು ತಪಾಸಣೆಗೆ ಬಂದ ಅಧಿಕಾರಿಗಳೆದುರು ಪ್ರಶ್ನೆ ಕೇಳುವುದು ಮಾತ್ರ ಇಡೀ ವ್ಯವಸ್ಥೆಯ ಕೊಳಕನ್ನೇ ಬಿಂಬಿಸುತ್ತದೆ.

ಈ ಸಂಕಲನದಲ್ಲಿ ಸದ್ಯದ ನಮ್ಮ ಪರಿಸ್ಥಿತಿಯಲ್ಲಿನ ಮುಖ್ಯ ವಿಷಯಗಳನ್ನೇ ಕಥೆಯಾಗಿಸಿರುವುದರಿಂದ ತುಂಬಾ ಪ್ರಸ್ತುತವಾದ ಕಥೆಗಳೆನಿಸುತ್ತವೆ. ಈ ಕಥೆಗಳಲ್ಲಿ ಗ್ರಾಮೀಣ ಭಾಗದ ಪ್ರಾದೇಶಿಕ ಭಾಷೆಯ ಸೊಗಡನ್ನು ಕಾಣಬಹುದು. ಆದರೆ ಕೆಲವು ಕಥೆಗಳಲ್ಲಿ ತಿರುಳೇ ಪ್ರಧಾನವಾಗಿ ಕಥೆಯನ್ನು ಕಟ್ಟುವ ಆವರಣ ದುರ್ಬಲವಾಗಿದೆ ಎಂದೆನಿಸುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಈ ಕಥೆಗಳು ನಮ್ಮ ಕಾಲದ ತಲ್ಲಣಗಳಿಗೆ ಕನ್ನಡಿ ಹಿಡಿಯುವಂತಿವೆ.

**-ಪದ್ಮಾಕ್ಷಿ ಕೆ.**

ಪು : **ಪದ ಕುಸಿಯೆ ನೆಲವಿಲ್ಲ** ಲೇ : **ಡಿ. ಉಮಾಪತಿ** ಪ್ರ : **ಅಹರ್ನಿಶಿ ಪ್ರಕಾಶನ**, ಶಿವಮೊಗ್ಗ (೯೪೪೯೧೭೪೬೬೨), ಪು : ೨೪೪ ಬೆ : ೨೪೦/-

## ಪ್ರಭುತ್ವ - ಸಮುದಾಯಗಳೆರಡರ ಕೊನೆಯಿಲ್ಲದ ಸಂಘರ್ಷ




**ಆ**ತ್ಮಚರಿತ್ರೆಗಳು ಸಾಮಾನ್ಯವಾಗಿ ಲೇಖಕರ ಕೊನೆಯ ಹಂತದ ಬರವಣಿಗೆಯಾಗಿ ಬಂದಿರುವುದನ್ನು ನೋಡಿದ್ದೇವೆ. ಅಪರೂಪಕ್ಕೆ ಕೆಲವರು ಆತ್ಮಕಥೆಯ ಮೂಲಕವೇ ಲೇಖಕರಾಗಿ ಹೊರಹೊಮ್ಮಿದ ಉದಾಹರಣೆಗಳೂ ಇವೆ. ಇಂತಹ ಕೃತಿಗಳು ತಮ್ಮ ಕಥೆಯನ್ನು ಮಾತ್ರ ಹೇಳದೇ ಬೇರೆ ಏನನ್ನೋ ಹೇಳುವ ತುಡಿತದಲ್ಲಿರುತ್ತವೆ. ಓದುಗರಿಗೂ ಭಿನ್ನವಾದ ಅನುಭವವನ್ನು ನೀಡುತ್ತವೆ. ದೆಹಲಿಯ ಯುವಪತ್ರಕರ್ತ ನಿಯಾಜ್ ಫಾರೂಕಿ ಅವರ "An Ordinary Man's Guide To Radicalism - Growing up Muslim In India" ಕೃತಿಯನ್ನು ಡಿ. ಉಮಾಪತಿಯವರು "ಪದ ಕುಸಿಯೆ ನೆಲವಿಲ್ಲ" ಎಂಬ ಹೆಸರಿನಲ್ಲಿ ಕನ್ನಡಕ್ಕೆ ತಂದಿದ್ದು, ಆತ್ಮಕಥೆಗಿಂತ ಹೆಚ್ಚಾಗಿ ಮುಸ್ಲಿಂ ಸಮುದಾಯದ ಒಳಹೊರಗನ್ನು ಸಮರ್ಥವಾಗಿ ಚಿತ್ರಿಸುತ್ತದೆ.

ಬಿಹಾರಿನ ಗೋಪಾಲಗಂಜ್ ಜಿಲ್ಲೆಯ ಇಂಥರ್ವಾನ್ ಬೈರಾಮ್ ಎಂಬ

ಗ್ರಾಮದ ಬಾಲಕ ನಿಯಾಜ್, ಆಧುನಿಕ ಶಿಕ್ಷಣ ಮತ್ತು ಉನ್ನತ ಹುದ್ದೆಯ ಆಸೆಯಿಂದ ದೆಹಲಿಯ ಜಾಮಿಯಾ ಮಿಲಿಯಾ ವಿ.ವಿ. ಸೇರುವ ಅನುಭವಗಳೇ ಇಲ್ಲಿಯ ಕಥಾವಸ್ತು. ೨೦೦೮ರಲ್ಲಿ ದೆಹಲಿಯ ಬಟ್ಲಾಹೌಸ್ ಎನ್‌ಕೌಂಟರ್‌ನಲ್ಲಿ ಹತ್ಯೆಯಾದ ಇಬ್ಬರುನಿರಪರಾಧಿ ಯುವಕರನ್ನು (ಒಬ್ಬ ಪೊಲೀಸ್ ಇನ್ಸ್‌ಪೆಕ್ಟರ್ ಕೂಡ) ಪೊಲೀಸರು ತಿಂಗಳ ಹಿಂದೆ ೩೦ ಜನರ ಮಾರಣ ಹೋಮಕ್ಕೆ ಕಾರಣವಾದ ಸರಣಿ ಬಾಂಬ್ ಸ್ಫೋಟದ ರೂವಾರಿಗಳೆಂದು ಆರೋಪಿಸಿದ್ದು, ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗುತ್ತದೆ. ಎನ್‌ಕೌಂಟರ್ ಆಸುಪಾಸಿನಲ್ಲೇ ಮುಸ್ಲಿಂ ಘೆಟ್ಟೋ ಒಂದರಲ್ಲಿ, ಹತ್ಯೆಯಾದ ಯುವಕರಂತೆಯೇ ಕುಟುಂಬದಿಂದ ದೂರವಾಗಿ, ಏಕಾಂಗಿಯಾಗಿ ಬದುಕುತಿದ್ದ ನಿಯಾಜ್‌ಗೆ ಎಂತಹ ಆಘಾತವಾಗಿತ್ತೆಂದರೆ ಅದು ಅವನ ಬದುಕಿನ ದಿಕ್ಕನ್ನೇ ಬದಲಿಸಿತು. ಈ ಒಂದು ಘಟನೆಯ ಕೇಂದ್ರಬಿಂದುವಿನಿಂದ ತರಂಗವಾಗಿ ಹರಡುವ ಪ್ರಭುತ್ವ ಮತ್ತು ಸಮುದಾಯದ ಸಂಘರ್ಷವನ್ನು ಲೇಖಕರು ಅನುಭವಕ್ಕೆ ನಿಷ್ಠವಾಗಿ ವಿಶ್ಲೇಷಿಸಿದ್ದಾರೆ. ಸ್ನೇಹಿತರೊಂದಿಗಿನ ನವಿರು ಹಾಸ್ಯದ ಚರ್ಚೆಗಳಲ್ಲಿ ಮೂಡುವ ರಾಜಕೀಯ, ಸಾಮಾಜಿಕ, ಧಾರ್ಮಿಕ ವಿಚಾರಗಳು ಮುಸ್ಲಿಂ ವಿದ್ಯಾರ್ಥಿ ಬದುಕಿನ ಕನ್ನಡಿಯಂತಿದೆ. ಜಾಮಿಯಾ ವಿ.ವಿ. ವಿದ್ಯಾರ್ಥಿಗಳಲ್ಲಿ ಭಯೋತ್ಪಾದಕರಿದ್ದಾರೆಂಬ ಮಾಧ್ಯಮಗಳ ಆರೋಪದಿಂದ ಆತಂಕಕ್ಕೀಡಾದಾಗ "ನೀವು ಯಾವ ದೇಶಭಕ್ತರಿಗೂ ಕಡಿಮೆಯಿಲ್ಲ" ಎಂದು ಘೋಷಿಸಿ, ಶಾಂತಿಯಾತ್ರೆಯ ಮೂಲಕ ವಿದ್ಯಾರ್ಥಿಗಳ ಆತ್ಮಸ್ಥೈರ್ಯಕ್ಕೆ ಕಾರಣರಾದ ಉಪಕುಲಪತಿ ಮುಷಿರುಲ್ ಹಸನ್, ಇಂದಿನ ಮುಸ್ಲಿಂ ಯುವಜನಾಂಗಕ್ಕೆ ಅಗತ್ಯವಿರುವ ಮಾದರಿ ನಾಯಕರು.

ಯುವಕರು ತಮ್ಮ ಜಾತಿ ಧರ್ಮಗಳ ಸಂಕುಚಿತ ಕೋಶದಿಂದ ಹೊರಬಂದಾಗ ಸತ್ಯವನ್ನು ಸಮಗ್ರವಾಗಿ ಗ್ರಹಿಸಲು ಹೇಗೆಸಾಧ್ಯ ಎಂಬುದಕ್ಕೆ 'ನಾವು ಮತ್ತು ಅವರ ಕಥಾನಕಗಳು' ಅಧ್ಯಾಯ ಉತ್ತಮ ಉದಾಹರಣೆ. ಅನ್ಯ ಸಮುದಾಯಗಳೊಂದಿಗಿನ ಪರಸ್ಪರ ಸಂಬಂಧಗಳನ್ನು ಸಂದರ್ಶನಗಳ ಮೂಲಕ ಖುದ್ದಾಗಿ ಸಂಗ್ರಹಿಸಿದ್ದು ಆಪ್ತವಾಗಿದೆ. ಪಾಕಿಸ್ತಾನದಿಂದ ವಲಸೆ ಬಂದು ದೆಹಲಿಯ ಹೊರವಲಯದಲ್ಲಿ ನೆಲೆಸಿರುವ ಹಿಂದುಗಳು ತಾವು ಹುಟ್ಟಿ ಬೆಳೆದ ನೆಲವನ್ನು ಅಕ್ಕರೆಯಿಂದ ನೆನೆಯುತ್ತಿರುವುದು, ಅಫಘಾನಿಸ್ತಾನದಿಂದ ವಲಸೆ ಬಂದಿರುವ ಕ್ರೈಸ್ತರು ತಮಗೆ ತೊಂದರೆ ಕೊಟ್ಟ ಅಫಘನ್ನರಿಗೇ ಭಾಷಾಂತರಕಾರರಾಗಿ ಹೊಟ್ಟೆ ಹೊರೆಯುತ್ತಿರುವುದು ಮೊದಲಾದ ಸಂಗತಿಗಳು ಮಾನವೀಯ ಸಂಬಂಧಗಳ ನಾನಾಮುಖಗಳನ್ನು ಪರಿಚಯಿಸುತ್ತವೆ.


ಹಿಂಸೆಯನ್ನು ಒಪ್ಪುವ, ಪ್ರಚೋದಿಸುವ ವ್ಯಕ್ತಿಗಳಿಗೆ ಜಾಮಿಯಾ ನಗರ ಆಶ್ರಯ ಕೊಟ್ಟಿತ್ತೇ ಎಂಬ ಪ್ರಶ್ನೆಗೆ 'ತತ್ವರಹಿತರು, ನೀತಿಬಾಹಿರರು ಕೆಲವರು ಇದ್ದಿರಬಹುದು, ಆದರೆ ತನ್ನದೇ ದೇಶದ ಮೇಲೆ ಬಾಂಬ್ ಹಾಕುವವರು ಖಂಡಿತಾ ಇಲ್ಲ' ಎಂಬುದು ಲೇಖಕರ ಅಭಿಪ್ರಾಯ. ಆದರೆ ಬಟ್ಲಾಹೌಸ್ ಎನ್‌ಕೌಂಟರಗೆ ಕಾರಣವಾದ ದೆಹಲಿಯ ಬಾಂಬ್‌ಸ್ಫೋಟ ಮತ್ತು ೩೦ ಜನರ ಸಾವಿನಬಗ್ಗೆ, ಅದಕ್ಕೆ ಕಾರಣರಾದವರ ಬಗ್ಗೆ ಕೃತಿ, ಅದು ಪ್ರಭುತ್ವದ ಸಮಸ್ಯೆ ಎಂಬಂತೆ ಮೌನವಹಿಸತ್ತದೆ.

–ಎನ್.ಎಂ. ಕುಲಕರ್ಣಿ

**–ಎನ್. ಎಂ. ಕುಲಕರ್ಣಿ**

ಪು: ಗದ್ಯಗಂಧಿ (ಕವಿತೆಗಳು) ಲೇ: ಎಂ.ಆರ್. ಕಮಲ ಪ್ರ: ಕಥನ ಪ್ರಕಾಶನ, ಬೆಂಗಳೂರು (೯೪೪೪೮೩೩೪೬೨೨) ಪು: ೭೨ ಬೆ: ರೂ. ೭೦/-

## ಗದ್ಯಗಂಧಿಯಾದ 'ಪದ್ಯ'ಗಳ ನೆನಪಿನ ಬುತ್ತಿ




ಎಂ.ಆರ್.ಕಮಲ ಅವರ 'ಗದ್ಯಗಂಧಿ' ಜೋರಾಗಿ ಓದುತ್ತಿದ್ದೆ. ಕೇಳಿಸಿಕೊಳ್ಳುತ್ತಿದ್ದ ಗೆಳತಿ ಖುಷಿಗೊಂಡಳು, ಪುಸ್ತಕದ ಕಡೆ ಕಣ್ಣು ಹಾಯಿಸಿದಳು. ಅರೆ, ನೀನು ಇದುವರೆಗೂ ಓದಿದ್ದು ಪದ್ಯ ಅಲ್ವಾ, ಇದು ನೋಡಿದರೆ ಗದ್ಯ ಎಂದು ಅಚ್ಚರಿಪಟ್ಟಳು. ಇದೇ ಗದ್ಯಗಂಧಿಯ ವಿಶೇಷತೆ. ಕಮಲ ಈಗಾಗಲೇ ತಮ್ಮ ಸೂಕ್ಷ್ಮ ಸಂವೇದನೆಯುಳ್ಳ ಅನೇಕ ಕವಿತೆಗಳ ಮೂಲಕ, ಅನುವಾದ ಕವಿತೆಗಳ ಮೂಲಕ ಕನ್ನಡ ಸಾಹಿತ್ಯದಲ್ಲಿ ತಮ್ಮದೇ ಛಾಪು ಮೂಡಿಸಿರುವ ಅಪ್ತ ಬರಹದ ಭರವಸೆಯ ಕವಯಿತ್ರಿ, ಈ ಕೃತಿಯಲ್ಲಿ ಒಂದು ವಿನೂತನ ಶೈಲಿಯ ಪ್ರಯೋಗ ಮಾಡಿದ್ದಾರೆ. ಹಿನ್ನುಡಿಯಲ್ಲಿ ತಿಳಿಸಿರುವಂತೆ "ನೆನಪು , ಕನಸು ಮತ್ತು ಕನವರಿಕೆಗಳ" ಹದನಾದ ಸಂಯೋಗ ಇಲ್ಲಿದೆ. " ವಿಶಿಷ್ಟ ಕಾವ್ಯ ಗುಣವುಳ್ಳ ಕಥಾ ನಿರೂಪಣೆ" ಎಂಬುದು ಗದ್ಯದ ವ್ಯಾಖ್ಯೆ. ಆಖ್ಯಾಯಿಕೆ ಮತ್ತು ಕತೆ ಎಂಬ ಪ್ರಭೇಧಗಳನ್ನು ಗದ್ಯದಲ್ಲಿ ಗುರುತಿಸಲಾಗಿದೆ. ಅದರಲ್ಲಿ ಆಖ್ಯಾಯಿಕೆಗೆ ಕಥಾನಾಯಕನು ನಿರೂಪಕನೂ ಆಗಿರುತ್ತಾನೆ. ವರ್ಡ್ಸ್‌ವರ್ತ್ ಛಂದೋಬದ್ಧ ರಚನೆಗಳ ಭಾಷೆಗೂ ಗದ್ಯ ಭಾಷೆಗೂ ಯಾವುದೇ ಮೂಲಭೂತ ವ್ಯತ್ಯಾಸ ಇಲ್ಲ ಎಂದೂ, ತೀವ್ರ ಭಾವಗಳ ಸ್ವಚ್ಛಂದ ಪ್ರವಾಹ ಎಂದೂ ಕಾವ್ಯ ಭಾಷೆಯನ್ನು ಕುರಿತು ಹೇಳಿದ್ದಾನೆ. ಆಯಾ ಕಾಲದ ಸಂಪ್ರದಾಯಗಳಿಗನುಗುಣವಾಗಿ ಕವಿಗಳು ಭಾಷೆಯ ವಿಚಾರದಲ್ಲಿ ಹೆಚ್ಚು ಅಥವಾ ಕಡಿಮೆ ಸ್ವಾತಂತ್ರ್ಯ ವಹಿಸಿದ್ದಾರೆ. ಕಾವ್ಯ, ಪರಿಣಾಮ ಬೀರುವುದರಲ್ಲಿ ಯಶಸ್ವಿಯಾಯಿತೇ ಎಂಬುದಷ್ಟೇ ಈ ಸ್ವಾತಂತ್ರ್ಯದ ಸಮರ್ಥನೆಗೆ ಆಧಾರ ಎಂಬೆಲ್ಲ ಸಂಗತಿಗಳನ್ನು ಗಮನಿಸಿದಾಗ ಗದ್ಯ ಗಂಧಿಗೆ ಹೆಚ್ಚು ಪುಷ್ಟಿ ಸಿಗುತ್ತದೆ. ಬಾಲ್ಯದಲ್ಲಿ ತೀವ್ರವಾಗಿ ಅನುಭವಿಸುವ ಮತ್ತದು ಈಗಲೂ ಕವಯಿತ್ರಿಯೊಳಗೆ ದೊಡ್ಡದಾಗಿ ಬೆಳೆಯುತ್ತಿರುವ ಮೇಟಿಕುರ್ಕೆ ಎಂಬ ಹಳ್ಳಿ ನೆನಪುಗಳ ಅಭಿವ್ಯಕ್ತಿಗೆ ದಾರಿಯಾಗಿದೆ.

ಇದೊಂದು ನೆನಪಿನ ಸಾಲು ದೀಪ 'ಆತ್ಮಚರಿತ್ರೆ'ಯೂ ಆಗಬಹುದಾದ ವಿವರಗಳು ಇಲ್ಲಿವೆ. ಬಾಲ್ಯದ ತೀವ್ರ ನೆನಪೇ ಈ ಕವನಗಳ ಮೂಲ. ತರತರಹದ ಹೂಗಳನ್ನು ಕಟ್ಟುತ್ತಾ ಹಾರ ಕಟ್ಟುವ ಕ್ರಿಯೆ. ಕವಯಿತ್ರಿಯ ಬಾಲ್ಯದ ಅನುಭವ ಓದುತ್ತಾ ಹೋದಂತೆ ಓದುಗರಲ್ಲು ನೆನಪಿನ ಅಲೆಯೆಬ್ಬಿಸುತ್ತದೆ.

**ಕಾಲಕ್ಕೆ ಉಸಿರುಗಟ್ಟಿದೆ, ಋತುಮಾನಗಳು ಆಯಾಸದಿಂದ ರೆಪ್ಪೆ ಮುಚ್ಚಿವೆ ಸಂಬಂಧಗಳ ಸೀರೆ ಎಳೆ ಬಿಚ್ಚಿಕೊಳ್ಳುತ್ತಿದೆ** ಎಂದು ಹೇಳುವ ಸಾಲುಗಳಲ್ಲಿ ಪಲ್ಲಟಗೊಂಡ ಆಧುನಿಕ ಬದುಕಿನ ವಾಸ್ತವವನ್ನು ತೆರೆದಿಡಲಾಗಿದೆ, ಈ ಸಾಲುಗಳನ್ನು ನೋಡಿದರೆ 'ಗದ್ಯ' ಕೇಳಿದರೆ ಪದ್ಯವಾಗಿ ಖುಶಿ ಕೊಡುತ್ತದೆ.

ಕವಯಿತ್ರಿಗೆ ತೆಂಗಿನ ಗರಿಯೊಂದೇ ಸಾಕು ನೆನಪುಗಳ ಗರಿ ಬಿಚ್ಚಲು. ನಗರದ ಗಡಿಬಿಡಿ, ಸದ್ದುಗದ್ದಲದ ಮಧ್ಯೆ ವಲಸೆಗರಿ ಬಂದು ಬಾಲ್ಯದ ನೆನಪುಗಳ ಗರಿ ಕೆದರಿಬಿಡುತ್ತದೆ. ಗರಿ, ಕನ್ನಡಕ, ವಾಚು, ಪೊರಕೆ, ಪೀಪಿಯಾಗಿ ಕೊನೆಗೆ ಹೆಣೆದ ಚಾಪೆಯಾಗಿ ಬಿಡುತ್ತದೆ. ಹೀಗೆ ಈ ಭಾವಲಹರಿ ಹರಿದಾಡುತ್ತದೆ,

**ಕಲ್ಲುಗಳಲ್ಲಿ ಕೆತ್ತನೆಯನ್ನು ಅರಸುವ, ಒಡೆದ ಬಳೆ ಚೂರುಗಳಲ್ಲಿ ನೋವಿನ ದನಿಯೊಂದಿಗೆ ಪ್ರೀತಿಯ ಅಪ್ಪುಗೆಯಿಂದಲೂ ಒಡೆದ ಬಳೆ ಚೂರಾಗಿರಬಹುದು** ಎಂಬ ಜೀವನ ಪ್ರೀತಿಯನ್ನು ಕವಯಿತ್ರಿಯ ಮನಸ್ಸು ಅರಸುತ್ತದೆ.

ಕುರುಡು ಅಜ್ಜಿ ಕೈಯಲ್ಲಿ ಮುಟ್ಟಿಯೇ ಗುರುತು ಹಚ್ಚುವ ರೀತಿ ಕವಯಿತ್ರಿಗೆ ಇನ್ನೊಬ್ಬರನ್ನು ಅರ್ಥ ಮಾಡಿಕೊಳ್ಳಲು ಒಳ ಮನಸ್ಸು ಸಾಕೆಂಬ ದರ್ಶನ ನೀಡುತ್ತದೆ. **ಹೊರಗಿನ ಹೂಗಳು ಒಳಗಿವೆಯೇ, ಒಳಗಿನ ಹೂಗಳು ಹೊರಗಿವೆಯೋ** ಎಂದು ಕೇಳಿಕೊಳ್ಳುತ್ತಾರೆ,

ಇಲ್ಲಿರುವ ಹೆಚ್ಚಿನ ಕವಿತೆಗಳು ಓದಿನ ಸುಖವನ್ನು ನೀಡುತ್ತವೆ. ಓದುಗರನ್ನು ನೆನಪುಗಳಲ್ಲಿ ಮೀಯಿಸುತ್ತವೆ.
ಪ್ರತಿಯೊಂದು ಪದ್ಯಕ್ಕೂ ಶೀರ್ಷಿಕೆ ಇದ್ದಿದ್ದರೆ ಗದ್ಯಗಂಧಿಯ ಗಮಲು ನಮ್ಮೊಳಗೂ ಇಳಿಯಲು ಸಹಾಯಕವಾಗುತ್ತಿತ್ತು.

**–ಮಂಜುಳಾ ಎಂ. ರಾಜು**



**'ಹೊಸ ಮನುಷ್ಯ'ಕ್ಕೆ ಚಂದಾದಾರಾಗಲು :**

ಪತ್ರಿಕೆಯು, ಶಿವಮೊಗ್ಗದ ವಿನೋಬ ನಗರದಲ್ಲಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ' ಗೀತಾಕೃಪಾ ಶಾಖೆಯಲ್ಲಿ (**IFSC code: SBIN 0040444**) ಸಂಪಾದಕರು, ಹೊಸ ಮನುಷ್ಯ ಎಂಬ ಹೆಸರಿನಲ್ಲಿ 64110358330 ಈ ಸಂಖ್ಯೆಯಲ್ಲಿ ಚಾಲ್ತಿ ಖಾತೆ ಹೊಂದಿದ್ದು ಚಂದಾದಾರರಾಗಬಯಸುವವರು ಈ ಖಾತೆಗೆ 200 ರೂ, ಗಳ ಚಂದಾ ತುಂಬಿ 9449242284 ಮೊಬೈಲ್‌ಗೆ ತಮ್ಮ ವಿಳಾಸದ ಜೊತೆಗೆ ಈ ಬಗ್ಗೆ ಮಾಹಿತಿ ನೀಡಿ 2020ರ ಅಕ್ಟೋ. ನಿಂದ 2021ರ ಸೆಪ್ಟಂಬರ್‌ವರೆಗಿನ ಸಂಚಿಕೆಗಳನ್ನು ಪಡೆಯಬಹುದು–ಸಂ.

'ಹೊಸ ಮನುಷ್ಯ'ದ ಓದುಗರೆಲ್ಲರಿಗೂ
ರಾಜ್ಯೋತ್ಸವದ ಶುಭಾಶಯಗಳು




ಎಂ.ಜಿ. ಈಶ್ವರಪ್ಪ
ಮತ್ತು ಕುಟುಂಬ
ದಾವಣಗೆರೆ

'ಹೊಸ ಮನುಷ್ಯ'ದ ಓದುಗರೆಲ್ಲರಿಗೂ
ದೀಪಾವಳಿ ಶುಭಾಶಯಗಳು




ಲೋಕೇಶ ಅಗಸನಕಟ್ಟೆ
ಮತ್ತು ಕುಟುಂಬ
ಚಿತ್ರದುರ್ಗ

'ಹೊಸ ಮನುಷ್ಯ'ದ ಓದುಗರೆಲ್ಲರಿಗೂ
ದೀಪಾವಳಿ ಶುಭಾಶಯಗಳು



**ಎಚ್.ಎಂ. ಶಿವಾನಂದ**
**ಮತ್ತು ಕುಟುಂಬ**
ಹಂಸಗಾರು (ಸಾಗರ)

## ತಿಂಗಳ ಕೊನೆಯ ಸಾಲುಗಳು



ತಾನು ತಾನಾಗಿದ್ದ ದಿವಸಗಳಲ್ಲಿ
ಮುಖದಲ್ಲಿ ನೆಮ್ಮದಿ ನೆಲೆಸಿತ್ತು
ಬೆಟ್ಟಗಳ ಮೇಲೆ ಹಾದಿಗಳಿರಲಿಲ್ಲ
ಸರದಾಟದಲ್ಲೊಂದು ನಿಶ್ಯಬ್ದವಿತ್ತು
ದೋಣಿಗಳಿರಲಿಲ್ಲ, ಸೇತುವೆಗಳಿರಲಿಲ್ಲ
ಪಶು ಪಕ್ಷಿ ವೃಕ್ಷ ಪೊದೆಗಳು ವೃದ್ಧಿಸಿದವು
ಕರಡಿ ನವಿಲುಗಳ ಕೈ ಹಿಡಿದು ನಡೆಸಬಹುದಿತ್ತು
ಪರಿವಾಳದ ಗೂಡೊಳಗಿಣುಕಿ ನೋಡಬಹುದಿತ್ತು
ಹಗಲೆಷ್ಟು ಹೊಳಪಾಗಿತ್ತು ಇರುಳೆಷ್ಟು ಕಪ್ಪಾಗಿತ್ತು!

–ಲಾವೋತ್ಸೆ (ಚೀನಾದ ದಾರ್ಶನಿಕ ಕವಿ)

**ಶುಭಾಶಯಗಳೊಂದಿಗೆ,**

**ಆರ್. ಉಮೇಶ್** ಅಂಡ್ ಅಸೋಸಿಯೇಟ್ಸ್
ಲೆಕ್ಕಪರಿಶೋಧಕರು, ಮೈಸೂರು
ಸಂಪರ್ಕ: ೯೪೪೮೦೮೪೭೯೩

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper RNI No. KARKAN/2012/47568**
**Rgd No. KA/SK/SMG-1209/2019-21**

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204( Karnataka)